28 February 2026 Saturday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಬೇರೆಯವರಿಗೆ ನಾವು ಮೋಸ ಮಾಡಬಾರದು ಎನ್ನುವುದು ಎಷ್ಟು ಸತ್ಯವೋ, ಅಷ್ಟೇ ಸತ್ಯ ನಾವು ಯಾರಿಂದಲೂ ಮೋಸ ಹೋಗಬಾರದು!

-ಸ್ನೇಹಾ ಆನಂದ್

info.varthaman@gmail.com


5.82 ಕೋಟಿ ವೆಚ್ಚದ ಕಾಮಗಾರಿಗೆ ಶಾಸಕರಿಂದ ಗುದ್ದಲಿಪೂಜೆ — ಪುಟ ಸಂ. 2


ಕುವೆಂಪು ಆಶಯದ ವೈಚಾರಿಕತೆಗೆ ಬೆಳಕು ನೀಡಿದ ಡಾ.ಜಿ.ಎಸ್.ಎಸ್. — ಪುಟ ಸಂ. 3


ಉಸ್ತುವಾರಿ ಕಾರ್ಯದರ್ಶಿ ವಿನೋತ್ ಪ್ರಿಯಾ ಭೇಟಿ: ಪರಿಶೀಲನೆ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್
VARTHAMAN Volume: 69 Issue: 110 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# ಮುಖ್ಯಮಂತ್ರಿ ಕುರ್ಚಿ ಕದನ ತೀವ್ರ

## ಡಿಕೆಶಿ ಬಣದ 'ಡಿನ್ನರ್ ಪಾಲಿಟಿಕ್ಸ್': ಗೊಂದಲ ಪರಿಹಾರಕ್ಕೆ ಒತ್ತಡ



**ಬೆಂಗಳೂರು:** ರಾಜ್ಯ ಕಾಂಗ್ರೆಸ್ ನಲ್ಲಿ ಮುಖ್ಯಮಂತ್ರಿ ಕುರ್ಚಿ ಕದನ ತೀವ್ರಗೊಂಡಿದೆ. ಮಾಗಡಿ ಕ್ಷೇತ್ರದ ಶಾಸಕ ಎಚ್.ಸಿ ಬಾಲಕೃಷ್ಣ ಹುಟ್ಟುಹಬ್ಬದ ಅಂಗವಾಗಿ ಡಿಸಿಎಂ ಡಿ.ಕೆ ಶಿವಕುಮಾರ್ ಬೆಂಬಲಿಗ 40ಕ್ಕೂ ಹೆಚ್ಚು ಶಾಸಕರು ಬೆಂಗಳೂರಿನ ಖಾಸಗಿ ಹೊಟೇಲ್‌ನಲ್ಲಿ ಔತಣಕೂಟ ನಡೆಸಿದ್ದಾರೆ. ಈ ಮೂಲಕ ತಮ್ಮ ಒಗ್ಗಟ್ಟು ಮತ್ತು ಶಕ್ತಿಪ್ರದರ್ಶನ ನಡೆಸಿದ್ದಾರೆ ಎನ್ನಲಾಗಿದೆ.

ಈ ಬಗ್ಗೆ ಶಾಸಕ ಬಾಲಕೃಷ್ಣ ಶುಕ್ರವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿ, ನನ್ನ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ನಾವೆಲ್ಲಾ ಗೆಳೆಯರು ಒಟ್ಟಿಗೆ ಸೇರಿದ್ದೆವು. ಸಮಾನ ಮನಸ್ಕ ಶಾಸಕರು ಸುಮಾರು 40 ಮಂದಿ ಗೆಟ್ ಟುಗೆದರ್ ಮಾಡಿದೆವು.

ಹೈಕಮಾಂಡ್ ಮಧ್ಯ ಪ್ರವೇಶಿಸಿ ಅಧಿಕಾರ ಹಸ್ತಾಂತರ ಗೊಂದಲಕ್ಕೆ ತೆರೆ ಎಳೆಯಲೇಬೇಕು, ಇಲ್ಲದಿದ್ದರೆ ಪಕ್ಷಕ್ಕೆ ಡ್ಯಾಮೇಜ್ ಆಗತ್ತದೆ. ಯಾರನ್ನು ಸಿಎಂ ಮಾಡುತ್ತಾರೆ ಎಂಬುದಲ್ಲ, ಈ ಗೊಂದಲ ನಿವಾರಣೆಯಾಗಬೇಕೆಂಬುದು ನಮ್ಮೆಲ್ಲರ ಒತ್ತಾಸೆಯಾಗಿದೆ ಎಂದು ಹೇಳಿದರು.

ನಾವೆಲ್ಲಾ ಸೇರಿ ಕಾಂಗ್ರೆಸ್ ಪಕ್ಷದ ಭವಿಷ್ಯ, 2028ರ ಚುನಾವಣೆ ಬಗ್ಗೆ ಚರ್ಚೆ ಮಾಡಿದ್ದೇವೆ. ಕರ್ನಾಟಕ ಕಾಂಗ್ರೆಸ್ ನಲ್ಲಿ ಸಿಎಂ ಬದಲಾವಣೆ ಪದೇ ಪದೇ ಚರ್ಚೆಗೆ ಬರುತ್ತಿರುತ್ತದೆ. ಜನರಲ್ಲಿ ಗೊಂದಲ ಮೂಡುತ್ತದೆ. ಇದೇ ಪರಿಸ್ಥಿತಿ ಮುಂದುವರಿದರೆ ಮುಂದೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ಕಷ್ಟ. ಹೈಕಮಾಂಡ್ ಇದಕ್ಕೆ ಅಂತಿಮವಾದ ರೂಪವನ್ನು ಎಳೆಯಬೇಕೆಂದು ಒತ್ತಾಯ ಮಾಡಲು ತೀರ್ಮಾನ ಪುಟ 2ಕ್ಕೆ

### ಡಿನ್ನರ್ ಮೀಟಿಂಗ್ ಹೊಸದಲ್ಲ

**ಬೆಂಗಳೂರು:** ಶಾಸಕರ ಡಿನ್ನರ್ ಮೀಟಿಂಗ್ ಹೊಸದೇನು ಅಲ್ಲ. ನಾಯಕತ್ವ ಬದಲಾವಣೆ ಬಗ್ಗೆ ಹೈಕಮಾಂಡ್ ತೀರ್ಮಾನ ಮಾಡುತ್ತದೆ ಎಂದು ಕಾಂಗ್ರೆಸ್ ಶಾಸಕ ಅಜಯ್ ಸಿಂಗ್ ತಿಳಿಸಿದರು.



ಡಿಕೆಶಿ ಬಣದ ಶಾಸಕರು ಡಿನ್ನರ್ ಮೀಟಿಂಗ್ ನಡೆಸಿರುವ ವಿಚಾರಕ್ಕೆ ಪ್ರತಿಕ್ರಿಯೆ ನೀಡಿದ ಅವರು, ನಾವು ಡಿನ್ನರ್ ಮೀಟಿಂಗ್ ಮಾಡ್ತೀವಿ. ಮೊದಲಿನಿಂದಲೂ ಇದು ನಡೆದುಕೊಂಡು ಬಂದಿದೆ ಶಾಸಕ ಬಾಲಕೃಷ್ಣ ಪುಟ 2ಕ್ಕೆ

### 2028ಕ್ಕೂ ಅಧಿಕಾರ ಬೇಕೆಂದರೆ
#### ಸಿಎಂ ಕುರ್ಚಿ ಗೊಂದಲ ಬಗೆಹರಿಸಿ



**ಮಂಡ್ಯ:** ಕಾಂಗ್ರೆಸ್ 2028ಕ್ಕೂ ಅಧಿಕಾರಕ್ಕೆ ಬರಬೇಕು ಎಂದರೆ ಹೈಕಮಾಂಡ್ ಮಧ್ಯಪ್ರವೇಶಿಸಿ ಕುರ್ಚಿ ಗೊಂದಲ ಬಗೆಹರಿಸಬೇಕು ಎಂದು ಕಾಂಗ್ರೆಸ್ ಶಾಸಕ ಗಣಿಗ ರವಿಕುಮಾರ್ ಆಗ್ರಹಿಸಿದರು.

ಡಿಕೆಸಿ ಬೆಂಬಲಿಗ ಶಾಸಕರ ಡಿನ್ನರ್ ಮೀಟಿಂಗ್ ವಿಚಾರಕ್ಕೆ ಸಂಬಂಧಿಸಿದಂತೆ ಮಂಡ್ಯದಲ್ಲಿ ಶುಕ್ರವಾರ ಪ್ರತಿಕ್ರಿಯೆ ನೀಡಿದ ಅವರು, ಅಧಿಕಾರ ಹಂಚಿಕೆ ಪುಟ 2ಕ್ಕೆ

### ಶಕ್ತಿ ಪ್ರದರ್ಶನ ಅಲ್ಲ: ಡಿಕೆಶಿ

**ಬೆಂಗಳೂರು:** ತಮ್ಮ ಬೆಂಬಲಿಗ ಶಾಸಕರು ಡಿನ್ನರ್ ಸಭೆ ಮಾಡಿರುವುದನ್ನು ಡಿಸಿಎಂ ಡಿ.ಕೆ.ಶಿವಕುಮಾರ್‌ಪರೋಕ್ಷವಾಗಿ ಸಮರ್ಥನೆ ಮಾಡಿಕೊಂಡಿದ್ದಾರೆ.

ನಗರದಲ್ಲಿ ತಮ್ಮ ಬೆಂಬಲಿಗ ಶಾಸಕರ ಡಿನ್ನರ್ ಮೀಟಿಂಗ್ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಇದು ಯಾರದ್ದೇ ಶಕ್ತಿ ಪ್ರದರ್ಶನ ಅಲ್ಲ. ಕೆಲವರು ರೆಸ್ಟ್ ತಗೊಳ್ಳೋಕೆ, ಎಜುಕೇಶನ್ ಮಾಡೋಕೆ ಫಾರಿನ್ ಗೆ ಹೋಗ್ತಾರೆ. ಕೆಲವರು ಊಟ ಮಾಡ್ತಾರೆ. ಕೆಲವರು ಡೆಲ್ಲಿಗೆ ಹೋಗ್ತಾರೆ. ಕೆಲವರು ಎಲ್ಲೆಲ್ಲೋ ಹೋಗ್ತಾರೆ. ಅವರ ಪರ್ಸನಲ್ ವಿಷಯಕ್ಕೂ ಪಕ್ಷಕ್ಕೂ ಸಂಬಂಧವಿಲ್ಲ ಎಂದು ಹೇಳಿದರು.

ಡಿ.ಕೆ.ಶಿವಕುಮಾರ್ ಸಿಎಂ ಆಗಬೇಕು ಎಂದು ಶಾಸಕರು ಮಾತಾಡಿದ್ದಾರೆ ಎಂಬ ವಿಚಾರಕ್ಕೆ ಕೆಲವರು ಏನೇನೋ ಆಸೆ ಇಟ್ಟುಕೊಂಡಿರ್ತಾರೆ. ಏನ್ ಮಾಡ್ತೀರಾ ಎಲ್ಲರೂ ಹೊಸಬರು ಅಲ್ಲವೇ? ಮಂತ್ರಿಗಳು ಆಗಬೇಕೆಂದು ಆಸೆಯಲ್ಲಿ ಇರ್ತಾರೆ. ನಾವೆಲ್ಲ ಓಲ್ಡ್ ಆಗೋದ್ವಿ. ನಾನು, ಪರಮೇಶ್ವರ್, ಎಂ.ಬಿ.ಪಾಟೀಲ್ ನಾವೆಲ್ಲರೂ ಚಿಕ್ಕ ವಯಸ್ಸಿನಲ್ಲೇ ಮಂತ್ರಿ ಆದವರು. ಮಹದೇವಪ್ಪ, ಸಿದ್ದರಾಮಯ್ಯ ಕೂಡಾ. ಹೊಸಬರು ಆಸೆ ಪಡ್ತಾರೆ. ನೀವು ಮಾತ್ರ ಆಗ ಮಂತ್ರಿ ಆಗಿದ್ದೀರಿ ನಮ್ಮನ್ನು ಮಂತ್ರಿ ಮಾಡಿಸಿ ಅಂತ ಹೇಳ್ತಾರೆ. ಪುಟ 2ಕ್ಕೆ

## ಸಿದ್ದು 5 ವರ್ಷ ಕುರ್ಚಿ ಬಿಡಲ್ಲ: ಡಿಕೆಶಿ ಪರ ಅಶೋಕ್ ಬ್ಯಾಟಿಂಗ್



**ಮೈಸೂರು:** ಸಿದ್ದರಾಮಯ್ಯ ಐದು ವರ್ಷದವರೆಗೂ ಸಿಎಂ ಕುರ್ಚಿ ಬಿಡುವುದಿಲ್ಲ. ಕುರ್ಚಿಗೆ ಫೆವಿಕಲ್ ಹಾಕಿ ಅಂಟಿಸಿಕೊಳ್ಳುವ ವಿದ್ಯೆ ಸಿದ್ದರಾಮಯ್ಯ ಅವರಿಗೆ ಚೆನ್ನಾಗಿ ಗೊತ್ತಿದೆ. ಡಿ.ಕೆ.ಶಿವಕುಮಾರ್‌ಗೆ ಇದೆಲ್ಲವೂ ಗೊತ್ತಿಲ್ಲ. ಹೊಡೆದು ಕಿತ್ತುಕೊಳ್ಳುವ ಕಾಲ ಇದಲ್ಲ, ತಲೆ ಬಳಸಬೇಕಾದ ಕಾಲವಿದು ಎಂದು ವಿಪಕ್ಷ ನಾಯಕ ಆರ್. ಅಶೋಕ್ ಲೇವಡಿ ಮಾಡಿದರು.

ನಗರದಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ದೇವಸ್ಥಾನಗಳನ್ನು ಸುತ್ತುತ್ತಿರುವ ಡಿ.ಕೆ.ಶಿವಕುಮಾರ್ ನಾಮದ ಮೇಲೆ ನಾಮ ಹಾಕಿಕೊಳ್ಳುತ್ತಿದ್ದಾರೆ. ಒಪ್ಪಂದ ಆಗಿದೆ ಎನ್ನುತ್ತಿದ್ದಾರೆ. ಆದರೆ, ಸಿದ್ದರಾಮಯ್ಯ ಆ ಬಗ್ಗೆ ಒಮ್ಮೆಯೂ ಹೇಳಿಯೇ ಇಲ್ಲ. ಒಪ್ಪಂದ ಆಗಿದೆಯೋ ಇಲ್ಲವೋ ತಿಳಿಸಿಬಿಡಿ. ಕಿತ್ತಾಡುತ್ತಾ ಗೊಂದಲ ಸೃಷ್ಟಿಸುತ್ತಿದ್ದೀರೇಕೆ? ಎಂದು ಪ್ರಶ್ನಿಸಿದರು.

ಅಧಿಕಾರ ಹಸ್ತಾಂತರ ವಿಚಾರದಲ್ಲಿ ಉಂಟಾಗಿರುವ ಗೊಂದಲದ ಬಗ್ಗೆ ಇತಿಶ್ರೀ ಹಾಡುವ ಯೋಗ್ಯತೆ ಕಾಂಗ್ರೆಸ್ ಹೈಕಮಾಂಡ್‌ಗೆ ಇಲ್ಲ. ಹೀಗೆಯೇ ಮುಂದೂಡುವ ಮನಸ್ಥಿತಿಯಲ್ಲಿದೆ. ಸಿದ್ದರಾಮಯ್ಯ ಯಾವಾಗಲೂ ಸೀಟ್ ಭದ್ರಪಡಿಸಿಕೊಂಡೇ ಇರುತ್ತಾರೆ ಎಂದರು.

ರಾಜ್ಯ ಸರ್ಕಾರ ಜನರ ಪಾಲಿಗೆ ಸತ್ತು ಹೋಗಿದೆ. ಆ ಹಣವನ್ನು ಯಾರು ಯಾವ ಭಾಗದಿಂದಾದರೂ ಹೊರಲಿ, ಅದು ನಮಗೆ ಬೇಕಿಲ್ಲ. ಗ್ಯಾರಂಟಿ ಹೊರೆ ಆಗುತ್ತಿದೆ ಎಂದು ಈಗ ಹೇಳುತ್ತಿರುವ ಅವರಿಗೆ ಆಗ ಜ್ಞಾನವಿರಲಿಲ್ಲವೇ? ಗ್ಯಾರಂಟಿ ಕಿತ್ತು ಹಾಕಲು ನಡೆಸುತ್ತಿರುವ ಹುನ್ನಾರವಿದು. ಯುವನಿಧಿ ಈಗಾಗಲೇ ಗೋವಿಂದ ಆಗಿ ಹೋಗಿದೆ. ಬಸ್‌ಗಳೆಲ್ಲಾ ನಿಂತು ಹೋಗುತ್ತಿವೆ ಎಂದು ದೂರಿದರು.

## ಕಾರು ಅಪಘಾತ: ಮೂವರು ಸಾವು



**ಚಿತ್ರದುರ್ಗ:** ನಿಂತಿದ್ದ ಲಾರಿಗೆ ಹಿಂದಿನಿಂದ ಕಾರು ಡಿಕ್ಕಿಯಾಗಿ ತುಮಕೂರು ಜಿಲ್ಲೆಯ ಮೂವರು ವನ್ನಪ್ಪಿದ ಘಟನೆ ಚಳ್ಳಕೆರೆ ತಾಲೂಕಿನ ಹಿರೆಹಳ್ಳಿ ಬಳಿ ನಡೆದಿದೆ.

ಗುಬ್ಬಿ ತಾಲೂಕಿನ ಹೊಸಕೆರೆ ಗ್ರಾಮದ ನರಸಿಂಹ ಮೂರ್ತಿ (38), ಕುಣಿಗಲ್‌ನ ಗಂಗಾಧರ್ (35), ಲೋಹಿತ್ (40) ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಇನ್ನು ಡಿಕ್ಕಿಯ ರಭಸಕ್ಕೆ ಕಾರಿನ ಚಾಲಕನ ಪುಟ 2ಕ್ಕೆ

## ಸುಬ್ಬಾರೆಡ್ಡಿ ಶಾಸಕ ಸ್ಥಾನ ಅಸಿಂಧು ಆದೇಶಕ್ಕೆ ಸುಪ್ರೀಂ ಕೋರ್ಟ್ ತಡೆ




**ಬೆಂಗಳೂರು:** ಬಾಗೇಪಲ್ಲಿ ಕಾಂಗ್ರೆಸ್ ಶಾಸಕ ಸುಬ್ಬಾರೆಡ್ಡಿ ಶಾಸಕ ಸ್ಥಾನವನ್ನು ಅಸಿಂಧುಗೊಳಿಸಿದ್ದ ಹೈಕೋರ್ಟ್ ಆದೇಶಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆಯಾಜ್ಞೆ ನೀಡಿದೆ.


ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸುಬ್ಬಾರೆಡ್ಡಿ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು. ವಿಚಾರಣೆ ನಡೆಸಿದ ಸಿಜೆಐ ಸೂರ್ಯಕಾಂತ್ ನೇತೃತ್ವದ ಪೀಠವು ಹೈಕೋರ್ಟ್ ನೀಡಿದ್ದ ಆದೇಶಕ್ಕೆ ತಡೆ ನೀಡಿದೆ. ಸೆಪ್ಟೆಂಬರ್ 7ಕ್ಕೆ ವಿಚಾರಣೆ ಮುಂದೂಡಿದೆ. ಪ್ರತಿವಾದಿಗಳಿಗೆ ನೋಟಿಸ್ ಜಾರಿ ಮಾಡಿದೆ.

ಈ ಮಧ್ಯಂತರ ಆದೇಶದಲ್ಲಿ ಅರ್ಜಿದಾರರನ್ನು ಎಲ್ಲಾ ಪ್ರಾಯೋಗಿಕ ಉದ್ದೇಶಗಳಿಗಾಗಿ ವಿಧಾನಸಭಾ ಸದಸ್ಯರೆಂದು ಪರಿಗಣಿಸಬೇಕೆಂದು ಪೀಠ ನಿರ್ದೇಶಿಸಿದೆ. ಪ್ರತಿವಾದಿ ಬಿಜೆಪಿಯ ಪ್ರತಿಸ್ಪರ್ಧಿ ಅಭ್ಯರ್ಥಿ ಸಿ ಮುನಿರಾಜು ಅವರಿಗೆ ಅಫಿಡವಿಟ್ ಸಲ್ಲಿಸುವಂತೆ ಸೂಚಿಸಿದೆ.

ನಾಮಪತ್ರ ಸಲ್ಲಿಕೆ ವೇಳೆ ಸಂಪೂರ್ಣ ಆಸ್ತಿ ಘೋಷಣೆ ಮಾಡಿಲ್ಲ. ಕ್ರಿಮಿನಲ್ ಕೇಸ್‌ಗಳ ಮಾಹಿತಿಯನ್ನು ಮರೆಮಾಚಿದ್ದಾರೆ ಎಂದು ಬಿಜೆಪಿ ಪರಾಜಿತ ಅಭ್ಯರ್ಥಿ ಮುನಿರಾಜು ಅವರು 2023 ಜೂನ್ 24ರಂದು ಹೈಕೋರ್ಟ್ಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ವೇಳೆ ಆಸ್ತಿ ಮಾಹಿತಿಯನ್ನು ಉಲ್ಲಂಘನೆ ಮಾಡಿದ್ದು ದೃಢಪಟ್ಟ ಹಿನ್ನೆಲೆಯಲ್ಲಿ ಸುಬ್ಬಾರೆಡ್ಡಿ ಶಾಸಕ ಸ್ಥಾನವನ್ನು ಹೈಕೋರ್ಟ್ ಅಸಿಂಧುಗೊಳಿಸಿತ್ತು. ಇದು ಜನತಾ ಪ್ರಾತಿನಿಧ್ಯ ಕಾಯ್ದೆಯ ಸೆಕ್ಷನ್ 123(1)ರ ಪ್ರಕಾರ ಭ್ರಷ್ಟಾಚಾರಕ್ಕೆ ಕಾರಣವಾಗಿದೆ. ಆದರೆ, ಹೈಕೋರ್ಟ್ ಬಿಜೆಪಿ ಅಭ್ಯರ್ಥಿಯನ್ನು ವಿಜೇತ ಎಂದು ಘೋಷಿಸಲಿಲ್ಲ. ಪುಟ 2ಕ್ಕೆ

## ಸಿಎಂ ಬಗ್ಗೆ ಹೈಕಮಾಂಡ್ ತೀರ್ಮಾನ

### ಕೂಸು ಹುಟ್ಟುವ ಮುಂಚೆಯೇ ಕುಲಾವಿ ಸರಿಯಲ್ಲ: ನಿಖಿಲ್ ಹೇಳಿಕೆಗೆ ತಿರುಗೇಟು



**ಮೈಸೂರು:** ಮುಂದಿನ ಮುಖ್ಯಮಂತ್ರಿ ಯಾರು ಎಂಬ ಬಗ್ಗೆ ಬಿಜೆಪಿಯಲ್ಲಿ ಯಾವುದೇ ತೀರ್ಮಾನವೂ ಆಗಿಲ್ಲ. ಕೂಸು ಹುಟ್ಟುವ ಮುಂಚೆಯೇ ಕುಲಾವಿ ಹೊಲಿಸುವುದು ಸರಿಯಲ್ಲ. ಮೊದಲು ಒಟ್ಟಾಗಿ ಸೇರಿ ಚುನಾವಣೆ ಗೆಲ್ಲಬೇಕು ಎಂದು ವಿಪಕ್ಷ ನಾಯಕ ಆರ್.ಅಶೋಕ್ ತಿಳಿಸಿದರು.

ನಗರದಲ್ಲಿ ಶುಕ್ರವಾರ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಎಚ್.ಡಿ.ಕುಮಾರಸ್ವಾಮಿ ಮುಂದಿನ ಮುಖ್ಯಮಂತ್ರಿ ಎಂಬ ನಿಖಿಲ್ ಕುಮಾರಸ್ವಾಮಿ ಸೇರಿದಂತೆ ಜೆಡಿಎಸ್ ನಾಯಕರ ಹೇಳಿಕೆಗೆ ಪ್ರತಿಕ್ರಿಯೆ ನೀಡಿದರು. ಈಗ ದೋಸ್ತಿ ಇದೆ. ಅದು ಮುಂದುವರಿಯುತ್ತದೆ. ಆದರೆ, ಮುಖ್ಯಮಂತ್ರಿ ಸ್ಥಾನದ ಸಂಬಂಧ ಯಾವುದೇ ತೀರ್ಮಾನ ಆಗಿಲ್ಲ. ಈಗಲೇ ಆಗುವುದೂ ಇಲ್ಲ ಎಂದು ಹೇಳಿದರು.

ಅವರವರ ಪಕ್ಷದ ವಿಚಾರವನ್ನು ಅವರವರು ತೀರ್ಮಾನ ಮಾತನಾಡುತ್ತಾರೆ. ಎನ್‌ಡಿಎ ವಿಚಾರದಲ್ಲಿ, ಮುಖ್ಯಮಂತ್ರಿ ವಿಚಾರವನ್ನು ಪ್ರಧಾನಿ ನರೇಂದ್ರ ಮೋದಿ, ಪಕ್ಷದ ಅಧ್ಯಕ್ಷರು ಒಳಗೊಂಡ



ಹೈಕಮಾಂಡ್ ತೀರ್ಮಾನಿಸುತ್ತದೆ. ರಾಜ್ಯದ ಮೈತ್ರಿಗಿಂತ ಎನ್‌ಡಿಎ ಒಕ್ಕೂಟದ ನಿರ್ಧಾರ ಬಹಳ ಮುಖ್ಯವಾಗುತ್ತದೆ ಎಂದು ಹೇಳಿದರು.

ಬಿಜೆಪಿ ಶಿಸ್ತುಬದ್ಧ ಪಕ್ಷ. ನಮ್ಮಲ್ಲಿ ಮುಖ್ಯಮಂತ್ರಿ ಆಯ್ಕೆ ಹೇಗೆ ನಡೆಯುತ್ತದೆ, ಏನೆಲ್ಲಾ ಅಚ್ಚರಿಯ ಆಯ್ಕೆ ಆಗುತ್ತದೆ ಎಂಬುದನ್ನು ಎಲ್ಲರೂ ನೋಡಿದ್ದೀರಿ. ಈ ಹಂತದಲ್ಲಿ ಯಾವುದೂ ನೂರಕ್ಕೆ ನೂರರಷ್ಟು ಅಂತಿಮವಾಗಿಲ್ಲ ಎಂದು ಹೇಳಿದರು.

ಜಿಬಿಎ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ವಿಚಾರದಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಗೆ ಸಂಬಂಧಿಸಿದಂತೆ ಇನ್ನೂ ಮಾತುಕತೆ ನಡೆಯುತ್ತಿದೆ. ಇದು ಕೂಡ ಅಂತಿಮವಾಗಿಲ್ಲ. ಜಿಬಿಎ ಚುನಾವಣೆ ಮೈತ್ರಿ ಸಂಬಂಧ ನಮ್ಮ ಉಸ್ತುವಾರಿ ಜೊತೆ ಮಾತನಾಡಿದ್ದೇನೆ. ಪುಟ 2ಕ್ಕೆ

## ಶಾಸಕ ವಿನಯ್ ಕುಲಕರ್ಣಿಗೆ ಸುಪ್ರೀಂಕೋರ್ಟ್ ಬಿಗ್ ರಿಲೀಫ್



**ನವದೆಹಲಿ:** ಜಿಲ್ಲಾ ಪಂಚಾಯಿತಿ ಸದಸ್ಯ ಯೋಗೀಶ್ ಗೌಡರ್ ಕೊಲೆ ಪ್ರಕರಣದಲ್ಲಿ ಜೈಲು ಸೇರಿದ್ದ ಶಾಸಕ ವಿನಯ್ ಕುಲಕರ್ಣಿ ಅವರಿಗೆ ಸುಪ್ರೀಂ ಕೋರ್ಟ್ ಬಿಗ್ ರಿಲೀಫ್ ನೀಡಿದೆ.

ಕೊಲೆ ಪ್ರಕರಣದ ಪ್ರಮುಖ ಆರೋಪಿಯಾದ ವಿನಯ್ ಕುಲಕರ್ಣಿ ಅವರಿಗೆ ಸುಪ್ರೀಂ ಕೋರ್ಟ್ ನ್ಯಾ. ಸಂಜಯ್ ಕರೋಲ್ ನೇತೃತ್ವದ ದ್ವಿಸದಸ್ಯ ಪೀಠ ಜಾಮೀನು ಮಂಜೂರು ಮಾಡಿ ಆದೇಶ ಹೊರಡಿಸಿದೆ.


ವಿನಯ್ ಕುಲಕರ್ಣಿ ಪರ ವಾದ ಮಂಡಿಸಿದ ಹಿರಿಯ ವಕೀಲ ಸಿದಾರ್ಥ್ ಲೂಥ್ರಾ, ಸಾಕ್ಷ್ಯಗಳ ವಿಚಾರಣೆ ಮುಕ್ತಾಯಗೊಂಡಿದೆ. ಈ ಹಂತದಲ್ಲಿ ಸಾಕ್ಷ್ಯ ನಾಶವಾಗಲಿ ಅಥವಾ ಸಾಕ್ಷ್ಯಗಳ ಮೇಲೆ ಪ್ರಭಾವ ಬೀರಲು ಸಾಧ್ಯವಿಲ್ಲ. ಪ್ರಕರಣದ ಇತರೆ ಆರೋಪಿಗಳಿಗೆ ಈಗಾಗಲೇ ಜಾಮೀನು ನೀಡಲಾಗಿದೆ. ವಿನಯ್ ಕುಲಕರ್ಣಿ ಅವರಿಗೆ ಜಾಮೀನು ನೀಡಿದರೆ ಸಮಸ್ಯೆ ಇಲ್ಲ ಎಂದು ವಾದಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾ. ಸಂಜಯ್ ಕರೋಲ್, ವಿನಯ್ ಕುಲಕರ್ಣಿ ಪ್ರಕರಣ ಪ್ರಮುಖ ಆರೋಪಿ, ಆದಾಗ್ಯೂ ಸಾಕ್ಷ್ಯಗಳ ವಿಚಾರಣೆ ಮುಕ್ತಾಯವಾಗಿರುವ ಹಿನ್ನೆಲೆ ಜಾಮೀನು ನೀಡಬಹುದು ಎಂದು ಹೇಳಿದರು. ಕೋರ್ಟ್ ಜಾಮೀನು ಮಂಜೂರಿಗೆ ಆದೇಶಿಸಿತು.

ಇನ್ನೆರಡು ತಿಂಗಳಲ್ಲಿ ವಿಚಾರಣೆ ಆರಂಭಿಸಲು ವಿಚಾರಣಾ ನ್ಯಾಯಲಯಕ್ಕೆ ನಿರ್ದೇಶನ ನೀಡಿತು. ಇದಕ್ಕೆ ಸಿಬಿಐ ವಕೀಲರಿಂದ ಆಕ್ಷೇಪ ವ್ಯಕ್ತವಾಯಿತು, ಮತ್ತೊಂದು ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಭಾಗಿಯಾಗಿದ್ದಾರೆ ಹೀಗಾಗಿ ಜಾಮೀನು ನೀಡಬಾರದು ಎಂದು ವಾದಿಸಿದರು.

ಈ ವೇಳೆ ಮಧ್ಯಪ್ರವೇಶ ಮಾಡಿದ ಪೀಠ, ಪುಟ 2ಕ್ಕೆ

## ಎಚ್‌ಡಿಕೆ ಸಿಎಂ ಮಾಡುವ ಶಕ್ತಿ ನನಗಿಲ್ಲ: ಎಚ್.ಡಿ.ದೇವೇಗೌಡ

**ವಿಜಯಪುರ:** ಎಚ್.ಡಿ.ಕುಮಾರಸ್ವಾಮಿಯನ್ನು ಮತ್ತೆ ಮುಖ್ಯಮಂತ್ರಿ ಮಾಡುವುದು ನನ್ನ ಕೈಯಲ್ಲಿಲ್ಲ. ಅದೇನಿದ್ದರೂ ಪ್ರಧಾನಿ ನರೇಂದ್ರ ಮೋದಿ ಮತ್ತು ಸಚಿವ ಅಮಿತ್ ಶಾ ತೀರ್ಮಾನ ಮಾಡಬೇಕು



ಎಂದು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಅಭಿಪ್ರಾಯಪಟ್ಟರು.

ನಗರದಲ್ಲಿ ಶುಕ್ರವಾರ ಮಾತನಾಡಿದ ಅವರು, ಎನ್‌ಡಿಎಗೆ ಜೆಡಿಎಸ್ ಕೊಡುವ ಶಕ್ತಿಯನ್ನು ಗುರುತಿಸಿ, ಬಳಸಿಕೊಳ್ಳುವ ರಾಜಕೀಯ ಜಾಣ್ಮೆ, ಪ್ರಬುದ್ಧತೆ ಮೋದಿ, ಶಾ ಅವರಿಗಿದೆ. ಎನ್‌ಡಿಎ ಮತ್ತಷ್ಟು ಗಟ್ಟಿಗೊಳಿಸುವ ವಿಶ್ವಾಸವೂ ಇದೆ ಎಂದರು.

ನನಗೆ ಈಗಾಗಲೇ 93 ವರ್ಷ ವಯಸ್ಸಾಗಿದೆ. ನಾನು ಮತ್ತೆ ಮಂತ್ರಿ, ಮುಖ್ಯಮಂತ್ರಿ, ಪ್ರಧಾನಿ ಆಗುವ ಇಚ್ಛೆ ಇಲ್ಲ. ಪುಟ 2ಕ್ಕೆ

## ಉದ್ಯೋಗ ನೀಡದಿದ್ದರೆ ಪಾದಯಾತ್ರೆ



**ಮೈಸೂರು:** ರಾಜ್ಯದಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪಿಸದಿದ್ದಲ್ಲಿ ದೊಡ್ಡ ಮಟ್ಟದ ಚಳವಳಿ ನಡೆಸುತ್ತೇವೆ. ಹುಬ್ಬಳ್ಳಿಯಿಂದ ಬೆಂಗಳೂರಿನವರೆಗೆ ಪಾದಯಾತ್ರೆ ಮಾಡಬೇಕಾಗುತ್ತದೆ ಎಂದು ವಿಧಾನಸಭೆ ವಿರೋಧಪಕ್ಷ ನಾಯಕ ಆರ್.ಅಶೋಕ್ ತಿಳಿಸಿದರು.

ನಗರದಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಮ್ಮ ಹೋರಾಟದ ಕಾರಣದಿಂದಾಗಿಯೇ ಯುವ ಜನರಿಗೆ ಉದ್ಯೋಗ ಸಿಗುವಂತಾಗಿದೆ. ಧಾರವಾಡದಲ್ಲಿ ವಿದ್ಯಾರ್ಥಿಗಳ ಹೋರಾಟಕ್ಕೆ ಪೊಲೀಸರು ಆರು ತಿಂಗಳಿಂದಲೂ ಅನುಮತಿ ಕೊಟ್ಟಿರಲಿಲ್ಲ. ಪಕ್ಷದ ಲೆಟರ್‌ಹೆಡ್‌ನಲ್ಲೇ ಅನುಮತಿ ಕೇಳಿದ್ದೆವು. ಪೊಲೀಸರು ಬಿಜೆಪಿ ಹೋರಾಟ ವೆಂಬ ಕಾರಣದಿಂದಲೇ ಸಮ್ಮತಿ ಕೊಟ್ಟಿದ್ದಾರೆ ಎಂದು ಸಮರ್ಥಿಸಿಕೊಂಡರು. ಧಾರವಾಡದಲ್ಲಿ ನಡೆದ ವಿದ್ಯಾರ್ಥಿಗಳ ಹೋರಾಟ ಹಾಗೂ ನಮ್ಮ ಬೆಂಬಲದಿಂದಾಗಿ ಸರ್ಕಾರ ಪುಟ 2ಕ್ಕೆ

## ಇಂದಿನಿಂದ ಮಾ.17ರವರೆಗೆ ದ್ವಿತೀಯ ಪಿಯುಸಿ ಪರೀಕ್ಷೆ

**ಬೆಂಗಳೂರು:** ರಾಜ್ಯದಲ್ಲಿ ನಾಳೆ ಶನಿವಾರದಿಂದ ದ್ವಿತೀಯ ಪಿಯುಸಿ ಪರೀಕ್ಷೆ ಆರಂಭವಾಗಲಿದೆ. ಮಾ.17ರವರೆಗೆ ಪರೀಕ್ಷೆ ನಡೆಯಲಿದೆ. ಯಾವುದೇ ರೀತಿಯ ಅಕ್ರಮ ನಡೆಯದಂತೆ ಪರೀಕ್ಷಾ ಬೋರ್ಡ್ ಮುಂಜಾಗ್ರತೆ ವಹಿಸಿದೆ.

ರಾಜ್ಯಾದ್ಯಂತ 1,217 ಕೇಂದ್ರಗಳಲ್ಲಿ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೂ ಪರೀಕ್ಷೆ ನಡೆಯಲಿದೆ. 7,10,363 ವಿದ್ಯಾರ್ಥಿಗಳು ಪರೀಕ್ಷೆ ಬರೆಯಲಿದ್ದಾರೆ. ಪರೀಕ್ಷಾ ಕೇಂದ್ರಗಳಲ್ಲಿ ಅಕ್ರಮ ನಡೆಯದಂತೆ ಕಟ್ಟೆಚ್ಚರ ವಹಿಸಿದೆ. ಸೋಶಿಯಲ್ ಮೀಡಿಯಾದ ಮೇಲೂ ಬೋರ್ಡ್ ಕಣ್ಣಿಟ್ಟಿದೆ. ಜೊತೆಗೆ ಪೇಪರ್ ಲೀಕ್ ಆಗದಂತೆ ಮುನ್ನೆಚ್ಚರಿಕೆ ಕ್ರಮವಹಿಸಲಾಗಿದೆ. ಪ್ರಶ್ನೆಪತ್ರಿಕೆ ರವಾನೆಗೂ ಬಿಗಿ ಭದ್ರತೆ ವಹಿಸಲಾಗಿದೆ.

ಹಿಂದಿನ ಪರೀಕ್ಷೆಗಳಲ್ಲಿ ಅಕ್ರಮದಲ್ಲಿ ಭಾಗಿಯಾಗಿರೋ ವ್ಯಕ್ತಿಗಳ ಮೇಲೆ ಪೊಲೀಸ್ ಇಲಾಖೆಯಿಂದ ವಿಶೇಷ ನಿಗಾ ಇಡಲಾಗಿದೆ. ಪರೀಕ್ಷೆ ಕೇಂದ್ರಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಿದೆ. ಪುಟ 2ಕ್ಕೆ

## ಮಾಜಿ ಸಿಎಂ ಪನ್ನೀರ್ ಡಿಎಂಕೆ ಸೇರ್ಪಡೆ

### ತಮಿಳುನಾಡು ರಾಜಕೀಯದಲ್ಲಿ ಚುನಾವಣೆ ಸಂದರ್ಭದಲ್ಲಿಯೇ ಕ್ಷಿಪ್ರ ಕ್ರಾಂತಿ



**ಚೆನ್ನೈ:** ತಮಿಳುನಾಡು ರಾಜಕೀಯದಲ್ಲಿ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕ್ಷಿಪ್ರ ಕ್ರಾಂತಿ ನಡೆದಿದೆ. 3 ಬಾರಿ ತಮಿಳುನಾಡು ಸಿಎಂ ಆಗಿದ್ದ ದಿ.ಜಯಲಲಿತಾ ಮೆಚ್ಚಿನ ಶಿಷ್ಯ ಒ.ಪನ್ನೀರ್‌ಸೆಲ್ವಂ ಶುಕ್ರವಾರ ವಿರೋಧಿ ಪಾಳಯದ ಡಿಎಂಕೆ ಪಕ್ಷಕ್ಕೆ ಸೇರ್ಪಡೆಯಾಗಿದ್ದಾರೆ.

ಚೆನ್ನೈನ ಡಿಎಂಕೆ ಪ್ರಧಾನ ಕಚೇರಿಯಲ್ಲಿ ಅಧ್ಯಕ್ಷ ಎಂ.ಕೆ ಸ್ಟಾಲಿನ್ ಸಮ್ಮುಖದಲ್ಲಿ ಒ.ಪನ್ನೀರ್‌ಸೆಲ್ವಂ ಅವರನ್ನ ಪಕ್ಷಕ್ಕೆ ಸೇರಿಸಿಕೊಳ್ಳಲಾಯಿತು. ಪನ್ನೀರ್‌ಸೆಲ್ವಂ ಜೊತೆಗೆ ಎಐಎಡಿಎಂಕೆ ಹಲವರು ಡಿಎಂಕೆಗೆ ಸೇರಿದರು.

ಡಿಎಂಕೆ ಸೇರ್ಪಡೆ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಪನ್ನೀರ್‌ಸೆಲ್ವಂ, ಎಐಡಿಎಂಕೆ ನಾಯಕ ಎಡಪ್ಪಾಡಿ ಕೆ.ಪಳನಿಸ್ವಾಮಿ ಅವರನ್ನ ತೀವ್ರ ತರಾಟೆಗೆ ತೆಗೆದುಕೊಂಡರು. ಪಳನಿಸ್ವಾಮಿ ಸರ್ವಾಧಿಕಾರಿ, ದುರಹಂಕಾರಿ. ಮುಂಬರುವ ವಿಧಾನಸಭಾ

## ಆರೋಗ್ಯ ಇಲಾಖೆ ಸಿಬ್ಬಂದಿ ಮುಷ್ಕರ: ಸರ್ಕಾರದ ಕಾನೂನು ಕ್ರಮದ ಎಚ್ಚರಿಕೆ

**ಬೆಂಗಳೂರು:** ಆರೋಗ್ಯ ಇಲಾಖೆ ಸಿಬ್ಬಂದಿ ಕರ್ತವ್ಯದ ಅವಧಿಯಲ್ಲಿ ಗೈರಾಗಿ ಸಾಮೂಹಿಕ ಮುಷ್ಕರ ಕೈಗೊಂಡಲ್ಲಿ ಕಾನೂನಿನ ಕ್ರಮ ಕೈಗೊಳ್ಳುವುದಾಗಿ ಸರ್ಕಾರ ಎಚ್ಚರಿಕೆ ನೀಡಿದೆ.

ಬಡ್ತಿಯಲ್ಲಿ ವಿಳಂಬ, ಸಿಬ್ಬಂದಿ ಕೊರತೆ, ಔಷಧ ಪೂರೈಕೆ ಸಮಸ್ಯೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಆರೋಗ್ಯ ಇಲಾಖೆ ಸಿಬ್ಬಂದಿ ಮುಷ್ಕರಕ್ಕೆ ಮುಂದಾಗಿದ್ದಾರೆ. ಕರ್ನಾಟಕ ಸರ್ಕಾರಿ ವೈದ್ಯಕೀಯ ಅಧಿಕಾರಿಗಳ ಸಂಘ (ಕೆಜಿಎಎಂಎ), ಕರ್ನಾಟಕ ರಾಜ್ಯ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ನೌಕರರ ಕೇಂದ್ರ ಸಂಘ (ಕೆಎಸ್‌ಎಚ್‌ಎ) ಮತ್ತು ಇತರ ಸಿಬ್ಬಂದಿ ಸಂಸ್ಥೆಗಳು ಮಾರ್ಚ್ 11ರಿಂದ ಮುಷ್ಕರಕ್ಕೆ ಕರೆನೀಡಿವೆ.

ಹಲವು ವರ್ಷಗಳಿಂದ ಬಡ್ತಿ ಸ್ಥಗಿತಗೊಳಿಸಲಾಗಿದೆ. ಕೆಲವರು ವೃತ್ತಿ ಪ್ರಗತಿಯಿಲ್ಲದೆ ನಿವೃತ್ತರಾಗಿದ್ದಾರೆ. ಹಲವು ಹುದ್ದೆಗಳು ಖಾಲಿ ಇರುವುದರಿಂದ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ಮೇಲೆ ಹೊರೆ ಹೆಚ್ಚಾಗುವಂತೆ ಮಾಡಿದೆ. ಅಗತ್ಯ ಔಷಧಿಗಳ ಸರಬರಾಜು ಆಗುತ್ತಿಲ್ಲ. ಕೆಲವು ಆಸ್ಪತ್ರೆಗಳು ತಾತ್ಕಾಲಿಕ ನಿಧಿಯಿಂದ ಔಷಧಿ ಖರೀದಿಸುವಂತಾಗುತ್ತಿದೆ. ಅಭಿವೃದ್ಧಿ ಕಾಮಗಾರಿಗಳು ಹಾಗೂ ಬಾಕಿ ಪಾವತಿಗಳು ವಿಳಂಬವಾಗಿವೆ ಎಂದು ನೌಕರರು ತಿಳಿಸಿದ್ದಾರೆ.



ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆರೋಪಗಳನ್ನು ತಳ್ಳಿ ಹಾಕಿದೆ. ಜಿಲ್ಲಾಮಟ್ಟದ ಪರಿಶೀಲನಾ ಸಭೆಗಳಲ್ಲಿ ಔಷಧಿ ಕೊರತೆ ವರದಿಯಾಗಿಲ್ಲ ಎಂದು ಸ್ಪಷ್ಟಪಡಿಸಿದೆ. ಕೆಲವು ಪ್ರದೇಶಗಳ ಬಿಲ್ಲಿಂಗ್ ವಿಳಂಬ, ಅನುಚಿತ ಖರೀದಿ ಪದ್ಧತಿಗಳು ಮತ್ತು ಇ-ಔಷಧಿ ವ್ಯವಸ್ಥೆಯಲ್ಲಿನ ಸ್ಟಾಕ್ ವಿವರಗಳನ್ನು ನವೀಕರಿಸದಿರುವುದು ಕೊರತೆಗೆ ಕಾರಣವಾಗಿದೆ ಎಂದು ತಿಳಿಸಿದೆ.

ಸರ್ಕಾರ ಸಾವಿರಾರು ಹುದ್ದೆಗಳನ್ನು ಭರ್ತಿ ಮಾಡಲು ಮತ್ತು ಗ್ರಾಮೀಣ ಆರೋಗ್ಯ ಸೇವೆಗಳನ್ನು ಬಲಪಡಿಸಲು ನೇಮಕಾತಿ, ಹೊರಗುತ್ತಿಗೆ ಮತ್ತು ಮರು ನಿಯೋಜನೆ ಕಾರ್ಯಗಳು ಪ್ರಗತಿಯಲ್ಲಿದೆ ಎಂದು ಹೇಳಿದೆ. ಮುಷ್ಕರಕ್ಕೆ ಮುಂದಾಗಿರುವ ಸಿಬ್ಬಂದಿ ವಿರುದ್ಧ ಇಲಾಖೆ ಕಠಿಣ ಎಚ್ಚರಿಕೆ ನೀಡಿದೆ.

ಸಾಮೂಹಿಕ ಮುಷ್ಕರದಂತಹ ಕ್ರಮಗಳಿಂದ ಸಾರ್ವಜನಿಕರಿಗೆ ತೊಂದರೆ ಉಂಟಾಗಲಿದೆ. ಆದ್ದರಿಂದ ಮುಷ್ಕರದಿಂದ ಹಿಂದೆ ಸರಿದು ಕರ್ತವ್ಯ

# ಭೂತರಾಯನ ಕೆರೆಗೆ ಶಾಸಕರಿಂದ ಭಾಗಿನ ಅರ್ಪಣೆ



ಹನೂರು: ಚಿಂಚಳ್ಳಿ ಕೆರೆ ಭರ್ತಿಯಾಗಿದ್ದು ಈ ಭಾಗ ದಲ್ಲಿ ಅಂತರ್ಜಲದ ಮಟ್ಟ ಹೆಚ್ಚಾಗುತ್ತದೆ ಆ ಮೂಲಕ ಜನರಿಗೆ,ರೈತರಿಗೆ ಅನುಕೂಲ ಆಗಲಿದೆ ಎಂದು ಶಾಸಕ ಎಂ ಆರ್ ಮಂಜುನಾಥ್ ತಿಳಿಸಿದರು.

ತಾಲೂಕಿನ ಚಿಂಚಳ್ಳಿ ಗ್ರಾಮದ ಭೂತರಾಯನ ಕೆರೆ ತುಂಬಿದ ಹಿನ್ನಲೆ ಭಾಗಿನ ಅರ್ಪಿಸಿ ನಂತರ ಮಾತ ನಾಡಿದರು. ಹನೂರು ತಾಲೂಕಿನ ರಾಮನಗುಡ್ಡ ಕೆರೆ ಯಿಂದ ಚಿಂಚಳ್ಳಿ ಹಳ್ಳಕ್ಕೆ ನೀರು ಬಿಡುಗಡೆಗೊಳಿಸಿರುವು ದರಿಂದ ಚಿಂಚಳ್ಳಿ ಭೂತ ರಾಯನ ಕೆರೆ ತುಂಬಿದ್ದು ಈ ಭಾಗದ ರೈತಾಪಿ ವರ್ಗಕ್ಕೆ ಹಾಗೂ ಜಾನುವಾರುಗಳಿಗೆ ಅನುಕೂಲ ಆಗಲಿದೆ ಎಂದರು. ರೈತರ ದಶಕಗಳ ಬೇಡಿಕೆ ಈಡೇರಿಸಲು ನೀರಾವರಿ ಅಧಿಕಾರಿಗಳ ಮನವೊಲಿಸಿ ರಾಮನ ಗುಡ್ಡ ಕೆರೆಯಿಂದ ಹಳ್ಳಕ್ಕೆ ನೀರು ಹರಿಸಿರುವುದು ಈ ಭಾಗದ ರೈತರ ದಶಕಗಳ ಬೇಡಿಕೆಯಾಗಿದ್ದು ನೀರಾವರಿ ಯೋಜನೆಗಳಿಗೆ ಸದ್ಬಳಕೆ ಮಾಡಿಕೊಳ್ಳಲು ರೈತರ ಒತ್ತಾ ಯದ ಮೇರೆಗೆ ನೀರು ಬಿಡುಗಡೆಗೊಳಿಸಲಾಗಿದೆ ಎಂದರು.

**ಜನಜಾನುವಾರ ಗಳಿಗೆ ಸಂಕಷ್ಟ ತಪ್ಪಿಸಲು ನೀರು ಬಿಡುಗಡೆ**

ಮುಂಗಾರು ಮಳೆ ಕ್ಷೀಣಿಸಿರುವುದರಿಂದ ಹಿಂಗಾರು ಮಳೆ ಸಹ ಇಲ್ಲದ ಹಿನ್ನಲೆಯಲ್ಲಿ ತಾಲೂಕಿನಲ್ಲಿ ಬರದ ವಾತಾವರಣ ಉಂಟಾಗಿರುವುದರಿಂದ ರೈತರ ಸಂಕಷ್ಟ ಸಹ ಮಾದಪ್ಪನಿಗೆ ಅರಿವಾಗಿದೆ. ಹಾಗಾಗಿ ಕಾವೇರಿ ನದಿಯಿಂದ ರಾಮನಗುಡ್ಡ ಕೆರೆಗೆ ನೀರು ತುಂಬಿಸಿ ಈ ಭಾಗದ ರಾಯರ ದೊಡ್ಡಿ,ಚಿಂಚಳ್ಳಿ, ಮಣಗಳ್ಳಿ ಸೇರಿದಂತೆ ತೋಮಿಯರ್ ಪಾಳ್ಯದವರಗೆ ಸಹ ಕೆರೆಯ ನೀರು ಹಳ್ಳದಲ್ಲಿ ಹರಿದು ರೈತರ ಜಮೀನುಗಳಲ್ಲಿ ಇರುವ ಬೋರ್ವೆ ಲ್ಗಳು, ತೋಡುಬಾವಿಗಳಲ್ಲಿ ಅಂತರ್ಜಲ ವೃದ್ಧಿಯಾದರೆ ರೈತರ ತಮ್ಮ ಬದುಕನ್ನು ಸಹ ಕಟ್ಟಿಕೊಳ್ಳಲಿದ್ದಾರೆ. ಹೀಗಾಗಿ ರೈತರಿಗೆ ಬೇಕಾಗಿರುವ ನೀರಾವರಿ ಯೋಜನೆ ಹಾಗೂ ರಸ್ತೆ ವಿದ್ಯುತ್ ನೀಡಿದರೆ ರೈತರಿಗೆ ಅನುಕೂ ಲದಾಯಕವಾಗಲಿದೆ ಎಂದರು. ರಾಮಪುರದ ಬಸವಣ್ಣ ಸ್ವಾಮಿಗಳು, ಮಣಗಳ್ಳಿ ಗ್ರಾಮ ಪಂ ಮಾಜಿ ಅಧ್ಯಕ್ಷ ಸೋಮಶೇಖರ್,ಚಾಮುಲ್ ಮಾಜಿ ಅಧ್ಯಕ್ಷ ಗುರುಮ ಲ್ಲಪ್ಪ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರುಗಳಾದ ಬಾಬಣ್ಣ,ರವಿ, ಮದರ್ ಮುಜಿದ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಅಂಜುಮ್ ಪಾಷ, ಚಾಮುಲ್ ನಿರ್ದೇಶಕ ರಾದ ಉದ್ದನೂರು ಪ್ರಸಾದ್, ಜಿಕೆವಿಕೆಯ ನಿವೃತ್ತ ಪ್ರಾಧ್ಯಪಕಾರದ ನಿರಂಜನ್ ಮೂರ್ತಿ,ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕರುಗಳಾದ ಮಂಜೇಶ್ ಗೌಡ , ರಾಜುಗೌಡ, ಮುಖಂಡರುಗಳಾದ ತಿರುಪತಿ, ತಂಗವೇಲು,ಶಂಕರಪ್ಪ, ಪಳನಿಸ್ವಾಮಿ, ಚಿನ್ನವೆಂಕಟ್, ನಿಂಗಶೆಟ್ಟಿ,ಗೋಪಾಲ್ ನಾಯಕ,ಕುಲ್ಲಪ್ಪ,ಭೈರನತ್ತ ರಾಜು, ಮಣಗಳ್ಳಿ ರಾಜು,ಮಣಿ ಇನ್ನಿತರರು ಇದ್ದರು..

# ವ್ಯಕ್ತಿತ್ವ ನಿರ್ಮಾಣದಲ್ಲಿ ಅಭಿರುಚಿ ಮುಖ್ಯ

ಮೈಸೂರು: ವ್ಯಕ್ತಿತ್ವ ನಿರ್ಮಾಣದಲ್ಲಿ ನಮ್ಮ ಅಭಿರುಚಿಯ ಪಾತ್ರ ಬಹಳ ದೊಡ್ಡದು ಎಂದು ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಯೋಜನಾ ನಿರ್ದೇಶಕರಾದ ಪ್ರೊ.ಎನ್.ಎಂ.ತಳವಾರ ಹೇಳಿದರು.

ನಗರದ ಮಾನಸಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಅರಿವು ಸಂಶೋಧನಾ ವೇದಿಕೆ ಹಾಗೂ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಸಹಯೋಗದಲ್ಲಿ ಬಿ.ಎಂ.ಶ್ರೀ ಸಭಾಂಗಣದಲ್ಲಿ ಶುಕ್ರವಾರ ನಡೆದ ಡಾ.ಅನ್ನಪೂರ್ಣ ಅವರ ಎರಡು ಕೃತಿಗಳನ್ನು ಲೋಕಾರ್ಪಣೆ ಮಾಡಿ ಮಾತನಾಡಿದರು.

ರುಚಿ ಕೆಟ್ಟರೆ ಸುಧಾರಿಸಬಹುದು ಆದರೆ ಅಭಿರುಚಿ ಕೆಟ್ಟರೆ ಸುಧಾರಿಸಲು ಸಾಧ್ಯವಿಲ್ಲ. ಉಪ್ಪು ಕಡಿಮೆಯಾದರೆ ರುಚಿ ಹೆಚ್ಚಿಸಿಕೊಳ್ಳಬಹುದು ಆದರೆ ಅಭಿರುಚಿ ಕೆಟ್ಟರೆ ವ್ಯಕ್ತಿತ್ವ ಹಾಳಾಗುತ್ತದೆ. ನಮ್ಮ ಎಲ್ಲಾ ಚಟುವಟಿಕೆಗಳ ಕೇಂದ್ರ ಮೊಬೈಲ್ ಆಗಿದೆ. ಮೊಬೈಲ್ ಅನ್ನು ಹ್ಯಾಂಡ್ ಸೆಟ್ ಅನುತ್ತಾರೆ. ಹ್ಯಾಂಡ್‌ಸೆಟ್ ಕೆಟ್ಟರೆ ರೆಡಿಮಾಡಿ ಸಬಹುದು. ಆದರೆ ಮೈಂಡ್‌ಸೆಟ್ ಕೆಟ್ಟರೆ ರಿಪೇರಿ ಮಾಡಲು ಆಗುವುದಿಲ್ಲ. ನಾವೆಲ್ಲರೂ ಹ್ಯಾಂಡ್‌ಸೆಟ್ ಬಗ್ಗೆ ಯೋಚನೆ ಮಾಡುವಷ್ಟು ಮೈಂಡ್‌ಸೆಟ್ ಬಗ್ಗೆ ಯೋಚನೆ ಮಾಡುವುದಿಲ್ಲ ಎಂದರು.

ಇಂದಿಗೂ ಕೂಡ ಮುಂದುವರೆದ ಕಾಲದಲ್ಲಿ



ಬಿಕ್ಕಟ್ಟಿನ ಸ್ಥಿತಿ ಮಹಿಳೆಯಲ್ಲಿ ಇದೆ. ಪೇಟೆ ಬದುಕು ಬೇರೆ, ಹಳ್ಳಿ ಬದುಕು ಬೇರೆ. ಪೇಟೆಯಲ್ಲಿ ವಾಸ ಮಾಡುವ ಹಾಗೂ ಹಳ್ಳಿಯಲ್ಲಿ ವಾಸ ಮಾಡುವ ಮಹಿಳೆಯರ ಚಿಂತನೆಗಳು, ಆಲೋಚನೆಗಳು ಬೇರೆ. ಹಿಂದೆ ಹಳ್ಳಿಗಳಲ್ಲಿ ಬಾಲ್ಯವಿವಾಹ ಮಾಡುವಾಗ ಆಕೆಯ ಬೇಕು, ಬೇಡ, ಅವಶ್ಯಕತೆಗಳನ್ನು ಕೇಳುವ ಮನಸ್ಥಿತಿ ಇರಲಿಲ್ಲ. ಈಗ ಕಾಲ ಬದಲಾಗಿದೆ. ಅಂತಹ ವಿಷಮ ವಾತವರಣ ದೂರವಾಗಿದೆ ಎಂದರು. ಡಾ.ಅನ್ನಪೂರ್ಣ ಅವರ ಅಮ್ಮನ ಹೆಬ್ಬರಳು ಮತ್ತು ಕೊರಡು ಕೊನರುವುದೇನಯ್ಯ ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ, ಕನ್ನಡ ಮತ್ತು ಸಂಶೋಧನಾ ವಿಭಾಗದ ಪ್ರೊ.ಕವಿತಾ ರೈ, ನಿಂಗರಾಜು ಚಿತ್ತಣ್ಣನವರ್ ಸೇರಿ ಇತರರಿದ್ದರು.

ಮೊದಲ ಪುಟದಿಂದ

## ಸಿಎಂ ಮಾಡುವ ಶಕ್ತಿ ನನಗಿಲ್ಲ:

ಈ ಶರೀರದಿಂದ ಆತ್ಮ ಹೊರ ಹೋಗುವ ಮುನ್ನಾ ರಾಜ್ಯದಲ್ಲಿ ಯೋಗ್ಯ ಆಡಳಿತ ಕೊಡುವ ಸರ್ಕಾರ ಬರಲಿದೆ. ಅದನ್ನು ಮೋದಿ ಮಾಡಲಿದ್ದಾರೆ. ನನ್ನ ರಾಜಕೀಯ ಜೀವನದಲ್ಲಿ ಇಂತಹ ಕೆಟ್ಟ ಆಡಳಿತ ಕೊಟ್ಟ ರಾಜ್ಯ ಸರ್ಕಾರವನ್ನು ನೋಡಿಲ್ಲ ಎಂದು ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಮೈಸೂರು, ಕಿತ್ತೂರು, ಕಲ್ಯಾಣ ಕರ್ನಾಟಕ ಎಂದು ರಾಜ್ಯವನ್ನು ಮೂರು ಭಾಗವಾಗಿ ವಿಂಗಡಿಸುವ ಅಗತ್ಯ ಇಲ್ಲ, ನಾವೆಲ್ಲ ಒಂದೇ ತಾಯಿ ಮಕ್ಕಳು.ಒಟ್ಟಾಗಿ ಇರೋಣ, ಸಮೃದ್ಧ ಕರ್ನಾಟಕ ಕಟ್ಟೋಣ ಎಂದು ಕರೆ ನೀಡಿದರು.

## ಕಾರು ಅಪಘಾತ: ಮೂವರು ಸಾವು

ಬದಿಯಲ್ಲಿ ಕುಳಿತಿದ್ದವರ ತಲೆ ಕಟ್ ಆಗಿದೆ. ಉಳಿದ ಇಬ್ಬರು ಗಂಭಿರವಾಗಿ ಗಾಯಗೊಂಡಿದ್ದಾರೆ. ಚಳ್ಳಕೆರೆ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಕುಣಿಗಲ್‌ನ ಐವರು ಕಾರಲ್ಲಿ ಮಂತ್ರಾಲಯಕ್ಕೆ ತೆರಳಿದ್ದರು. ರಾಯರ ದರ್ಶನ ಮುಗಿಸಿ ಮಂತ್ರಾಲಯದಿಂದ ಹಿಂದಿರುಗುವ ವೇಳೆ ಅಪಘಾತ ಸಂಭವಿಸಿದೆ. ಅತಿವೇಗದಿಂದ ಅಪಘಾತ ಸಂಭವಿಸಿದ್ದು, ಕಾರು ಸಂಪೂರ್ಣ ನಜ್ಜುಗುಜ್ಜಾಗಿದೆ.

## ಶಕ್ತಿ ಪ್ರದರ್ಶನ ಅಲ್ಲ: ಡಿಕೆಶಿ

ದೆಹಲಿಯವರಿಗೆ ಈ ವಿಷಯ ಗಮನ ಇರುತ್ತದೆ ಎಂದು ಮಾರ್ಮಿಕವಾಗಿ ಮಾತನಾಡಿದರು. ಡಿ.ಕೆ.ಶಿವಕುಮಾರ್ ಸಿಎಂ ಆಗಬೇಕು ಅಂತ ಬೆಂಬಲಿಗ ಶಾಸಕರು ಕೇಳ್ತಿದ್ದಾರೆ ಎಂಬ ಪ್ರಶ್ನೆಗೆ, ನನಗೆ ಅದರ ಬಗ್ಗೆ ಗೊತ್ತಿಲ್ಲ. ನನ್ನ ಹತ್ತಿರ ಅವರು ಯಾರು ಕೂಡ ಬಂದು ಮಾತಾಡಿಲ್ಲ. ಅವರು ಬಂದು ಮಾತಾಡಲಿ ಆಮೇಲೆ ಮಾತಾಡ್ತೀನಿ ಎಂದು ಹೇಳಿದರು.

## 2028ಕ್ಕೂ ಅಧಿಕಾರ ಬೇಕೆಂದರೆ

ಗೊಂದಲಕ್ಕೆ ತೆರೆ ಎಳೆಯಿರಿ ಎಂದು ನಾವು ಕೇಳ್ತಿದ್ದೇವೆ. ಪ್ರತಿನಿತ್ಯ ಡಿಕೆ ಸಿಎಂ ಆಗ್ತಾರೆ, ಆಗಲ್ಲ ಅನ್ನೋ ಗೊಂದಲ ಎಳೆದುಕೊಂಡು ಹೋಗುತ್ತದೆ. ಇದರಿಂದ ಪಕ್ಷದ ವರ್ಚಸ್ಸಿಗೆ ಹಾನಿಯಾಗಲಿದೆ. ಹಾಗಾಗಿ ಹೈಕಮಾಂಡ್ ಒಂದು ನಿರ್ಧಾರ ಮಾಡಲಿ ಅನ್ನೋದು ನಮ್ಮೆಲ್ಲರ ಬೇಡಿಕೆ. ರಾಜಕಾರಣಿಗಳು ಸೇರಿದಾಗ ರಾಜಕಾರಣವನ್ನೇ ಮಾತನಾಡಿ ದ್ದೇವೆ ಎಂದರು. ಶಾಸಕ ಬಾಲಕೃಷ್ಣ ಹುಟ್ಟುಹಬ್ಬದ ಪ್ರಯುಕ್ತ ಊಟಕ್ಕೆ ಸೇರಿದ್ದೆವು. ನಾಟಿ ಸ್ಟೈಲ್ ಅಡುಗೆ ಮಾಡಿಸಿದ್ದರು. ಅಷ್ಟಕ್ಕೇ ಏನೇನೋ ಊಹಾಪೋಹ ಸೃಷ್ಟಿಸಿದ್ದಾರೆ. ನಮಗೆ ಸಿಎಂ, ಡಿಸಿಎಂ ಎಲ್ಲಾ ಒಂದೇ. 136 ಜನ ಶಾಸಕರು ಸಿಎಂ, ಡಿಸಿಎಂ ಪರ ಇದ್ದಾರೆ. ಆದರೆ ಡಿಕೆ ಶಿವ ಕುಮಾರ್ ಸಿಎಂ ಆಗಲಿ ಅನ್ನೋದು ನನ್ನ ವೈಯಕ್ತಿಕ ಆಸೆ. ಟೂರ್ ಹೋದ ಮಾತ್ರಕ್ಕೆ, ಊಟಕ್ಕೆ ಸೇರಿದ ಮಾತ್ರಕ್ಕೆ ಸಿಎಂ ಬದಲಾಗಲ್ಲ ಎಂದು ಹೇಳಿದರು.

## ಡಿನ್ನರ್ ಮೀಟಿಂಗ್ ಹೊಸದಲ್ಲ

ಅವರೇ ಹೈಕಮಾಂಡ್ ತೀರ್ಮಾನಕ್ಕೆ ಬದ್ಧ ಅಂತ ಹೇಳಿದ್ದಾರೆ ಎಂದರು. ಎಲ್ಲಾ ಪಕ್ಷದಲ್ಲೂ ನಾಯಕತ್ವದ ಬಗ್ಗೆ ಚರ್ಚೆ ಆಗುತ್ತೆ. ಎಐಸಿಸಿ ಅಧ್ಯಕ್ಷರಿಗೆ ರಾಜ್ಯದ ಸಣ್ಣ ವಿಚಾರವೂ ಗೊತ್ತಿದೆ. ಹೈಕಮಾಂಡ್ ಈ ಬಗ್ಗೆ ತೀರ್ಮಾನ ಮಾಡುತ್ತದೆ. ಬಜೆಟ್ ಅಧಿವೇಶನದ ಬಳಿಕ ಸಂಪುಟ ಪುನರ್ ರಚನೆ ಆಗುವ ವಿಶ್ವಾಸ ಇದೆ. ನಾನು ಸಚಿವನಾಗಬೇಕೆಂಬ ಆಸೆ ಇದೆ. ಮೂರು ಬಾರಿ ಶಾಸಕನಾಗಿದ್ದೇನೆ. ನನಗೂ ಸಚಿವ ಆಗೋ ಆಸೆ ಇದೆ ಎಂದು ಹೇಳಿದರು. ಹೊಸ ಶಾಸಕರು, ಎಂಎಲ್‌ಸಿಗಳು ಸಚಿವ ಸ್ಥಾನ ಕೇಳುವುದರಲ್ಲಿ ತಪ್ಪೇನಿಲ್ಲ. ಆದರೆ ಎಂಟು ಬಾರಿ ಶಾಸಕರಾದ ದೇಶಪಾಂಡೆಗೆ ಸಚಿವ ಸ್ಥಾನ ಸಿಕ್ಕಿಲ್ಲ. ಯಾರನ್ನ ಮಂತ್ರಿ ಮಾಡಬೇಕು ಅಂತ ಸಿಎಂ, ಹೈಕಮಾಂಡ್ ಈ ಬಗ್ಗೆ ತೀರ್ಮಾನ ಮಾಡ್ತಾರೆ ಎಂದು ಹೇಳಿದರು.

## ಕಾನೂನು ಕ್ರಮದ ಎಚ್ಚರಿಕೆ

ನಿರ್ವಹಿಸಬೇಕು. ಬೇಡಿಕೆಗಳು ಹಾಗೂ ಸಮಸ್ಯೆಗಳ ಕುರಿತು ಕಾನೂನು ಮಾರ್ಗಗಳನ್ನು ಬಳಸಿ ಬಗೆಹರಿಸಿಕೊಳ್ಳಬೇಕು. ವೈದ್ಯರು ಹಾಗೂ ಸಿಬ್ಬಂದಿ ಮುಷ್ಕರದ ನಿಮಿತ್ತ ಕೆಲಸಕ್ಕೆ ಗೈರಾದಲ್ಲಿ ಸಾರ್ವಜನಿಕರಿಗೆ ತೊಂದರೆಯಾದಲ್ಲಿ ತಪ್ಪಿತಸ್ಥರ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸರ್ಕಾರ ಎಚ್ಚರಿಸಿದೆ.

## ವಿನಯ್ ಕುಲಕರ್ಣಿಗೆ ರಿಲೀಫ್

ಈ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಪ್ರಕರಣ ಪ್ರಮುಖ ಆರೋಪಿ ಅದಾಗ್ಯೂ, ಸಾಕ್ಷ್ಯಗಳ ವಿಚಾರಣೆ ಮುಕ್ತಾಯವಾಗಿರುವ ಹಿನ್ನಲೆ ಜಾಮೀನು ನೀಡಬಹುದು ಎಂದು ಹೇಳಿತು. ಪ್ರಕರಣ ಮುಕ್ತಾಯ ಹಂತದಲ್ಲಿದ್ದು, ಆರೋಪಿಗಳ ಹೇಳಿಕೆ ದಾಖಲಾಗುತ್ತಿದೆ. ವಕೀಲರ ಕೊನೆಯ ಹಂತದ ವಾದ ಇನ್ನೂ ಬಾಕಿಯಿದೆ. ಯೋಗೀಶ್‌ಗೌಡರ್ ಅವರನ್ನ 2016ರ ಜೂನ್ 15ರಂದು ದುಷ್ಕರ್ಮಿಗಳು ಕೊಲೆ ಮಾಡಿದ್ದರು. ಪ್ರಕರಣದ ತನಿಖೆಯನ್ನು ಸ್ಥಳೀಯ ಪೊಲೀಸರ ಬಳಿಕ ಸಿಬಿಐ ಕೈಗೆತ್ತಿಕೊಂಡು ಶಾಸಕ ವಿನಯ್ ಕುಲಕರ್ಣಿ ಅವರನ್ನು ಆರೋಪಿಯನ್ನಾಗಿ ಪರಿಗಣಿಸಿ ಬಂಧಿಸಿತ್ತು. ಸುಪ್ರೀಂ ಕೋರ್ಟ್ ಈ ಹಿಂದೆ ಜಾಮೀನು ರದ್ದುಪಡಿಸಿದ ಬಳಿಕ 2025ರ ಜೂನ್ 13ರಿಂದ ಪರಪ್ಪನ ಅಗ್ರಹಾರ ಜೈಲಿನಲ್ಲಿ ವಿಚಾರಣಾಧೀನ ಕೈದಿಯಾಗಿದ್ದರು.

## ಮುಖ್ಯಮಂತ್ರಿ ಕುರ್ಚಿ ಕದನ ತೀವ್ರ

ಕೈಗೊಂಡಿದ್ದೇವೆ ಎಂದರು. ಕರ್ನಾಟಕದಲ್ಲಿ ಏನಾಗುತ್ತಿದೆ, ಏನು ಬೆಳವಣಿಗೆಗಳು ಆಗುತ್ತಿದೆ ಎಂದು ಹೈಕಮಾಂಡ್ ಗೆ ಗೊತ್ತಿದೆ. ಅವರೇನು ನಿದ್ದೆ ಮಾಡುತ್ತಿಲ್ಲ. ನಮಗೆ ಪ್ರತಿನಿತ್ಯ ಕ್ಷೇತ್ರಕ್ಕೆ ಹೋದರೆ ಸಿಎಂ ಬದಲಾವಣೆ ಬಗ್ಗೆಯೇ ಚರ್ಚೆ, ನಮಗೂ ಕೇಳಿ ಕೇಳಿ ಸಾಕಾಗಿ ಹೋಗಿದೆ. ನಮಗೆ ಕ್ಷೇತ್ರಕ್ಕೆ ಹೋದರೆ ಕಿರಿಕಿರಿಯಾಗುತ್ತಿದೆ. ಅದನ್ನು ತಪ್ಪಿಸಲು ಹೈಕಮಾಂಡ್ ಗೆ ಮನವಿ ಮಾಡಬೇಕು. ಅದಕ್ಕಾಗಿ ಏನು ಮಾಡಬೇಕೆಂದು ಮುಂದಿನ ದಿನಗಳಲ್ಲಿ ನೋಡುತ್ತೇವೆ ಎಂದು ಹೇಳಿದರು.

## ಸಿಎಂ ಬಗ್ಗೆ ಹೈಕಮಾಂಡ್ ತೀರ್ಮಾನ

ನಾನು, ಪಕ್ಷದ ರಾಜ್ಯ ಘಟಕದ ಅಧ್ಯಕ್ಷರು ಸೇರಿದಂತೆ ರಾಜ್ಯದ ನಾಯಕರು ಅಭಿಪ್ರಾಯ ಕೊಟ್ಟಿದ್ದೇವೆ. ಅದೇನೇ ಇದ್ದರೂ, ದೇಶದ ಹಿತದೃಷ್ಟಿಯಿಂದ ಹೈಕಮಾಂಡ್ ಮಾಡುವ ನಿರ್ಧಾರಕ್ಕೆ ಬದ್ಧ ಎಂದಿದ್ದೇವೆ ಎಂದು ಸ್ಪಷ್ಟಪಡಿಸಿದರು.

# ಕಾನೂನು ಅರಿವು ಇರಲಿ

## ಯುವಸಮೂಹಕ್ಕೆ ನ್ಯಾ.ಆನಂದ್ ಪಿ.ಹೊಗಡೆ ಕರೆ

ಮೈಸೂರು: ಶಿಕ್ಷಣ ಎಂದರೆ ಕೇವಲ ಪದವಿ ಯಷ್ಟೇ ಅಲ್ಲ. ನೀವು ನಿಮ್ಮ ಜಿಲ್ಲೆಗಳಿಗೆ ಬ್ರಾಂಡ್ ಅಂಬಾಸಿಡರ್ ಆಗಿ ಬದುಕುವುದು ಸಹ ಶಿಕ್ಷಣ ಆಗಿದೆ ಎಂದು ಮೈಸೂರು ಎಫ್‌ಟಿಎಸ್ ಸಿ ಸೆಷನ್ ನ್ಯಾಯಾಧೀಶ ಆನಂದ್ ಪಿ.ಹೆಗಡೆ ಅಭಿಪ್ರಾಯ ಪಟ್ಟರು.

ಕೇಂದ್ರ ಸರ್ಕಾರದ ಯುವ ವ್ಯವಹಾರಗಳು ಮತ್ತು ಕ್ರೀಡಾಸಚಿವಾಲಯ ಹಾಗೂ ರಾಜ್ಯ ಸರ್ಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಸಹಯೋಗದಲ್ಲಿ ಮೈ ಭಾರತ್ ಹೆಸರಿನ ಅಂತರ್ ಜಿಲ್ಲಾ ಯುವ ವಿನಿಮಯ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಸಮಾನತೆ, ಸ್ವಾತಂತ್ರ್ಯ, ಭ್ರಾತೃತ್ವ ಹೀಗೆ ಎಲ್ಲವನ್ನೂ ತಿಳಿದಿರಬೇಕಿದೆ. ನಮ್ಮ ಸಾಂಸ್ಕೃತಿಕ ವಿಚಾರಗಳ ಅರಿವು ನಿಮ್ಮೆಲ್ಲರಿಗೂ ಇರಬೇಕಿದೆ ಎಂದರು.

ಡಿಜಿಟಲ್ ಸೇಫ್ಟಿ, ಆರ್ಥಿಕ ಜ್ಞಾನ ಪ್ರಮು ಖವಾಗಿ ಯುವಸಮೂಹಕ್ಕೆ ಇರಬೇಕು. ಹಿಂದೆ ಪೋಷಕರು ಗಿಫ್ಟ್ ಡೀಡ್ ಮಾಡಿ ಕೊಟ್ಟರೆ ಮಕ್ಕಳಿಗೆ ಆಸ್ತಿ ಸೇರುತ್ತಿತ್ತು. ಆದರೆ, ಈಗ ಪರಿಸ್ಥಿತಿ ಹಾಗಿಲ್ಲ. ಗಿಫ್ಟ್ ಡೀಡ್ ರಿಮೂ ಆಗುತ್ತದೆ. ಮೆಂಟೆನ್ಸ್ ಆಫ್ ಸಿನಿಯರ್ ಸಿಟಿಜನ್ ಅಡಿಯಲ್ಲಿ ತಹಸೀಲ್ದಾರ್‌ಗೆ ಮನವಿ ಸಲ್ಲಿಸಿದರೆ ಮಗನಿಗೆ ಆಸ್ತಿ ಹೋಗಿದ್ದರೂ ಅದು ಹಿಂದಕ್ಕೆ ಬರಲಿದೆ ಇಂತಹ ಕನಿಷ್ಠ ಕಾನೂನು ಅರಿವು ಯುವ ಸಮೂಹಕ್ಕೆ ಇರಬೇಕಿದೆ ಎಂದರು.

ಗ್ರಾಹಕರ ಹಕ್ಕು, ಮಹಿಳಾ ಹಕ್ಕು, ಮೊಬೈಲ್ ಕಳುವಾದರೆ ದೂರು ನೀಡುವುದೂ ಹೇಗೆ? ಉಚಿತ ಕಾನೂನು ನೆರವು ಪಡೆಯುವುದು ಹೇಗೆ? ಇಂತಹ ಸಾಕಷ್ಟು ಕಾನೂನು ಅರಿವು ನೀವು ತಿಳಿಯಬೇಕು. ನಿಮ್ಮ ಜಿಲ್ಲೆಯ ಜನರಿಗೆ ನೀವೇ ಬ್ರಾಂಡ್ ಗಳಾಗಿ ಜನಜಾಗೃತಿ ಮೂಡಿಸುವ ದೊಡ್ಡ ಜವಾಬ್ದಾರಿ ನಿಮ್ಮೆಲ್ಲರ ಮೇಲಿದೆ. ಅದರಲ್ಲೂ ಮೈಸೂರಿನಲ್ಲಿ ದಿನಕ್ಕೊಂದು ಡಿಜಿಟಲ್ ವಂಚನೆ ಆಗುತ್ತಿದ್ದು, ಈ ಬಗ್ಗೆ ಯುವ ಸಮೂಹ ಹೆಚ್ಚು ಜನರಿಗೆ ಅರಿವು ಮೂಡಿಸದಿರುವುದೇ ಕಾರಣ ಎಂದು ಹೇಳಿದರು.

ಜಿಲ್ಲಾ ಯುವಜನ ಅಧಿಕಾರಿ ಪಿ.ಅಖಿಲ್, ಮೈಸೂರು ವಿವಿ ನಿವೃತ್ತ ಕುಲಪತಿ ಪ್ರೊ.ಪದ್ಮಾ ಶೇಖರ್, ಕನ್ನಡ ಸಂಶೋಧನಾ ಸಂಸ್ಥೆ ನಿರ್ದೇಶಕಿ ಲೋಲಾಕ್ಷಿ, ಸಂಪನ್ಮೂಲ ವ್ಯಕ್ತಿಯಾದ ಇಮ್ರಾನ್ ಅಹ್ಮದ್ ಬೇಗ್, ಗುರುಪ್ರಸಾದ್ ಇನ್ನಿತರರು ಉಪಸ್ಥಿತರಿದ್ದರು.



### 550 ಪೋಕ್ಸೋ ಪ್ರಕರಣ

**ಮೈಸೂರು: ಇತ್ತೀಚಿನ ದಿನಗಳಲ್ಲಿ ಬಾಲ್ಯ ವಿವಾಹ ಹೆಚ್ಚಾಗುತ್ತಿದೆ. ಅದರಲ್ಲೂ ಎಚ್.ಡಿ.ಕೋಟೆ, ಹುಣಸೂರು ತಾಲ್ಲೂಕಿನ ಹಾಡಿಗಳಲ್ಲಿ ಹುಡುಗ ಹುಡುಗಿಯನ್ನು ಕಾಡಿಗೆ ಕರೆದೊಯ್ದರೆ ಮದುವೆ ಮಾಡಿಸುವ ಸಂಪ್ರದಾಯ ಜೀವಂತವಾಗಿದೆ. ಹೀಗೆ ಅರಿವಿಲ್ಲದ ಮದುವೆಯಾಗಿ ಕೊನೆಗೆ 9ತಿಂಗಳ ಗರ್ಭಿಣಿಯಾಗಿ ಆಸ್ಪತ್ರೆಗೆ ಹೋದಾಗ ಬಾಲ್ಯ ವಿವಾಹ ಬೆಳಕಿಗೆ ಬಂದು ಯುವಕನನ್ನು ಜೈಲಿಗೆ ಹಾಕುವ ಸ್ಥಿತಿ ಎದುರಾಗಿದೆ. ಆತ ಅಮಾಯಕನಾಗಿದ್ದರೂ ಕೊಲೆ ಮಾಡಿದ, ವ್ಯಸನಿಗಳ ಜತೆ ಶಿಕ್ಷೆ ಅನುಭವಿಸಬೇಕಾದ ಸ್ಥಿತಿಯಿದೆ. ಮೈಸೂರು ಜಿಲ್ಲೆ ಪೋಕ್ಸೋ ವಿಶೇಷ ನ್ಯಾಯಾಲದಲ್ಲಿ 550 ಪೋಕ್ಸೋ ಪ್ರಕರಣಗಳಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇಂತಹ ವಿಚಾರಗಳ ಬಗ್ಗೆ ಯುವ ಸಮೂಹ ಜಾಗೃತಿ ಮೂಡಿಸುವ ಸಾಮಾಜಿಕ ಜವಾಬ್ದಾರಿ ತೋರಬೇಕಿದೆ. ಅದಕ್ಕೆ ಆಧಾರ್ ಕಾರ್ಡ್ ನೋಡಿ ಪ್ರೀತಿಸಿ ಎನ್ನುತ್ತಿದ್ದೇನೆಂದರು.**

ಮೊದಲ ಪುಟದಿಂದ

## ಪನ್ನೀರ್ ಡಿಎಂಕೆ ಸೇರ್ಪಡೆ

ಚುನಾವಣೆಯಲ್ಲಿ ಎಐಡಿಎಂಕೆಗೆ ಗೆಲುವು ಸಿಗದ ಪರಿ ಸ್ಥಿತಿ ಸೃಷ್ಟಿಸಿದ್ದಾರೆ ಎಂದು ಕಿಡಿಕಾರಿದರು. 2022ರ ಜುಲೈ 11ರಂದು ಎಐಎಡಿಎಂಕೆಯ ಮಧ್ಯಂತರ ಪ್ರಧಾನ ಕಾರ್ಯ ದರ್ಶಿಯಾಗಿ ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಎಡಪ್ಪಾಡಿ ಕೆ.ಪಳನಿಸ್ವಾಮಿಯನ್ನ ನೇಮಿಸಲಾಗಿತ್ತು. ಪ್ರತಿಸ್ಪರ್ಧಿಯಾಗಿದ್ದ ಓ. ಪನ್ನೀರಸೆಲ್ವಂ ಅವರನ್ನ ಪಕ್ಷದ ಖಜಾಂಚಿ ಹುದ್ದೆ ಮತ್ತು ಪ್ರಾಥಮಿಕ ಸದಸ್ಯತ್ವದಿಂದಲೇ ಉಚ್ಚಾಟಿಸಲಾಗಿತ್ತು. ತಮಿಳುನಾಡಿನ 234 ಸದಸ್ಯರ ವಿಧಾನಸಭೆಗೆ ಚುನಾವಣೆ ಈ ವರ್ಷದ ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ನಡೆಯುವ ಸಾಧ್ಯತೆಯಿದೆ. ಈ ಚುನಾವಣೆಗಳು ಪಶ್ಚಿಮ ಬಂಗಾಳ, ಕೇರಳ, ಅಸ್ಸಾಂ ಮತ್ತು ಪುದುಚೇರಿಯ ಕೇಂದ್ರಾಡಳಿತ ಪ್ರದೇಶ ಚುನಾವಣೆಗಳ ಜೊತೆಗೆ ನಡೆಯಲಿವೆ.

## ಅಸಿಂಧು ಆದೇಶಕ್ಕೆ ತಡೆ

ಸುಪ್ರೀಂ ಕೋರ್ಟ್ನಲ್ಲಿ ಸುಬ್ಬಾರೆಡ್ಡಿ ಮೇಲ್ಮನವಿಯನ್ನು ವಿರೋಧಿಸಿದ ಸಿ.ಮುನಿರಾಜು ಪರ ವಕೀಲರು, ಅವರು ತಮ್ಮ ಮದ್ಯ ವ್ಯವಹಾರವನ್ನು ಬಹಿರಂಗಪಡಿಸಿಲ್ಲ ಎಂದು ವಾದಿಸಿದರು. ನಂತರ ಸಿಜೆಐ, ನೀವು ಚುನಾವ ಣೆಯಲ್ಲಿ ಗೆಲ್ಲದಿದ್ದರೆ ಇಂತಹ ನೆಪಗಳನ್ನು ಹುಡುಕುತ್ತೀರಿ ಎಂದರು. ಇದೇ ವೇಳೆ ನ್ಯಾಯಮೂರ್ತಿ ಬಾಗ್ಚಿ ಅವರು, ಆದಾಯವನ್ನು ಬಹಿರಂಗಪಡಿಸುವುದು ಅಗತ್ಯವಾಗಿ ದೆಯೇ ಹೊರತು ವ್ಯವಹಾರದ ಸ್ವರೂಪವಲ್ಲ ಎಂದರು.

## ಮಾ.2ರಿಂದ ನಾಟಕೋತ್ಸವ

ಮೈಸೂರು: ಖಿಲ್ಲೆ ಮೊಹಲ್ಲಾ ನಾದರಂಗ ರಂಗ ಸಂಸ್ಥೆ ವತಿಯಿಂದ ಮಾ. 2, 3, 4 ರಂದು ಕಲಾ ಮಂದಿರದ ಆವರಣದ ಕಿರು ರಂಗಮಂದಿರದಲ್ಲಿ ರಂಗಸಂಭ್ರಮ ನಾಟಕೋತ್ಸವ ಆಯೋಜಿಸಲಾಗಿದೆ ಎಂದು ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಮಾ. 2 ರಂದು ರಾತ್ರಿ 7ಕ್ಕೆ ರಂಗಾನಂದ ಕಲಾ ಸಂಘದಿಂದ ರಾಜೇಂದ್ರ ಕಾರಂತ ವಿರಚಿತ ಮುದ್ದಣ್ಣನ ಪ್ರಮೋಷನ್ ಪ್ರಸಂಗ, ಮಾ. 3 ರಂದು ಸಂಜೆ 5.45ಕ್ಕೆ ಪೌರಾಣಿಕ ರಂಗಗೀತೆ, ರಾತ್ರಿ 7ಕ್ಕೆ ಅಭ್ಯಾಸಿ ಟ್ರಸ್ಟಿನಿಂದ ಡಾ.ಎಚ್. ಎಸ್. ಶಿವಪ್ರಕಾಶ್ ಅವರ ಮಾದಾರಿ ಮಾದಯ್ಯ, ಮಾ. 4 ರಂದು ರಾತ್ರಿ 7ಕ್ಕೆ ಎನ್.ಎಸ್. ರಾವ್ ವಿರಚಿತ ಸಾಮ್ರಾಟ್ ಅಶೋಕ ನಾಟಕ ಪ್ರದರ್ಶ ಗೊಳ್ಳಲಿವೆ. ಇವೆಲ್ಲಕ್ಕೂ ಉಚಿತ ಪ್ರವೇಶವಿದೆ ಎಂದರು. ಪದಾಧಿಕಾರಿಗಳಾದ ಕೃಷ್ಣಮೂರ್ತಿ, ಶಿವಪ್ರಕಾಶ್, ರಂಗಸ್ವಾಮಿ, ನಾಗೇಂದ್ರಕುಮಾರ್ ಇದ್ದರು.

ಮೊದಲ ಪುಟದಿಂದ

## ಇಂದಿನಿಂದ ಪಿಯುಸಿ ಪರೀಕ್ಷೆ

ಪರೀಕ್ಷಾ ವ್ಯವಸ್ಥೆ ಮಾನಿಟರ್ ಮಾಡಲು ವೆಬ್ ಕ್ಯಾಸ್ಟಿಂಗ್ ವ್ಯವಸ್ಥೆ, ಪ್ರತಿ ಜಿಲ್ಲೆ ಡಿಸಿಗಳು, ಎಸ್ಪಿಗಳು ಮಾನಿಟರ್ ಮಾಡಲು ವ್ಯವಸ್ಥೆ ಮಾಡಲಾಗಿದೆ. ಪ್ರಶ್ನೆಪತ್ರಿಕೆ ಖಜಾನೆಯಿಂದ ಕೇಂದ್ರಗಳಿಗೆ ಹೋಗೋ ವಾಗ ಬಿಗಿ ಪೊಲೀಸ್ ಭದ್ರತೆ, ಪ್ರಶ್ನೆಪತ್ರಿಕೆ ರವಾನೆ ವಿಡಿಯೋ ಚಿತ್ರೀಕರಣದ ವ್ಯವಸ್ಥೆ. ನಿಗದಿ ಮಾಡಿದ ಸಮಯಕ್ಕಿಂತ ಮೊದಲು ಪ್ರಶ್ನೆಪತ್ರಿಕೆ ಖಜಾನೆಯಿಂದ ಓಪನ್ ಮಾಡುವಂತೆ ಇಲ್ಲ. ಅಂತಹ ಘಟನೆ ಕಂಡುಬಂದರೆ ಕಾನೂನು ಕ್ರಮದ ಎಚ್ಚರಿಕೆ. ಪ್ರತಿ ಪರೀಕ್ಷಾ ಕೇಂದ್ರಕ್ಕೆ ಪೊಲೀಸ್ ಭದ್ರತೆ, ಪ್ರತಿ ಕೇಂದ್ರದಲ್ಲಿ ಸಿಟ್ಟಿಂಗ್ ಸ್ಕ್ವಾಡ್, ಫ್ಲೈಯಿಂಗ್ ಸ್ಕ್ವಾಡ್ ನಿಯೋಜನೆ ಮಾಡಲಾಗಿದೆ.

## ಉದ್ಯೋಗ ನೀಡದಿದ್ದರೆ ಪಾದಯಾತ್ರೆ

ಕ್ರಮ ಕೈಗೊಂಡಿದೆ. ಹೋರಾಟದಲ್ಲಿ ನಿಮ್ಮವರು ಕಡಿಮೆ ಇದ್ದರು, ವಿದ್ಯಾರ್ಥಿಗಳೇ ಜಾಸ್ತಿ ಇದ್ದರು. ಆ ಹೋರಾಟದಿಂದಾಗಿಯೇ ಸರ್ಕಾರ 56 ಸಾವಿರ ಉದ್ಯೋಗ ಭರ್ತಿ ಮಾಡುತ್ತೇವೆ ಎಂದು ಹೇಳಿದೆ. ನಾವು ಹೋರಾಟ ಮಾಡಿದ್ದು 2.84 ಲಕ್ಷ ಹುದ್ದೆಗಳ ಭರ್ತಿಗಾಗಿಯೇ ಹೊರತು ಕೇವಲ 57 ಸಾವಿರಕ್ಕಲ್ಲ. ಸರ್ಕಾರ ಕೇವಲ ಹೇಳಿಕೆ ನೀಡಿ ಸುಮ್ಮನೆ ಕೂರುವುದಲ್ಲ. ಎಲ್ಲ ಹುದ್ದೆಗಳಿಗೂ ಯಾವಾಗ ನೇಮಕ ಮಾಡಲಾಗುತ್ತದೆ. ಯಾವಾಗ ಅಧಿಸೂಚನೆ ಹೊರಡಿಸಲಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಬೇಕು ಎಂದು ಒತ್ತಾಯಿಸಿದರು

# ಎಂಎಂಕೆ, ಎಸ್‌ಡಿಎಂ ಮಹಿಳಾ ಮಹಾವಿದ್ಯಾಲಯದ ಘಟಿಕೋತ್ಸವ

ಮೈಸೂರು: ವಿದ್ಯಾರ್ಥಿಗಳು ತಾವು ಪಡೆದ ಪದವಿ ಅಂಕ ಇವುಗಳ ಜೊತೆಗೆ ಸ್ಪರ್ಧಾತ್ಮಕ ಯುಗದಲ್ಲಿ ಅಗತ್ಯವಾಗಿ ಬೇಕಾಗಿರುವ ಸಾಂದ ರ್ಭಿಕ ನಾಯಕತ್ವ , ಅವಕಾಶಗಳ ಸದ್ಬಳಕೆ, ತಾಳ್ಮೆ ಹಾಗೂ ಮೌಲ್ಯಯುತ ಜೀವನವನ್ನು ಅಳವಡಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾಂಗ ವಿಭಾಗದ ಕುಲಸಚಿವ ಪ್ರೊ. ಎನ್.ನಾಗರಾಜ್ ಹೇಳಿದರು.

ಮೈಸೂರಿನ ಕೃಷ್ಣಮೂರ್ತಿಪುರಂ ನಲ್ಲಿ ರುವ ಎಂಎಂಕೆ ಹಾಗೂ ಎಸ್ ಡಿ ಎಂ ಮಹಿಳಾ ಮಹಾವಿದ್ಯಾಲಯದ ವಾಣಿಜ್ಯ ಸ್ನಾತ ಕೋತ್ತರ ವಿಭಾಗದ ಪದವಿ ಪ್ರಧಾನ ಸಮಾ ರಂಭದಲ್ಲಿ ಮಾತನಾಡಿದರು. ಪದವಿಯ ಜೊತೆ ಜೊತೆಗೆ ಪರಿಶುದ್ಧವಾದ ಜೀವನ ಕ್ರಮ ಹಾಗೂ ನಿರ್ವಹಿಸುವ ಕೆಲಸದಲ್ಲಿ ಕ್ರಿಯಾಶೀ ಲತೆ ಹಾಗೂ ಶ್ರದ್ಧೆಯನ್ನು ಪಾಲಿಸಬೇಕು. ಉದ್ಯೋಗದಾತರು ಕೇವಲ ಉದ್ಯೋಗಿಯ ಬಾಹ್ಯ ಸೌಂದರ್ಯವನ್ನು ಮಾತ್ರ ಗಣನೆಗೆ ಪರಿಗಣಿಸುವುದಿಲ್ಲ. ಬದಲಾಗಿ ಸಂಸ್ಥೆಗೆ




ನಿಗದಿತ ವ್ಯಕ್ತಿ ಅಥವಾ ಮಾನವ ಸಂಪನ್ಮೂಲ ದಿಂದ ಬರುವ ಲಾಭವನ್ನು ಅಳೆದು ತೂಗಿ ಸಂಸ್ಥೆಯಲ್ಲಿ ಉಳಿಸಿಕೊಳ್ಳುತ್ತಾರೆಂದರು.

ಇದೇ ಸಂದರ್ಭ ವಾಣಿಜ್ಯ ಸ್ನಾತಕೋತ್ತರ ವಿಭಾಗದಲ್ಲಿ ಉತ್ತಮ ಶೈಕ್ಷಣಿಕ ಸಾಧನೆ ಮಾಡಿದ 38 ವಿದ್ಯಾರ್ಥಿನಿಯರಿಗೆ ಸ್ನಾತಕ ಪದವಿ ಪ್ರಮಾಣ ಪತ್ರ ನೀಡಿ ಅಭಿನಂದಿಸ ಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದಕ್ಷಿಣ ಕನ್ನಡ ಜಿಲ್ಲೆಯ ಉಜಿರೆ ಎಸ್ ಡಿಎಂ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ.ಸತೀಶ್ ಚಂದ್ರ, ಮುಖ್ಯ ಅತಿಥಿಗಳಾಗಿ ಎಸ್ ಡಿಎಂ ಶಿಕ್ಷಣ ಸಂಸ್ಥೆಯ ಆಡಳಿತ ಸಂಸ್ಥೆಯ ಸದಸ್ಯೆ ಸೌಮ್ಯ ಶ್ರೀಧರ್ ಜೈನ್, ವೇದಿಕೆಯಲ್ಲಿ ಮಹಿಳಾ ಮಹಾವಿದ್ಯಾಲಯದ ಪ್ರಾಂಶುಪಾಲೆ ಪ್ರೊ.ಎನ್.ಭಾರತಿ, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲೆ ಪ್ರೊ.ನಯನ ಕುಮಾರಿ, ವಾಣಿಜ್ಯ ಸ್ನಾತಕೋತರ ಸಂಚಾಲಕಿ ಹಾಗೂ ವಿಭಾಗ ಮುಖ್ಯಸ್ಥೆ ಡಾ.ಕೆ.ದೇವಕಿ, ಕಂಪ್ಯೂಟರ್ ಶಿಕ್ಷಣ ವಿಭಾಗದ ಮುಖ್ಯಸ್ಥ ಕೆ. ಎಸ್.ಸುಕ್ರತಾ ಉಪಸ್ಥಿತರಿದ್ದರು.

**ಶಾಸಕ ಕೆ.ಹರೀಶ್ ಗೌಡರಿಂದ ಗುದ್ದಲಿ ಪೂಜೆ**

# 5.82 ಕೋಟಿ ವೆಚ್ಚದ ಕಾಮಗಾರಿಗೆ ಗುದ್ದಲಿಪೂಜೆ

ಮೈಸೂರು: ಮುಖ್ಯಮಂತ್ರಿ ಮೂಲಸೌಕರ್ಯ ಅಭಿ ವೃದ್ಧಿ ಯೋಜನೆಯಡಿ (ಸಿ.ಎಂ.ಐ.ಡಿ.ಪಿ) ಚಾಮ ರಾಜ ವಿಧಾನಸಭಾ ಕ್ಷೇತ್ರಕ್ಕೆ ಮಂಜುರಾಗಿರುವ 50.00 ಕೋಟಿ ರೂಪಾಯಿಗಳ ಅನುದಾನದಡಿ ಮೈಸೂರು ಮಹಾನಗರ ಪಾಲಿಕೆಯ ವಲಯ ಕಚೇರಿ–5ರ ವಾರ್ಡ್ ನಂ.2 ಮಂಚೇಗೌಡನಕೊ ಪ್ಪಲು ವ್ಯಾಪ್ತಿಯಲ್ಲಿ ಅಂದಾಜು 5.82 ಕೋಟಿ ರೂ. ವೆಚ್ಚದಲ್ಲಿ ಕೈಗೊಳ್ಳಲಾಗುತ್ತಿರುವ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಕೆ.ಹರೀಶ್ ಗೌಡ ಗುದ್ದಲಿ ಪೂಜೆ ನೆರವೇರಿಸಿದರು.

ಫೆನ್ಸಿಂಗ್ ಆಗಿರುವ ಮುಡಾ ಕ್ರೀಡಾಂಗಣವನ್ನು ಸಾರ್ವಜನಿಕರ ಬಳಕೆಗೆ ಉದ್ಘಾಟಿಸಿದರು. ಕಾಮ ಗಾರಿಯಲ್ಲಿ ಮಂಚೇಗೌಡನ ಕೊಪ್ಪಲು ವ್ಯಾಪ್ತಿಯಲ್ಲಿ ಮಹಾಜನ ಲೇಔಟ್ ಬಡಾವಣೆಯ ಅಡ್ಡ ರಸ್ತೆಗಳ ರಸ್ತೆ ಮತ್ತು ಚರಂಡಿ ಅಭಿವೃದ್ಧಿ, ಕಟ್ಟೆಹೊಸೂರಿನ ದೊಡ್ಡ ಮಳೆನೀರು ಚರಂಡಿಯ ಪಕ್ಕದ ಅಡ್ಡ



ರಸ್ತೆಗಳ ಮತ್ತು ಅರಳಿ ಮರದ ಪಕ್ಕದ ರಸ್ತೆಯ ರಸ್ತೆ ಮತ್ತು ಚರಂಡಿ, ಡೆಕ್ ಅಭಿವೃದ್ಧಿ ಹಾಗೂ ಮಂಚೇ ಗೌಡನ ಕೊಪ್ಪಲಿನ ಸರ್ಕಾರಿ ಕಾಲೇಜು ಹಿಂಭಾ ಗದ ಅಡ್ಡ ರಸ್ತೆಗಳ ರಸ್ತೆ ಮತ್ತು ಚರಂಡಿ, ಗ್ರಾಮದ ಅಡ್ಡ ರಸ್ತೆಗಳ ಹಾಗೂ ಮಾರಿಗುಡಿ ಬೀದಿಯ ಅಡ್ಡ ರಸ್ತೆಗಳ ರಸ್ತೆ ಮತ್ತು ಚರಂಡಿ ಅಭಿವೃದ್ಧಿ, ಎಲ್ಲಮ್ಮ ತಾಯಿ ದೇವಸ್ಥಾನದ ಅಡ್ಡ ರಸ್ತೆಗಳ ರಸ್ತೆ ಮತ್ತು ಚರಂಡಿ ಅಭಿವೃದ್ಧಿ, ಹೆಬ್ಬಾಳು 2ನೇ ಹಂತದ ಅಡ್ಡ ರಸ್ತೆಗಳ ರಸ್ತೆ ಮತ್ತು ಚರಂಡಿ ಅಭಿ ವೃದ್ಧಿ ಕಾಮಗಾರಿ ಇದ್ದು, ಯು.ಜಿ.ಡಿ. ಕಾಮಗಾರಿ ಯಲ್ಲಿ ಮಾವಿನ ತೋಪಿನ ಹತ್ತಿರದ ರಸ್ತೆಯಿಂದ ಸೌದೇ ಡಿಪೋ ಮುಖಾಂತರ ಹೆಬ್ಬಾಳ್ ಮುಖ್ಯ ರಸ್ತೆಯವರೆಗೆ, ಸರ್ಕಾರಿ ಶಾಲೆ ಹಿಂಭಾಗದ ಅಡ್ಡ ರಸ್ತೆಗಳಲ್ಲಿ ಒಳಚರಂಡಿ ಕೊಳವೆಮಾರ್ಗ ಅಳವ ಡಿಸಿ ಯಂತ್ರಗುಂಡಿಗಳನ್ನು ನಿರ್ಮಿಸುವ ಕಾಮ ಗಾರಿಯಾಗಿದೆ. ಕಾರ್ಯಕ್ರಮ ದಲ್ಲಿ ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನ ಕೊಪ್ಪಲು, ಡಿ.ರಾಮಚಂದ್ರು, ಯು.ರಮೇಶ್, ಪಟೇಲ್ ಗೋವಿಂ ದರಾಜು, ಇ.ರವೀಂದ್ರ, ದೊಡ್ಡೇಗೌಡ, ಮಾಜಿ ಉಪಮೇಯರ್ ಮಹದೇವಪ್ಪ, ಜಯರಾಮಚಾರಿ, ಪೈಲ್ವಾನ್ ನಾರಾಯಣ್, ನಗರಪಾಲಿಕೆ ಮಾಜಿ ಸದಸ್ಯ ಪ್ರೇಮ ಶಂಕರೇಗೌಡ, ವಾರ್ಡ್ ಅಧ್ಯಕ್ಷ ಆರ್.ಶ್ರೀಧರ್, ಮಹದೇವಮ್ಮ, ಸುಜಾತ, ಲೋಕೇಶ್, ಪುಟ್ಟರಾಜು, ಅವಿನಾಶ್, ಡೆಲ್ಲಿ ರವಿ,ಆಟೋ ಸತೀಶ್ ಗೌಡ, ದೇವರಾಜ ಬ್ಲಾಕ್ ಅಧ್ಯಕ್ಷ ಡಿ ನಾಗಭೂ ಷಣ್, ಮಾಜಿ ಮೇಯರ್ ಗಳಾದ ಪುಷ್ಪಲತಾ ಚಿಕ್ಕಣ್ಣ, ಮೋದಾಮಣಿ, ಪಾಲಿಕೆ ಮಾಜಿ ಸದಸ್ಯ ಪೈಲ್ವಾನ್ ಶ್ರೀನಿವಾಸ್, ಜೆ.ಗೋಪಿ, ಪಾಲಿಕೆ ಸೂಪ ರಿಂಡೆಂಟ್ ಇಂಜಿನಿಯರ್ ಮಂಜು, ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀನಿವಾಸ್, ವಲಯ ಕಚೇರಿ 5 ರ ಅಭಿವೃದ್ಧಿ ಅಧಿಕಾರಿ ಹಿತೇಂದ್ರ,ಇಂಜಿನಿಯರ್ ಶಿಲ್ಪಾ, ಮುದ್ದು ಮಲ್ಲೇಗೌಡ ಭಾಗಿಯಾಗಿದ್ದರು.

# ಪ್ರೊ.ನಂಜುಂಡಸ್ವಾಮಿ ಸ್ಮಾರಕಕ್ಕೆ ಡಿಸಿ ಭೇಟಿ



ಚಾಮರಾಜನಗರ, ಜಿಲ್ಲಾಧಿಕಾರಿ ಶ್ರೀರೂಪ ಅವರು ಚಾಮರಾಜನಗರ ತಾಲೂಕಿನ ಅಮೃತ ಭೂಮಿಯಲ್ಲಿ ಇರುವ ಪ್ರೊ. ನಂಜುಂ ಡಸ್ವಾಮಿ ಅವರ ಸ್ಮಾರಕಕ್ಕೆ ಭೇಟಿ ನೀಡಿ, ಸಾವಯವ ಮತ್ತು ಸಹಜ ಕೃಷಿ ಚಟುವಟಿಕೆಗಳನ್ನು ಪರಿಶೀಲಿಸಿದರು.

ಸ್ಥಳೀಯ ಸಂಪನ್ಮೂಲಾಧಾರಿತ ರಾಸಾಯನಿಕ ಮುಕ್ತ ಬೇಸಾಯ, ಮಣ್ಣಿನ ಆರೋಗ್ಯ, ಬೀಜ ಸಂರಕ್ಷಣೆ ಹಾಗೂ ಪರಿಸರ ಸ್ನೇಹಿ ಕೃಷಿ ವಿಧಾನಗಳಿಗೆ ಒತ್ತು ನೀಡಿರುವ ಬಗ್ಗೆ ಮಾಹಿತಿ ಪಡೆದರು. ಇದೇ ಸಂದರ್ಭದಲ್ಲಿ, ಸ್ಥಳೀಯವಾಗಿ ಉತ್ಪಾದನೆಯಾಗುವ ಸಾವಯವ ಉತ್ಪನ್ನಗಳ ಮೌಲ್ಯವರ್ಧನೆಗಾಗಿ ಸ್ಥಾಪಿಸಿರುವ ಆಹಾರ ಸಂಸ್ಕರಣ ಘಟಕ ವನ್ನು ವೀಕ್ಷಿಸಿದರು.

ವಿವಿಧ ತೋಟಗಳಲ್ಲಿ ಬೆಳೆಯುತ್ತಿರುವ ತರಕಾರಿ ಹಾಗೂ ಹಸಿರು ಸೊಪ್ಪಿನ ಗುಣಮಟ್ಟವನ್ನು ಪರಿಶೀಲಿಸಿದರು. ರೈತ ಮುಖಂಡ ಹೊನ್ನೂರು ಪ್ರಕಾಶ್ ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಯವರಿಗೆ ಮಾಹಿತಿ ನೀಡಿದರು.

# ವಿಶೇಷಚೇತನರಿಗೆ ತ್ರಿಚಕ್ರ ವಾಹನ ವಿತರಣೆ



ಚಾಮರಾಜನಗರ, ಮತ್ತು ಕಾರ್ಮಿಕ ಇಲಾಖೆ ವತಿಯಿಂದ ವಿಶೇಷ ಚೇತನರಿಗೆ ತ್ರಿಚಕ್ರ ವಾಹನ ವಿತರಿಸುವ ಕಾರ್ಯಕ್ರಮವನ್ನು ಇಂದು ಹಮ್ಮಿಕೊಳ್ಳಲಾಗಿತ್ತು.

ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಜಿಲ್ಲಾಧಿಕಾರಿ ಶ್ರೀರೂಪ ಹಾಗೂ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ವಿ. ಚಂದ್ರು ಅವರು ವಿಶೇಷಚೇತನ ಫಲಾನುಭವಿಗಳಿಗೆ ತ್ರಿಚಕ್ರ ವಾಹನಗಳನ್ನು ವಿತರಿಸಿದರು. ಈ ಸಂದರ್ಭದಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ (ಮುನ್ನ) ಅವರು ಇದ್ದರು. ಸಿಎಸ್‌ಆರ್ ನೆರವಿನಡಿ ವಿಶೇಷಚೇತನರಿಗೆ ತ್ರಿಚಕ್ರ ವಾಹನ ನೀಡುವಂತೆ ಕಾರ್ಮಿಕ ಇಲಾಖೆ ವತಿಯಿಂದ ಉದ್ಯಮಗಳಿಗೆ ಪತ್ರ ಬರೆಯಲಾಗಿತ್ತು. ಈ ಹಿನ್ನೆಲೆಯಲ್ಲಿ ಚಾಮರಾಜನಗರ ಬದನಗುಪ್ಪೆ–ಕೆಲ್ಲಂಬಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕೇನ್ಸ್ ಎಲೆಕ್ಟ್ರಾನಿಕ್ ಮ್ಯಾನ್ಯುಫ್ಯಾಕ್ಚರಿಂಗ್ ಹಾಗೂ ಕಲರ್ ಟೋನ್ ಟೆಕ್ಸ್ಟೈಲ್ ಪ್ರೈಲಿಮಿಟೆಡ್ ವಿಶೇಷಚೇತನರಿಗೆ ಎರಡು ತ್ರಿಚಕ್ರ ವಾಹನಗಳನ್ನು ನೀಡಿವೆ. ಈ ವಾಹನಗಳನ್ನು ಇಬ್ಬರು ವಿಶೇಷಚೇತನ ಫಲಾನುಭವಿಗಳಿಗೆ ಗಣ್ಯರು ವಿವರಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾರ್ಮಿಕ ಅಧಿಕಾರಿ ರಾಮಚಂದ್ರಯ್ಯ, ಕಾರ್ಮಿಕ ಇಲಾಖೆಯ ಹಿರಿಯ ನಿರೀಕ್ಷಕರು, ಕಾರ್ಖಾನೆಯ ಹೆಚ್.ಆರ್ ಮತ್ತು ಜನರಲ್ ಮ್ಯಾನೇಜರ್ ಹಾಗೂ ಜಯೇಂದ್ರ, ರಂಗನಾಥ್ ಹೇಮಂತ್ ಹಾಜರಿದ್ದರು.

# ಪತ್ರಕರ್ತರಿಗೆ ಅಪಘಾತ ವಿಮೆ ಕಾರ್ಡ್ ವಿತರಣೆ

**ಅಪಘಾತ ವಿಮೆ ಪತ್ರಕರ್ತರ ನೆರವಿಗೆ ಬರಲಿದೆ: ಸಂಸದ ಸುನೀಲ್ ಬೋಸ್ ಅಭಿಮತ**



ಚಾಮರಾಜನಗರ, ಅಪಘಾತ ಯಾರಿಗೂ ಆಗಬಾರದು ಎಂಬುದು ನಮ್ಮ ಬಯಕೆ ಆದರೆ ಅಪಘಾತಗಳನ್ನು ತಡೆಗಟ್ಟಲು ಯಾರಿಂದಲೂ ಸಾಧ್ಯವಿಲ್ಲ. ಒಂದು ವೇಳೆ ಸಾವು, ನೋವು ಸಂಭವಿಸಿ ಕುಟುಂಬ ಬೀದಿಗೆ ಬಂದರೆ ಮುಂದಿನ ಜೀವನಕ್ಕೆ ಆಧಾರವಾಗಿರಲಿ ಎಂಬ ಉದ್ದೇಶದಿಂದ ವಿಮೆ ಪಾಲಿಸಿ ಮಾಡಿಸುವುದು ಉತ್ತಮ ಎಂದು ಸಂಸದ ಸುನೀಲ್ ಬೀಸ್ ಅಭಿಪ್ರಾಯಪಟ್ಟರು.

ನಗರದ ಕಾರ್ಯನಿರತ ಪತ್ರಕರ್ತರ ಸಂಘದಲ್ಲಿ ನಡೆದ ಕಾರ್ಯಕ್ರಮದಲ್ಲಿ ಜಿಲ್ಲೆಯ ಪತ್ರಕರ್ತರಿಗೆ ಸಾಂಕೇತಿಕವಾಗಿ ಅಪಘಾತ ವಿಮೆ ಕಾರ್ಡನ್ನು ವಿತರಣೆ ಮಾಡಿ ಮಾತನಾಡಿದರು. ಮುಂದೆ ಸಹ ಪತ್ರಕರ್ತರ ಅಪಘಾತ ವಿಮೆ ಯೋಜನೆಗೆ ಆರ್ಥಿಕ ನೆರವು ನೀಡುವುದಾಗಿ ಭರವಸೆ ನೀಡಿದರು.

**ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು**

ಸಮಾಜದ ನಾಲ್ಕನೇ ಅಂಗವಾಗಿ ಕಾರ್ಯನಿರ್ವಹಿಸುತ್ತಿರುವ ಪತ್ರಕರ್ತರ ಮೇಲೆ ಮಹತ್ತರವಾದ ಜವಬ್ದಾರಿ ಇದ್ದು, ದೇಶ, ವಿದೇಶಗಳಲ್ಲಿ, ಹಾಗೂ ನಮ್ಮ ಸುತ್ತಾ ಮುತ್ತಾ ನಡೆಯುವ ಘಟನಾವಳಿಗಳು, ವಿದೇಶಾಂಗ ನೀತಿ, ಹಣದುಬ್ಬರ, ಪಾಲಿಸಿಗಳು ಹಾಗೂ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಬೇಕಿದೆ. ಆದರೆ ಪ್ರಸ್ತುತ ಯೂಟ್ಯೂಬ್ ಚಾನೆಲ್, ಸೋಷಿಯಲ್ ಮೀಡೀಯ ಗಳಲ್ಲಿ ನೈಜ ಸುದ್ದಿಗಳಿಗೆ ಬದಲಾಗಿ ಖಾಸಗಿ ವಿಚಾರಗಳಿಗೆ ಹೆಚ್ಚಿನ ಒತ್ತು ನೀಡಿ ಪ್ರಸಾರಮಾಡಲಾಗುತ್ತಿದೆ ಇದರಿಂದಾಗಿ ಮಕ್ಕಳ ಮನಸ್ಸಿನ ಮೇಲೂ ಪರಿಣಾಮ ಬೀರುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು. ಚುನಾಯಿತ ಪ್ರತಿನಿಧಿಗಳಾದ ನಮಗೂ ಜವಬ್ದಾರಿಯಿದೆ. ಒಂದು ವೇಳೆ ನಮ್ಮಿಂದ ತಪ್ಪು ನಡೆದರೆ ಬರವಣಿಗೆಯ ಮೂಲಕ ಎಚ್ಚರಿಸಿದರೆ ತಿದ್ದಿಕೊಂಡು ನಡೆಯುತ್ತೇವೆ ಎಂದು ಹೇಳಿದರು.

**ಅಪಘಾತ ವಿಮೆಗೆ ನೆರವು**

ಸಂಸದನಾಗಿದ್ದರೂ ಅಥವಾ ಮಾಜಿ ಸಂಸದನಾದರೂ ಕೂಡ ನಿಮ್ಮ ಅಪಘಾತ ವಿಮೆಗೆ ಆರ್ಥಿಕ ನೆರವು ನೀಡುತ್ತೇನೆ ಎಂದು ಭರವಸೆ ನೀಡಿದರು. ಅಂಚೆ ಇಲಾಖೆಯ ವ್ಯವಸ್ಥಾಪಕ ಮನೋ ಪ್ರದೀಪ್ ಮಾತನಾಡಿ, ಅಂಚೆ ಇಲಾಖೆಯ ಜೀವವಿಮೆ ಯೋಜನೆಗಳ ಕುರಿತು ಮಾಹಿತಿ ನೀಡಿದರು. ಸಂಘದ ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್ ಪ್ರಾಸ್ತಾ ವಿಕವಾಗಿ ಮಾತನಾಡಿದರು. ರೇಷ್ಮೆನಾಡು ಪತ್ರಿಕೆಯ ಸಂಪಾದಕಿ ಸವಿತಾ ಜಯಂತ್ ನಿರೂಪಣೆ ಮಾಡಿದರು. ರಾಜ್ಯ ಸಮಿತಿ ಸದಸ್ಯ ಮಹೇಂದ್ರ, ಖಜಾಂಚಿ ಪುಟ್ಟರಾಜು ಹಾಗೂ ಸಂಘದ ಜಿಲ್ಲಾ ಘಟಕ ಪದಾಧಿಕಾರಿಗಳು, ಜಿಲ್ಲೆಯ ಐದು ತಾಲೂಕು ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರು ಹಾಜರಿದ್ದರು.

## ನಿವೇಶನ ಕೊಡಿಸಲು ಪ್ರಾಮಾಣಿಕ ಪ್ರಯತ್ನ :

ಪತ್ರಕರ್ತರಿಗೆ ನಿವೇಶನ ಹಂಚಿಕೆ ವಿಚಾರ ನೆನಗುದಿಗೆ ಬಿದ್ದಿದೆ. ತಾವು ಮನಸ್ಸು ಮಾಡಿ ನಿವೇಶನ ಕೊಡಿಸಿಕೊಡಿಸುವಂತೆ ಪತ್ರಕರ್ತರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಎಂ.ವಿ.ಮಂಜುನಾಥ್ ಮಾಡಿಕೊಂಡ ಮನವಿಗೆ ಸ್ಪಂಧಿಸಿ ಮಾತನಾಡಿದ ಅವರು ನಿವೇಶನ ಕೊಡಿಸುವ ಬಗ್ಗೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಹೇಳಿದರು.

## ಅಪಘಾತ ವಿಮೆ ಅನುಷ್ಠಾನ

ಇದಕ್ಕೂ ಮೊದಲು ಪ್ರಾಸ್ತಾವಿಕವಾಗಿ ಮಾತನಾಡಿದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಆರ್. ಎನ್.ಸಿದ್ದಲಿಂಗಸ್ವಾಮಿ ಮಾತನಾಡಿ,ಚುನಾವಣೆಯ ಪೂರ್ವದಲ್ಲಿ ನಮ್ಮ ತಂಡ ಅಧಿಕಾರಕ್ಕೆ ಬಂದರೆ ಸಂಘದ ಎಲ್ಲ ಸದಸ್ಯರಿಗೆ ಜೀವವಿಮೆ ಮಾಡಿಸುವುದಾಗಿ ಆಶ್ವಾಸನೆ ನೀಡಲಾಗಿತ್ತು. ಬಳಿಕ ಕಾರ್ಯಕಾರಿಣಿ ಸಮಿತಿ ನಿರ್ಣಯದಂತೆ ಸಂಸದ ಸುನೀಲ್‌ಬೋಸ್ ಅವರನ್ನು ಭೇಟಿ ಮಾಡಿ ಸಂಘದ ಎಲ್ಲ174 ಸದಸ್ಯರಿಗೆ ಜೀವವಿಮೆ ವೆಚ್ಚ ಭರಿಸಬೇಕು ಎಂದು ಮನವಿ ಮಾಡಿದ್ದೇವು ಸಂಸದರು ನಮ್ಮ ಮನವಿಗೆ ಸ್ಪಂದಿಸಿ ಸದಸ್ಯರಿಗೆ ಜೀವವಿಮೆ ಹಣದ ವೆಚ್ಚವನ್ನು ಭರಿಸುವ ಮೂಲಕ ನೆರವು ನೀಡಿರುವುದಾಗಿ ತಿಳಿಸಿದರು.

# ಚಿರತೆ ದಾಳಿಗೆ ಹಸು ಬಲಿ

ಹನೂರು: ಚಿರತೆ ದಾಳಿಗೆ ಹಸುವೊಂದು ಬಲಿಯಾಗಿರುವ ಘಟನೆ ರಾಮಾಪುರ ಸಮೀಪದ ಅಪ್ಪಿ ಕುಳಿ ಬಳಿ ಗುರುವಾರ ತಡರಾತ್ರಿ ಜರುಗಿದೆ.

ರಾಮಾಪುರ ಗ್ರಾಮದ ಕಂದ ಎಂಬ ರೈತನೇ ಹಸು ಕಳೆದುಕೊಂಡ ರೈತನಾಗಿದ್ದಾನೆ.

**ಘಟನೆ ವಿವರ**

ರಾಮಾಪುರ ಭಾಗದಲ್ಲಿ ಹಸುಗಳನ್ನು ಮೇಯಿಸಲು ಕಾಡಿನಲ್ಲಿ ಬಿಟ್ಟು ಬರುವುದು ವಾಡಿಕೆ. ಹಾಗೆಯೇ ಹಸುಗಳು ಮರಳಿ ಸಂಜೆ ವೇಳೆ ಬರುವ ವೇಳೆಗೆ ಜಮೀನಿನ ಸಮೀಪದಲ್ಲಿ ಹಸು ಮೇಯುತ್ತಿದ್ದ ಸಂದರ್ಭದಲ್ಲಿ ಏಕಾಏಕಿ ಚಿರತೆ ದಾಳಿ ನಡೆಸಿ ಹಸುವನ್ನು ಕೊಂದು ತಿಂದು ಹಾಕಿದೆ.ಈಗಾಗಿ ರೈತ ಕಂದ ನಿಗೆ ಸಾವಿರಾರು ರೂ ನಷ್ಟ ಉಂಟಾಗಿದೆ.

**ಚಿರತೆ ದಾಳಿ ಮೊದಲಲ್ಲ**

ಈ ಭಾಗದಲ್ಲಿ ಆಗಿಂದಾಗೆ ಚಿರತೆ ದಾಳಿ ಮಾಡುತ್ತಿದ್ದೂ ಸಾಕು ಪ್ರಾಣಿಗಳಾದ ನಾಯಿ, ಮೇಕೆ ಕುರಿ ತಿನ್ನುತ್ತಿದೆ. ಹಾಗಾಗಿ ಚಿರತೆ ದಾಳಿ ಈ ಭಾಗದಲ್ಲಿ ಮಿತಿ ಮೀರಿದ್ದು ತೋಟದ ಮನೆಗಳ ಜನರು ಭಯ ಭೀತರಾಗಿದ್ದಾರೆ. ಹಾಗಾಗಿ ಚಿರತೆ ಸೆರೆ ಹಿಡಿದು ಬೇರೆಡೆ ಸ್ಥಳಾಂತರ ಮಾಡಿ ಎಂದು ಗ್ರಾಮಸ್ಥರು ಒತ್ತಾಯ ಮಾಡಿದ್ದಾರೆ.

**ಪರಿಹಾರ ನೀಡಿ**

30 ಸಾವಿರ ರೂ ಬೆಲೆ ಬಾಳುವ ಹಸುವನ್ನು ಕಳೆದುಕೊಂಡ ರೈತ ಸಾಲದ ಸುಳಿಯಲ್ಲಿ ಸಿಲುಕಿದಂತಾಗಿದೆ. ಹಾಗಾಗಿ ಸಂಬಂಧ ಪಟ್ಟ ಇಲಾಖೆಯ ಅಧಿಕಾರಿಗಳು ಇತ್ತ ಗಮನಹರಿಸಿ ಸೂಕ್ತ ಕ್ರಮ ಕೈಗೊಂಡು ಪರಿಹಾರ ನೀಡಬೇಕು ಎಂದು ರೈತ ಕಂದ ಆಗ್ರಹ ಮಾಡಿದ್ದಾರೆ.



# ನೀರಿನ ಸಮಸ್ಯೆಯಾಗದಿರಲಿ

## ಶಾಸಕ ಗಣೇಶಪ್ರಸಾದ್ ಸೂಚನೆ | ಕುಡಿಯುವ ನೀರಿನ ಬಗ್ಗೆ ಸಭೆ

ಗುಂಡ್ಲುಪೇಟೆ: ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರದಂತೆ ಪಿಡಿಓಗಳು ಕ್ರಮ ವಹಿಸಿ, ಅಗತ್ಯ ಬಿದ್ದರೆ ಗಮನಕ್ಕೆ ತರುವಂತೆ ಶಾಸಕ ಎಚ್.ಎಂ.ಗಣೇಶಪ್ರಸಾದ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಪಟ್ಟಣದ ತಾಲೂಕು ಕಚೇರಿ ಸಭಾಂಗಣದಲ್ಲಿ ನಡೆದ ಬರ ನಿರ್ವಹಣಾ ಸಮಿತಿ ಸಭೆಯಲ್ಲಿ ಮಾತನಾಡಿದ ಶಾಸಕರು, ಕುಡಿಯುವ ನೀರಿನ ಸಮಸ್ಯೆ ಗಂಭೀರವಾಗುವ ಹಿನ್ನೆಲೆಯಲ್ಲಿ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಸಮನ್ವಯ ಮತ್ತು ಕಾಳಜಿ ವಹಿಸಿ ಕೆಲಸ ಮಾಡಬೇಕು ಎಂದು ಸೂಚನೆ ನೀಡಿದರು. ಗ್ರಾಮಗಳಲ್ಲಿ ಚರಂಡಿ ಹೂಳೆತ್ತುವುದಕ್ಕೆ ಮೊದಲ ಆದ್ಯತೆಯನ್ನು ಗ್ರಾಪಂ ಅಭಿವೃದ್ಧಿ ಅಧಿಕಾರಿಗಳು ನೀಡಬೇಕು. ತೊಂಡವಾಡಿ ಗ್ರಾಮದಲ್ಲಿ ಚರಂಡಿ ಸ್ವಚತೆ ಮಾಡುವ ಜೊತೆಗೆ ಸಾರ್ವಜನಿಕರಿಗೆ ಅರಿವು ಮೂಡಿಸಿ. ಕೂತನೂರಿನಲ್ಲಿ ಅನೈರ್ಮಲ್ಯ ತಾಂಡವಾ ಡುವ ಬಗ್ಗೆ ಶಾಸಕರು ಅಭಿವೃದ್ಧಿ ಅಧಿಕಾರಿ ಕುಮಾರಸ್ವಾಮಿ ರಿಗೆ ಸೂಚನೆ ನೀಡಿದರು. ಪಟ್ಟಣದ ಡೋಂಗ್ರಿ ಗೆರೆಶಿಯಾ ಕಾಲನಿಯಲ್ಲಿ ನೀರಿನ ಸಮಸ್ಯೆಗೆ ಹೊಸದಾಗಿ ಕೊಳವೆ ಬಾವಿ ಕೊರೆಯಿ ಸಲು ಸೂಚಿಸಿದರು.

ತಗ್ಗಲೂರು ಗ್ರಾಮದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿ. ಬರದ ಕಾರಣಕ್ಕೆ ಅಂತರ್ಜಲ ಲಭ್ಯತೆ ಇಲ್ಲದಿರುವ ಕಾರಣ ಅನಾವಶ್ಯಕವಾಗಿ ಬೋರ್ ವೆಲ್ ಕೊರೆಸುವುದು ಬೇಡ. ಬದಲಾಗಿ ಖಾಸಗೀಯವರ ಬೋರ್‌ವೆಲ್‌ಗಳನ್ನು ತಾತ್ಕಾಲಿಕವಾಗಿ ಬಳಸಿಕೊಳ್ಳಲು ಅವಕಾಶ ಮಾಡಿಕೊಳ್ಳಿ ಎಂದು ಸಲಹೆ ನೀಡಿದರು. ಬರ ನಿರ್ವಹಣೆ ವಿಷಯದಲ್ಲಿ ತಾ.ಪಂ ಇಒ ಮತ್ತು ಜಿ.ಪಂ ಸಿಇಒ ರ ಮೂಲಕ ಅಗತ್ಯ ಸಲಹೆ, ಸಹಕಾರ ಕೊಡಿಸುವ ಭರವಸೆಯನ್ನು ಶಾಸಕರು ನೀಡಿದರು.

ಈ ವೇಳೆ ತಹಸೀಲ್ದಾರ್ ಎಂ.ಎಸ್.ತನ್ಮಯ್, ತಾಪಂ ಇಒ ಷಣ್ಮುಗಂ, ಬಿಇಒ ಟಿ.ಆರ್.ಸ್ವಾಮಿ, ತೋಟಗಾರಿಕೆ ಇಲಾಖೆ ಹಿರಿಯ ನಿರ್ದೇಶಕ ಭಾಸ್ಕರ್, ಪಶು ಸಂಗೋಪನಾ ಇಲಾಖೆ ಸಹಾಯಕ ನಿರ್ದೇಶಕ ಮಾದೇಶ್, ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಶಶಿಧರ್, ಸಿಡಿಪಿಒ ಹೇಮಾವತಿ, ಟಿಎಚ್‌ಒ ಡಾ.ಅಲೀಂಪಾಷ ಸೇರಿದಂತೆ ವಿವಿಧ ಗ್ರಾಪಂ ಪಿಡಿಓಗಳು, ಇಲಾಖಾ ಅಧಿಕಾರಿಗಳು ಹಾಜರಿದ್ದರು. ಗುಂಡ್ಲುಪೇಟೆ ಪಟ್ಟಣದ ತಾಲೂಕು ಕಚೇರಿ ಸಭಾ ಭವನದಲ್ಲಿ ಶಾಸಕ ಎಚ್.ಎಂ.ಗಣೇಶ್‌ಪ್ರಸಾದ್ ಅಧ್ಯಕ್ಷತೆಯಲ್ಲಿ ನಿರ್ವಹಣಾ ಸಮಿತಿ ಸಭೆ ನಡೆಯಿತು.



## ಸಮಸ್ಯೆಯ ಬಗ್ಗೆ ಪಿಡಿಒ ಮಾಹಿತಿ

ತಾಲೂಕಿನ ಗ್ರಾಪಂ ಕೇಂದ್ರ ಹಂಗಳದಲ್ಲಿ ಪೂರ್ಣ ಪ್ರಮಾಣದಲ್ಲಿ ಕೊಳವೆ ಬಾವಿಗಳನ್ನು ಆಶ್ರಯಿಸಿರುವ ಕಾರಣ ನಾಲ್ಕು ದಿನಕ್ಕೊಮ್ಮೆ ಕುಡಿವ ನೀರು ಪೂರೈಸುತ್ತಿರುವ ಮತ್ತು ಬೇಸಿಗೆಯಲ್ಲಿ ಸಮಸ್ಯೆ ಬಿಗಡಾಯಿಸುವ ಬಗ್ಗೆ ಮತ್ತು ಬೊಮ್ಮನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುಂದಕೆರೆ, ಉಪಕಾರ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಪಿಡಿಒ ವಿ.ಶಾಂತಮಲ್ಲಪ್ಪ ಮಾಹಿತಿ ನೀಡಿದರು. ಬಹುಗ್ರಾಮ ಕುಡಿವ ನೀರಿನ ಸಂಪರ್ಕವಿಲ್ಲದೇ ಮಡಹಳ್ಳಿ ಗ್ರಾಮದಲ್ಲೂ ಕುಡಿಯುವ ನೀರಿಗೆ ಅಭಾವ ಉಂಟಾಗುವ ಮುನ್ಸೂಚನೆ ಬಗ್ಗೆ ಪಿಡಿಒ ಎಸ್.ಪ್ರಸಾದ್ ಮಾಹಿತಿ ನೀಡಿದರು.

## ಹಲವು ವಿಷಯಗಳ ಚರ್ಚೆ

ಕುರುಬರಹುಂಡಿ ಬಳಿ ಇರುವ ಕೊಳವೆ ಬಾವಿಗೆ ಮೋಟಾರು ಪಂಪ್ ಇತರೆ ಸಾಧನ ಸಲಕರಣೆ ಅಳವಡಿಸದೇ ಬೆಳಚಲವಾಡಿಯಲ್ಲಿ ಆಗಿರುವ ಸಮಸ್ಯೆ ಬಗ್ಗೆ ಪಿಡಿಒ ಗುರುಪ್ರಸಾದ್, ಹೆಗ್ಗವಾಡಿ ಗ್ರಾಮದ ಯಂತ್ರಾಗಾರದ ಅಕ್ರಮ ವಿದ್ಯುತ್ ಸಂಪ ರ್ಕಕ್ಕೆ ಸೆಸ್ಕ್ ವಿಧಿಸಿದ ದಂಡ ಪಾವತಿಸಲಾಗದೇ ಆಗಿರುವ ಸಮಸ್ಯೆ ಬಗ್ಗೆ ಪಿಡಿಒ ನಾಗಭೂಷಣ ಆರಾಧ್ಯ ಹೇಳಿಕೊಂಡರು. ಪುತ್ತನಪುರ ಹಂಗಳ ಪುರ, ಬಸವಾಪುರ ಗ್ರಾಮಗಳ ಕುಡಿವ ನೀರಿನ ಯಂತ್ರಾಗಾರಗಳ ಬಿಲ್ ಪಾವತಿಗೆ ಅನುದಾನವಿಲ್ಲದ ವಿಷಯ ಗಮನ ಸೆಳೆಯಿತು.

# ರಾಷ್ಟ್ರೀಯ ವಿಜ್ಞಾನ ದಿನಾಚರಣೆ



ಹನೂರು: ಹನೂರಿನಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮದಲ್ಲಿ ನಮ್ಮ ಶಾಲೆಯ ಮಕ್ಕಳು ರಸಪ್ರಶ್ನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಪ್ರಥಮ ಸ್ಥಾನವನ್ನು ಗಳಿಸಿ ಶಾಲೆಗೆ ಕೀರ್ತಿಯನ್ನು ತಂದು ಕೊಟ್ಟಿದ್ದಾರೆ ಎಂದು ಮುಖ್ಯ ಶಿಕ್ಷಕ ಕೃಷ್ಣ ತಿಳಿಸಿದರು.

ಪಟ್ಟಣದ ಮಾದರಿ ಶಾಲೆಯಲ್ಲಿ ಆರ್‌ಎಸ್‌ಎ ಹಾಗೂ ಶಿಕ್ಷಣ ಫೌಂಡೇಶನ್ ಮತ್ತು ಶಿಕ್ಷಣ ಇಲಾಖೆಯ ಸಹಯೋಗದೊಂದಿಗೆ ನಡೆದ ರಸ ಪ್ರಶ್ನೆ ಕಾರ್ಯಕ್ರಮದಲ್ಲಿ ಪ್ರಥಮ ಬಹುಮಾನ ಪಡೆದ ಮಕ್ಕಳನ್ನು ಅಭಿನಂದನೆಗಳನ್ನು ಸಲ್ಲಿಸಿ ನಂತರ ಮಾತನಾಡಿದರು. ನಮ್ಮ ದಿನ್ನಳ್ಳಿ ಕನ್ನಡ ಶಾಲೆಯ ಮಕ್ಕಳು ರಸಪ್ರಶ್ನೆ ಕಾರ್ಯಕ್ರಮದಲ್ಲಿ ಪ್ರಥಮ ಸ್ಥಾನವನ್ನು ಗಳಿಸಿ ನಮ್ಮ ಶಾಲೆಯ ಕೀರ್ತಿಯನ್ನು ಹೆಚ್ಚಿಸಿರುತ್ತಾರೆ. ಖಾಸಗಿ ಶಾಲೆಗಿಂತಲೂ ನಮ್ಮ ಸರ್ಕಾರಿ ಶಾಲೆ ಮಕ್ಕಳು ವಿಭಿನ್ನ ಎಂಬುದನ್ನು ಮತ್ತೆ ಮತ್ತೆ ರುಜುವಾತು ಮಾಡುತ್ತಿದ್ದಾರೆ ಸರ್ಕಾರಿ ಶಾಲೆಯಲ್ಲಿ ಕಲಿಕೆ ಉತ್ತಮವಾದ ಕಲಿಕೆ ಉಂಟಾಗುತ್ತಿದೆ ಎನ್ನುವುದಕ್ಕೆ ಇದೆ ಸಾಕ್ಷಿಯಾಗಿದೆ. ಹಾಗಾಗಿ ಮಕ್ಕಳನ್ನ ಸರ್ಕಾರಿ ಶಾಲೆಗೆ ಸೇರಿಸಿ ಎಂದರು.

**ಅಭಿನಂದನೆಗಳನ್ನು ಸಲ್ಲಿಸಿದ ಗ್ರಾಮಸ್ಥರು**

ಗ್ರಾಮೀಣ ಭಾಗದ ಮಕ್ಕಳು ರಸ ಪ್ರಶ್ನೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಉತ್ತಮವಾದ ಉತ್ತರ ಹೇಳುವ ಮೂಲಕ ಪ್ರಥಮ ಬಹುಮಾನ ಪಡೆದುಕೊಂಡು ಶಾಲೆಗೆ ಗ್ರಾಮಕ್ಕೆ ಕೀರ್ತಿ ತಂದಿದ್ದಾರೆ. ಅವರಿಗೆ ಗ್ರಾಮಸ್ಥರ ಹಾಗೂ ಎಸ್ ಡಿ ಎಂ ಸಿ ಸಮಿತಿಯ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಿದರು. ಇದೆ ಸಂದರ್ಭದಲ್ಲಿ ಶಾಲಾ ಮಕ್ಕಳು ಹಾಗೂ ಶಿಕ್ಷಕರಾದ ಪೊನ್ನಸ್ವಾಮಿ, ಶಿಕ್ಷಕಿಯರಾದ ಅಭಿಲಾಷ ಮತ್ತು ಮಾಲಾಶ್ರೀ ಇನ್ನಿತರರು ಇದ್ದರು.

# ವಿಶೇಷ ಚೇತನರಿಗೆ ವಾಹನ ವಿತರಣೆ



ಮೈಸೂರು: ನಗರದ ಜಿಲ್ಲಾಧಿಕಾರಿಗಳ ಕಛೇರಿಯ ಆವರಣದಲ್ಲಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್, ಕಾರ್ಮಿಕ ಇಲಾಖೆ, ಕಾರ್ಖಾನೆ ಬಾಯ್ಲರ್, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ ಹಾಗೂ ವಿವಿಧ ಉದ್ಯೋಗದಾತರ ಸಹಯೋಗದಲ್ಲಿ ಕಾರ್ಪೊರೇಶನ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿ ಯೋಜನೆಯಡಿಯಲ್ಲಿ ಮೈಸೂರು ಜಿಲ್ಲೆಯ ವಿಶೇಷ ಚೇತನರಿಗೆ ವಿವಿಧ ಉದ್ಯೋಗದಾತರ ಪ್ರಾಯೋಜಿತ 22 ಯಾಂತ್ರಿಕ ತ್ರಿಚಕ್ರ ವಾಹನಗಳನ್ನು ವಿತರಣೆ ಮಾಡಲಾಯಿತು.

ಶಾಸಕ ತನ್ವೀರ್ ಸೇಠ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ವಿಶೇಷ ಚೇತನರಿಗೆ ತ್ರಿಚಕ್ರವಾಹನಗಳನ್ನು ವಿತರಿಸಿ ಮಾತನಾಡಿ ಇಂಜಿನಿಯರ್ ಗಳು ಇಂತಹ ತಾಂತ್ರಿಕ ತ್ರಿಚಕ್ರ ವಾಹನಗಳ ವಿನ್ಯಾಸ ಮಾಡಿರುವುದನ್ನು ನೋಡಿ ಸಂತೋಷವಾಗುತ್ತದೆ. ಮುಂದೆ ಇನ್ನು ಹೆಚ್ಚಿನ ಯೋಜನೆಗಳನ್ನು ಅನುಷ್ಠಾನಗೊಳಿಸಿ ವಿಶೇಷ ಚೇತನರನ್ನು ಮತ್ತಷ್ಟು ಮಾನಸಿಕವಾಗಿ ಬಲಿಷ್ಟರನ್ನಾಗಿ ಮಾಡಿ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ್ ರೆಡ್ಡಿ, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆಯ ಕಾರ್ಖಾನೆ, ಬಾಯ್ಲರ್ಗಳು ಕಾರ್ಖಾನೆಗಳ ಜಂಟಿ ನಿರ್ದೇಶಕ ಹೆಚ್.ಎಸ್ ನರೇಂದ್ರಬಾಬು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪ ನಿರ್ದೇಶಕ ಬಿ.ಬಸವರಾಜು, ಕಾರ್ಖಾನೆ ಬಾಯ್ಲರ್ ಗಳು, ಕೈಗಾರಿಕಾ ಸುರಕ್ಷತೆ ಮತ್ತು ಸ್ವಾಸ್ಥ್ಯ ಇಲಾಖೆ ಉಪನಿರ್ದೇಶಕ ಎಂ.ಎಸ್ ಮಹದೇವು, ಸಹಾಯಕ ಕಾರ್ಮಿಕ ಆಯುಕ್ತ ಎಲ್.ಲಲಿತಾ ಬಾಯಿ, ಕಾರ್ಮಿಕ ಅಧಿಕಾರಿ ಚೇತನ್ ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

# ಮಾ.1ಕ್ಕೆ ರೇಣುಕಾಚಾರ್ಯ ಜಯಂತಿ

ಮೈಸೂರು: ಜಿಲ್ಲಾಡಳಿತ, ರೇಣುಕಾಚಾರ್ಯ ಜಯಂತ್ಯುತ್ಸವ ಸಮಿತಿ ವತಿಯಿಂದ ಮಾ. 1 ರಂದು ಬೆಳಗ್ಗೆ 10.30ಕ್ಕೆ ಕಲಾ ಮಂದಿರದಲ್ಲಿ ರೇಣುಕಾಚಾರ್ಯ ಜಯಂತಿ ಆಚರಿಸಲಾಗುತ್ತಿದೆ ಎಂದು ಸಮಿತಿ ಪದಾಧಿಕಾರಿ ಶ್ರೀಶೈಲ ತಿಳಿಸಿದರು.

ಸಿಎಂ ಸಿದ್ದರಾಮಯ್ಯ ಉಪಸ್ಥಿತರಿರುವರು, ಸಚಿವ ಕೆ. ವೆಂಕಟೇಶ್, ಶಾಸಕ ಅನಿಲ್‌ಕುಮಾರ್, ಎ.ಬಿ. ರಮೇಶ್ ಬಂಡಿಸಿದ್ದೇಗೌಡ ಇನ್ನಿತರರು ವೇದಿಕೆಯಲ್ಲಿರುವರು, ಶಾಸಕ ಹರೀಶ್‌ಗೌಡ ಅಧ್ಯಕ್ಷತೆ ವಹಿಸುವರೆಂದರು. ದಯಾನಂದ್, ಜ್ಞಾನಜ್ಯೋತಿ, ಬೀರೇಶ್, ಮಾಲಿನಿ, ಬೀರೇಶ್ ಇದ್ದರು.




**ಪ್ರೊ ಮೊರಬದ ಮಲ್ಲಿಕಾರ್ಜುನ ಅಭಿಮತ**

# ಕುವೆಂಪು ಆಶಯದ ವೈಚಾರಿಕತೆಗೆ ಬೆಳಕು ನೀಡಿದ ಡಾ.ಜಿ.ಎಸ್.ಎಸ್.

ಚಾಮರಾಜನಗರ, ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಕುದೇರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹಯೋಗದೊಂದಿಗೆ ಚಕೋರ ಸಾಹಿತ್ಯ ವಿಚಾರ ವೇದಿಕೆಯಿಂದ ಡಾ. ಜಿ.ಎಸ್. ಶಿವರುದ್ರಪ್ಪ ರವರ ಜನ್ಮ ಶತಮಾನೋತ್ಸವದ ಪ್ರಯುಕ್ತ ಕುದೇರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಗುರುವಾರ ಡಾ. ಜಿ.ಎಸ್.ಎಸ್ ನೆನಪುಗಳ ಹಣತೆ ಉಪನ್ಯಾಸ ಕಾರ್ಯಕ್ರಮ ಅರ್ಥಪೂರ್ಣವಾಗಿ ನಡೆಯಿತು.

ಮೈಸೂರಿನ ಜೆ.ಎಸ್.ಎಸ್ ವಿದ್ಯಾಪೀಠದ ನಿರ್ದೇಶಕರು ಮತ್ತು ಜಿ.ಎಸ್.ಎಸ್ ಅವರ ಶಿಷ್ಯರೂ ಆದ ಪ್ರೊ. ಮೊರಬದ ಮಲ್ಲಿಕಾರ್ಜುನ ಅವರು ಜಿ.ಎಸ್.ಎಸ್ ಅವರ ಸಾಹಿತ್ಯ, ವ್ಯಕ್ತಿತ್ವ ಮತ್ತು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಅವರು ಮಾಡಿದ ಸಾಧನೆಗಳ ಬಗ್ಗೆ ಮಾತನಾಡಿದರು. ಡಾ. ರವೀಂದ್ರನಾಥ ಠಾಕೂರರು ಬರೆದ ಒಂದು ಸಣ್ಣ ಕಥೆಯ ಆಶಯವನ್ನು ಶಿವರುದ್ರಪ್ಪನವರು ಹೇಗೆ ತಮ್ಮ ಕಾವ್ಯ ಪರಂಪರೆಯಲ್ಲಿ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಸಾಧಿಸಿ ತೋರಿಸಿದರು. ಅನ್ನುವುದನ್ನು ನೆರೆದಿದ್ದ ವಿದ್ಯಾರ್ಥಿ–




ವಿದ್ಯಾರ್ಥಿನಿಯರು ಮತ್ತು ಉಪನ್ಯಾಸಕರ ಸಮ್ಮುಖದಲ್ಲಿ ಸವಿವರವಾಗಿ ವಿವರಿಸಿದರು.

ಮಲ್ಲಿಕಾರ್ಜುನ ಅವರು ಹೇಳಿದ ಠಾಕೂರರ ಆ ಕಥೆ ಹೀಗಿದೆ ಮುಳುಗುತ್ತಿರುವ ಸೂರ್ಯ ಜಗತ್ತಿಗೆ ಸಾರಿ ಹೇಳುತ್ತಾನೆ, ಹಗಲಿನ ಹನ್ನೆರಡು ಗಂಟೆ ನಾನು ಈ ಜಗತ್ತಿಗೆ ಬೆಳಕು ನೀಡಿದ್ದೇನೆ. ಇನ್ನುಳಿದ ಹನ್ನೆರಡು ಗಂಟೆ ಈ ಜಗತ್ತಿಗೆ ಯಾರು ಬೆಳಕು ನೀಡುತ್ತೀರಿ? ಅನ್ನುವ ಸವಾಲು ಎಸೆದಾಗ, ಕತ್ತಲಿನಿಂದ ಎದ್ದು ಬಂದ ಒಂದು ಸಣ್ಣ ಬುಡ್ಡಿ ದೀಪ ಹೇಳುತ್ತದೆ, 'ನನಗೆ ನಿನ್ನಷ್ಟು ವ್ಯಾಪಕವಾಗಿ, ಪ್ರಕಾರವಾಗಿ ಬೆಳಕು ನೀಡಲು ಸಾಧ್ಯವಾಗದಿರಬಹುದು, ಆದರೆ ಸಾಧ್ಯವಾದಷ್ಟು ನನ್ನ ಶಕ್ತಿ ಮೀರಿ ನನ್ನ ಸುತ್ತಲಿನ ಪರಿಸರಕ್ಕೆ ಬೆಳಕು ನೀಡಲು ಪ್ರಯತ್ನಿಸುತ್ತೇನೆ' ಅಂತ ಹೇಳಿ ತನ್ನ ಕೆಲಸ ಪ್ರಾರಂಭಿಸಿತಂತೆ" ಅನ್ನುವ ಕಥೆಯಲ್ಲಿ ಬರುವ ಆ ಬುಡ್ಡಿ ದೀಪದ ಮಾತಿನಂತೆ ಜಿ.ಎಸ್.ಎಸ್ ಅವರು ತಮ್ಮ ಸಾಹಿತ್ಯದಲ್ಲಿ ಮತ್ತು ಕಾರ್ಯದಲ್ಲಿ ಈ ಸಮಾಜಕ್ಕೆ ತಮ್ಮ ಶಕ್ತಿ ಮೀರಿ ಬೆಳಕು ನೀಡಲು ಪ್ರಯತ್ನಿಸಿದರು. ಹಾಗಾಗಿ ಅವರ ಕಾವ್ಯದಲ್ಲಿ ಹಣತೆ, ದೀಪ, ಜ್ಯೋತಿ ಅನ್ನುವ ಪ್ರತಿಮೆಗಳು ಮತ್ತೆ ಮತ್ತೆ ಕಾಣಿಸಿಕೊಂಡವು ಎಂದು ವಿವರಿಸಿದರು. ಜಿ.ಎಸ್.ಎಸ್ ಅವರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕೆಲಸ ಮಾಡುತ್ತಿದ್ದ ಸಮಯದಲ್ಲಿ ಇಡೀ ಶಿಕ್ಷಣ ವ್ಯವಸ್ಥೆಯಲ್ಲಿ ಮೌಢ್ಯವನ್ನು ತೊಲಗಿಸಿ, ವೈಚಾರಿಕತೆಯನ್ನು ಕಟ್ಟುವುದು ಹೇಗೆ? ಇಡೀ ವಿದ್ಯಾರ್ಥಿ ಸಮೂಹವನ್ನು ವೈಚಾರಿಕವಾಗಿ ಮತ್ತು ವೈಜ್ಞಾನಿಕವಾಗಿ ಚಿಂತಿಸುವಂತೆ ರೂಪಿಸು ವುದು ಹೇಗೆ? ಅದಕ್ಕೆ ಏನೇನು ಕಾರ್ಯಕ್ರಮ ಮಾಡಬೇಕು ಅಂತ ಡಾ.ಹೆಚ್. ನರಸಿಂಹಯ್ಯನವರ ಜೊತೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸಿದ್ದರಿಂದ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಒಂದು ಆರೋಗ್ಯ ಪೂರ್ಣ ವಾತಾವರಣ ಸೃಷ್ಟಿಯಾಯಿತು. ಆ ವಾತಾವರಣದಲ್ಲಿ ಬೆಳೆದ ಹಲವಾರು ವಿದ್ಯಾರ್ಥಿ, ವಿದ್ಯಾರ್ಥಿನಿಯರು ಆ ವೈಚಾರಿಕ, ವೈಜ್ಞಾನಿಕ ಚಿಂತನೆಗಳನ್ನು ಮೈಗೂಡಿಸಿಕೊಂಡು ಅದನ್ನು ಇಡೀ ನಾಡಿನಾದ್ಯಂತ ವಿಸ್ತರಿಸತೊಡಗಿದರು ಎಂದರು.

ರಾಷ್ಟ್ರಕವಿ ಕುವೆಂಪು ಅವರ ಪರಮ ಶಿಷ್ಯರಾಗಿದ್ದ ಡಾ. ಜಿ.ಎಸ್.ಎಸ್ ಅವರು ಕುವೆಂಪು ಅವರ ಆಶಯಗಳ ಮುಂದುವರಿದ ಭಾಗ ಅನ್ನುವುದು ನಿರ್ವಿವಾದ. ಈ ಕಾರಣಗಳಿಗಾಗಿಯೇ ಕುವೆಂಪು ಅವರ ನಂತರ "ರಾಷ್ಟ್ರ ಕವಿ" ಅನ್ನುವ ಬಿರುದಿಗೆ ಪಾತ್ರರಾದವರು ಡಾ. ಜಿ.ಎಸ್ ಶಿವರುದ್ರಪ್ಪ ಅವರಿಗೆ ನೂರು ವರ್ಷಗಳು ತುಂಬಿದ ಶತಮಾನೋತ್ಸವದ ಈ ಸಂದರ್ಭದಲ್ಲಿ ಅವರ ಚಿಂತನೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಅವರ ಆಶಯದ ನಾಡನ್ನು ನಾವೆಲ್ಲ ಕಟ್ಟಬೇಕಾಗಿದೆ ಎಂದರು.ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಥಿಯೋಡರ್ ಲೂಥರ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಸಾಹಿತಿಗಳಾದ ಕೆ. ವೆಂಕಟರಾಜು ಅವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಾಹಿತ್ಯ ಅಕಾಡೆಮಿಯ ಸದಸ್ಯರಾದ ಪ್ರಕಾಶರಾಜ್ ಮೇಹು ಅವರು ಚಕೋರ ಕಾರ್ಯಕ್ರಮದ ಉದ್ದೇಶಗಳನ್ನು ವಿವರಿಸಿದರು. ಖ್ಯಾತ ಗಾಯಕರಾದ ಸಿ.ಎಂ. ನರಸಿಂಹಮೂರ್ತಿ, ಪೊ?ರ. ಎ.ಎಂಶಿವಸ್ವಾಮಿ ಮತ್ತು ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಸಿಂಧು ಅವರು ಜಿ.ಎಸ್.ಎಸ್ ಅವರ ಹಲವಾರು ಭಾವಗೀತೆ ಗಳನ್ನು ಹಾಡುವ ಮೂಲಕ ಸಂಗೀತದ ಸ್ಪರ್ಶ ನೀಡಿದರು.

## ದ್ವಿತೀಯ ಪಿಯುಸಿ ಪರೀಕ್ಷೆಗೆ ಸಕಲ ಸಿದ್ದತೆ : ಜಿಲ್ಲಾಧಿಕಾರಿ ಶ್ರೀರೂಪ

ಚಾಮರಾಜನಗರ, ದ್ವಿತೀಯ ಪಿಯುಸಿ ಪರೀಕ್ಷೆಗಳು ಇದೇ ಫೆಬ್ರವರಿ 28ರಿಂದ ಮಾರ್ಚ್ 17ರವರೆಗೆ ನಡೆಯಲಿದ್ದು, ಇದಕ್ಕಾಗಿ ಸಕಲ ಸಿದ್ದತೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ತಿಳಿಸಿದ್ದಾರೆ.



ಜಿಲ್ಲೆಯಲ್ಲಿ ಒಟ್ಟು 6285 ಹೊಸ ವಿದ್ಯಾರ್ಥಿಗಳು, 150 ಖಾಸಗಿ ವಿದ್ಯಾರ್ಥಿಗಳು ಹಾಗೂ 474 ಪುನರಾವರ್ತಿತ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 6909 ಪರೀಕ್ಷಾರ್ಥಿಗಳು ಹಾಜರಾಗಲಿದ್ದಾರೆ. ಜಿಲ್ಲೆಯಲ್ಲಿ ಒಟ್ಟು 17 ಪರೀಕ್ಷಾ ಕೇಂದ್ರಗಳು ಇರಲಿವೆ.

ಪರೀಕ್ಷಾ ದಿನಗಳಂದು ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ತಮ್ಮ ಪರೀಕ್ಷಾ ಪ್ರವೇಶ ಪತ್ರ (ಹಾಲ್ ಟಿಕೆಟ್) ತೋರಿಸಿ ತಮ್ಮ ಗ್ರಾಮಗಳಿಂದ ಪರೀಕ್ಷಾ ಕೇಂದ್ರಗಳಿಗೆ ಕೆ.ಎಸ್.ಆರ್.ಟಿ.ಸಿ ಬಸ್ಸುಗ ಳಲ್ಲಿ ಉಚಿತವಾಗಿ ಪ್ರಯಾಣ ಸಲು ಅವಕಾಶ ಕಲ್ಪಿಸಲಾಗಿದೆ. ಸಂಚರಿಸುವ ಮಾರ್ಗದಲ್ಲಿ ಪರೀಕ್ಷಾ ಕೇಂದ್ರವಿದ್ದರೆ ಕೋರಿಕೆಯ ಮೇರೆಗೆ ಬಸ್ ನಿಲುಗಡೆ ಮಾಡಲು ಕೆ.ಎಸ್.ಆರ್.ಟಿ.ಸಿ ಅಧಿಕಾರಿಗಳಿಗೆ ಸೂಚಿಸಲಾಗಿದೆ.

ಪರೀಕ್ಷಾ ದಿನಗಳಂದು ಪರೀಕ್ಷಾ ಕೇಂದ್ರಗಳಿಗೆ ಹಾಗೂ ಗೌಪ್ಯ ವಸ್ತುಗಳನ್ನು ಸಾಗಿಸುವ ವಾಹನಗಳಿಗೆ ಪೊಲೀಸ್ ಇಲಾಖೆಯಿಂದ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿದೆ. ಪರೀಕ್ಷಾ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸಲು ಅಗತ್ಯ ಸಿಬ್ಬಂದಿಗಳನ್ನು ನಿಯೋಜಿಸಲಾಗಿದೆ. ಪ್ರತಿ ಪರೀಕ್ಷಾ ಕೇಂದ್ರಕ್ಕೆ ಆರೋಗ್ಯ ಇಲಾಖೆಯ ಇಬ್ಬರು ಶುಶ್ರೂಷಕರನ್ನು ಪ್ರಥಮ ಚಿಕಿತ್ಸಾ ಕಿಟ್‌ನೊಂದಿಗೆ ನೇಮಿಸಲಾಗಿದೆ.

ಪರೀಕ್ಷೆ ನಡೆಯುವ ಸಮಯದಲ್ಲಿ ಹಾಗೂ ವಿದ್ಯಾರ್ಥಿಗಳಿಗೆ ಓದುವ ಸಮಯದಲ್ಲಿ ತೊಂದರೆಯಾಗದಂತೆ ನಿರಂತರ ವಿದ್ಯುತ್ ಪೂರೈಸಲು ಸೆಸ್ಕ್ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಪರೀಕ್ಷಾ ಕೇಂದ್ರದ ಸುತ್ತಲಿನ 200 ಮೀ. ವ್ಯಾಪ್ತಿಯನ್ನು ನಿಷೇಧಿತ ಪ್ರದೇಶವೆಂದು ಘೋಷಿಸಲಾಗಿದೆ. ಪರೀಕ್ಷಾ ಪಾವಿತ್ರತೆಯನ್ನು ಕಾಪಾಡುವ ದೃಷ್ಟಿಯಿಂದ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಸಿ.ಸಿ. ಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಸಂಪೂರ್ಣ ಪರೀಕ್ಷಾ ಪ್ರಕ್ರಿಯೆಯು ಸಿ.ಸಿ. ಟಿವಿ. ಕಣ್ಗಾವಲಿನಲ್ಲಿ ನಡೆಯಲಿದೆ. ಜಿಲ್ಲಾ ಹಂತದಲ್ಲಿ ಇದನ್ನು ವೀಕ್ಷಿಸಲು ಪ್ರತ್ಯೇಕ ತಂಡವನ್ನು ರಚಿಸಲಾಗಿದೆ. ಪರೀಕ್ಷಾ ಸಂದರ್ಭದಲ್ಲಿ ಸಾಮಾ ಜಿಕ ಜಾಲತಾಣಗಳಲ್ಲಿ ಹರಡಬಹುದಾದ ಸುಳ್ಳುಸುದ್ದಿ, ವದಂತಿಗಳಿಗೆ ವಿದ್ಯಾರ್ಥಿಗಳು ಹಾಗೂ ಪೋಷಕರು ಕಿವಿಗೊಡಬಾರದು. ಪರೀಕ್ಷಾ ಪಾವಿತ್ರತೆ ಕಾಪಾಡಲು ಎಲ್ಲಾ ಕೇಂದ್ರಗಳ ಮುಖ್ಯಸ್ಥರು ಹಾಗೂ ಪ್ರಾಂಶುಪಾಲರಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಜಿಲ್ಲಾಡಳಿತದಿಂದ ಸಹಾಯವಾಣ ತೆರೆದು ಇದಕ್ಕಾಗಿ ನುರಿತ ಉಪನ್ಯಾಸಕರನ್ನು ನಿಯೋಜಿಸಲಾಗಿದೆ. ಇವರ ಮೂಲಕ ಮಾಹಿತಿ ಪಡೆಯಬಹುದೆಂದು ಜಿಲ್ಲಾಧಿಕಾರಿ ಶ್ರೀರೂಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹಾಲು ಕರೆಯುವ ಸ್ಪರ್ಧೆ



ಗುಂಡ್ಲುಪೇಟೆ: ತಾಲ್ಲೂಕಿನ ಸೋಮಹಳ್ಳಿ ಗ್ರಾಮದಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ ಹಾಗೂ ಚಾಮುಲ್ ಸಹಯೋಗದಲ್ಲಿ ಗುಂಡ್ಲುಪೇಟೆ ತಾಲ್ಲೂಕು ಮಟ್ಟದ ಹಾಲು ಕರೆಯುವ ಸ್ಪರ್ಧೆ ಜೊತೆಗೆಮಿಶ್ರತಳಿ ಕರುಗಳ ಪ್ರದರ್ಶನವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮ ವನ್ನು ಶಾಸಕ ಎಚ್ ಎಂ ಗಣೇಶ್ ಪ್ರಸಾದ್ ಹಾಗೂ ಚಾಮೂಲ್ ನಿರ್ದೇಶಕ ನಂಜುಂಡಪ್ರಸಾದ್ ಉದ್ಘಾಟಿಸಿ ಪ್ರಶಸ್ತಿ ಪ್ರಧಾನ ಮಾಡಿದರು. ಜಾನುವಾರುಗಳಲ್ಲಿ ಹಾಲು ಕರೆಯುವ ಸ್ಪರ್ಧೆ ಮತ್ತು ಮಿಶ್ರತಳಿ ಕರುಗಳ ಪ್ರದರ್ಶನ ಕಾರ್ಯಕ್ರಮದಲ್ಲಿ 13 ರಾಸುಗಳು ಹಾಲು ಕರೆಯುವ ಸ್ಪರ್ಧೆಯಲ್ಲಿ ಭಾಗವಹಿಸಿದ್ದವು ಮೊದಲ ಮೂರು ಬಹುಮಾನವಾಗಿ ಹೆಚ್ಚು ಅಧಿಕ ಹಾಲು ಕರೆದ ರಾಸುಗಳಿಗೆ ಹತ್ತು ಸಾವಿರ, ಏಳು ಸಾವಿರದ ಐದುನೂರು ಐದು ಸಾವಿರ ನಗದು ಬಹುಮಾನ ನೀಡಲಾಯಿತು. ಜೊತೆಗೆ ನಡೆದ ಮಿಶ್ರತಳಿ ಕರುಗಳ ಸ್ಪರ್ಧೆಯಲ್ಲಿ 21 ಜರ್ಸಿ ಮತ್ತು ಹೆಚ್ ಎಫ್ ಕರುಗಳು ಭಾಗವಹಿಸಿದ್ದವು ಭಾಗವಹಿಸಿದ ಎಲ್ಲ ರಾಸುಗಳಿಗೆ ಮತ್ತು ಉತ್ತಮ ಕರುಗಳಿಗೆ ಹಾಲಿ ಕ್ಯಾನ್ ನೀಡಿ ಹೈನುಗಾರಿಕೆ ಬಗ್ಗೆ ಉತ್ತೇಜನ ನೀಡಲು ಪ್ರೊತ್ಸಾಹಿಸಲಾಯಿತು. ಈ ಸಂದರ್ಭದಲ್ಲಿ ಮುಖಂಡರಾದ ಮಾಜಿ ಎಪಿಎಂಸಿ ಅಧ್ಯಕ್ಷ ಶಿವನಾಗಪ್ಪ, ಮಾಜಿ ತಾ.ಪಂ ಅಧ್ಯಕ್ಷ ಮಧುಶಂಕರ್ ,ಕಾರ್ಯಕ್ರಮದಲ್ಲಿ ಡಾ ಮಾದೇಶ್ ಮುಖ್ಯಪಶುವೈದ್ಯಾಧಿಕಾರಿಗಳು, ಡಾ ನಾಗೇಂದ್ರ ಸ್ವಾಮಿ ಗವಿಸ್ವಾಮಿ ,ಕೃಷ್ಣ ,ಚೇತನ್ ಹಾಜರಿದ್ದರು.

## ದೇವಸ್ಥಾನಗಳಲ್ಲಿ ಸರಣಿ ಕಳ್ಳತನ

ಗುಂಡ್ಲುಪೇಟೆ: -ತಾಲೂಕಿನ ಬನ್ನಿತಾಳಪುರ ಗ್ರಾಮದ ಆರು ದೇವಸ್ಥಾನಗಳಲ್ಲಿ ಸರಣಿ ಕಳ್ಳತನ ನಡೆದಿದ್ದು, ಗೋಲಕ ಹೊಡೆದು ಹುಂಡಿಯಲ್ಲಿದ್ದ ಹಣ ಹಾಗೂ ಚಿನ್ನಾಭರಣ ದೋಚಿರುವ ಘಟನೆ ಗುರುವಾರ ತಡರಾತ್ರಿ ಜರುಗಿದೆ.

ತಾಲೂಕಿನ ಬನ್ನಿತಾಳಪುರ ಗ್ರಾಮದಲ್ಲಿರುವ ಶ್ರೀಕಿಕ್ಕೇರಿ ಮಹಾಲಕ್ಷ್ಮಿ ದೇವಸ್ಥಾನ, ಸಾಗಡೆ ರಾಕಸಮ್ಮ ದೇವಸ್ಥಾನ, ಉತ್ತನಹಳ್ಳಿ ಮಾರಮ್ಮ ದೇವಸ್ಥಾನ, ಮಲೆಯೂರು ಮಾರಮ್ಮ ದೇವಸ್ಥಾನ, ಗೋನಳ್ಳಿ ದೇವಸ್ಥಾನ, ಹಿಮವದ್ ಗೋಪಾಲಸ್ವಾಮಿ ದೇವಸ್ಥಾನ ಸೇರಿ ಒಟ್ಟು ಆರು ದೇವಸ್ಥಾನಗಳಲ್ಲಿ ಸರಣಿ ಕಳ್ಳತನ ನಡೆದಿದ್ದು, ದೇವಾಲಯಗಳ ಬೀಗ ಹೊಡೆದು ಒಳಗೆ ನುಗ್ಗಿರುವ ಖದೀಮರು ಚಿನ್ನದ ತಾಳಿಗಳು, ಬೆಳ್ಳಿ ಕೊಳಲು, ಚಿನ್ನದ ಕಾಸುಗಳು, ಚಿನ್ನದ ಗುಂಡುಗಳನ್ನು ಕದ್ದು, ಗೋಲಕಗಳನ್ನು ಹೊಡೆದು ಹಣ ದೋಚಿ ಪರಾರಿಯಾಗಿದ್ದಾರೆ. ಗುಂಡ್ಲುಪೇಟೆ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಕಳ್ಳತನ ನಡೆದ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.



## ಉಸ್ತುವಾರಿ ಕಾರ್ಯದರ್ಶಿಗಳಾದ ವಿನೋತ್ ಪ್ರಿಯಾ ಭೇಟಿ: ಪರಿಶೀಲನೆ

ಚಾಮರಾಜನಗರ, ಪಾಲನೆ ಮತ್ತು ಮೀನುಗಾರಿಕೆ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು ಹಾಗೂ ಚಾಮರಾಜನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಆರ್. ವಿನೋತ್ ಪ್ರಿಯಾ ಅವರು ಇಂದು ಜಿಲ್ಲೆಯ ಆಸ್ಪತ್ರೆ, ಶಾಲೆ, ಅಂಗನವಾಡಿ, ಹಾಸ್ಟಲ್, ನಿರ್ಮಾಣ ಹಂತದಲ್ಲಿರುವ ಅಭಿವೃದ್ಧಿ ಕಾಮಗಾರಿಗಳನ್ನು ಪರಿಶೀಲಿಸಿದರು.

ಬೆಳಿಗ್ಗೆಯೇ ಜಿಲ್ಲೆಗೆ ಆಗಮಿಸಿದ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲಾ ಪಂಚಾಂ ಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಹಾಗೂ ಇನ್ನಿತರ ಅಧಿಕಾರಿಗಳೊಂದಿಗೆ ಕೊಳ್ಳೇಗಾಲ ಪಟ್ಟಣದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ಡಾ. ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯಕ್ಕೆ ಭೇಟಿ ನೀಡಿದರು. ಅಲ್ಲಿನ ವಾಸ್ತವ್ಯದ ಕೊಠಡಿಗಳು, ಶೌಚಾಲಯ, ಸ್ನಾನದ ಗೃಹಗಳು, ಅಡುಗೆ ಕೋಣೆ, ಡೈನಿಂಗ್ ಹಾಲ್ ವೀಕ್ಷಿಸಿದರು. ಮೆನು ಚಾರ್ಟ್ ಪರಿಶೀಲಿಸಿದರು. ಬಳಿಕ ಕೊಳ್ಳೇಗಾಲ ಪಟ್ಟಣದಲ್ಲಿ 7 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಡಾ. ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣ ಕಾಮಗಾರಿ ಪರಿಶೀಲಿಸಿ ಬಣ್ಣದ ಕೆಲಸಕ್ಕೂ ಮೊದಲು ಕೈಗೊಳ್ಳ ಬೇಕಿರುವ ಕಾರ್ಯಗಳನ್ನು ಸಮರ್ಪಕವಾಗಿ ನಿರ್ವ ಹಿಸಬೇಕು. ಕಾಮಗಾರಿಯನ್ನು ತ್ವರಿತವಾಗಿ ಪೂರ್ಣ ಗೊಳಿಸಿ ಏಪ್ರಿಲ್ ತಿಂಗಳೊಳಗೆ ಸಮಾಜ ಕಲ್ಯಾಣ ಇಲಾಖೆಗೆ ಹಸ್ತಾಂತರಿಸುವಂತೆ ಸೂಚಿಸಿದರು. ಕೊಳ್ಳೇಗಾಲ ತಾಲೂಕು ಟಗರಪುರ ಗ್ರಾಮದಲ್ಲಿ ನಿರ್ಮಾಣ ಮಾಡಿರುವ ಗ್ರಂಥಾಲಯ ಕಟ್ಟಡವನ್ನು ವೀಕ್ಷಿಸಿದರು.



ಯಳಂದೂರು ಪಟ್ಟಣದಲ್ಲಿ ನಿರ್ಮಾಣವಾಗುತ್ತಿರುವ 100 ಹಾಸಿಗೆಯುಳ್ಳ ಆಸ್ಪತ್ರೆ ಕಟ್ಟಡ ಕಾಮಗಾರಿ ಪರಿಶೀಲಿಸಿದರು. ಆಸ್ಪತ್ರೆಯ ಎಲ್ಲಾ ವಿಭಾಗಗಳಿಗೆ ಅಗತ್ಯವಿರುವಂತೆ ವಿನ್ಯಾಸ ಮಾಡಲು ಸೂಚಿಸಿದರು. ಒ.ಪಿ.ಡಿ, ತುರ್ತು ವಿಭಾಗಗಳಿಗೆ ಸರಾಗವಾಗಿ ಬರಲು ಅನುಕೂಲವಾಗುವಂತೆ ಸ್ಥಳಾವಕಾಶ ಇರಬೇಕು. ಗುಣಮಟ್ಟದ ಕೆಲಸವಾಗಬೇಕೆಂದು ತಿಳಿಸಿದರು.

ಯಳಂದೂರು ಪಟ್ಟಣದ 1ನೇ ಅಂಗನವಾಡಿ ಕೇಂದ್ರಕ್ಕೆ ಭೇಟಿ ನೀಡಿ ಮಕ್ಕಳಿಗೆ ನೀಡಲಾಗುತ್ತಿರುವ ಪೌಷ್ಠಿಕ ಆಹಾರ, ಆಟೋಪಕರಣಗಳನ್ನು ವೀಕ್ಷಿಸಿದರು. ಮಕ್ಕಳೊಂದಿಗೆ ಆತ್ಮೀಯವಾಗಿ ಮಾತನಾಡಿದರು. ಮಧ್ಯಾಹ್ನದ ವೇಳೆಗೆ ವಿತರಿಸಲು ತಯಾರಿಸಿದ್ದ ಮಿಲೆಟ್ ಲಡ್ಡುವನ್ನು ಪರಿಶೀಲಿಸಿ ಇದಕ್ಕೆ ಬಳಕೆ ಮಾಡಿರುವ ಸಾಮಗ್ರಿಗಳ ಬಗ್ಗೆ ವಿವರ ಪಡೆದರು. ಇದೇ ವೇಳೆ ಮಕ್ಕಳ ವಯಸ್ಸಿನ ಮಾಹಿತಿ ಪಡೆದು, ತೂಕವನ್ನು ಪರಿಶೀಲಿಸಿದರು. ಯಳಂದೂರು ಪಟ್ಟಣದ ಕೆ.ಪಿ.ಎಸ್ ಶಾಲೆಗೆ ಭೇಟಿ ನೀಡಿದರು. ಅಲ್ಲಿನ ವಿದ್ಯಾರ್ಥಿಗಳ ಹಾಜರಾತಿ, ಕಲಿಕೆ ಸಂಬಂಧ ವಿವರಗಳ ಬಗ್ಗೆ ಶಿಕ್ಷಕರಿಂದ ಮಾಹಿತಿ ಪಡೆದರು.

ಸಂತೇಮರಹಳ್ಳಿಯ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ಸಮುದಾಯ ಆರೋಗ್ಯ ಕೇಂದ್ರಕ್ಕೂ ಭೇಟಿ ನೀಡಿ ಅಲ್ಲಿನ ವಾರ್ಡ್‌ಗಳು, ಜನನ ನಿರೀಕ್ಷಣಾ ಘಟಕ, ಇನ್ನಿತರ ವಿಭಾಗಗಳನ್ನು ಪರಿಶೀಲಿಸಿದರು. ಸಂತೇ ಮರಹಳ್ಳಿಯ ಗ್ರಾಮ ಪಂಚಾಯಿತಿ ಅವರಣದಲ್ಲಿರುವ ಕೂಸಿನ ಮನೆಗೆ ಭೇಟಿ ನೀಡಿ ಮಕ್ಕಳಿಗೆ ತಯಾರಿಸಿದ್ದ ದಾಲ್ ಕಿಚಡಿ ಸೇವಿಸಿ ಗುಣಮಟ್ಟ ಪರಿಶೀಲಿಸಿದರು. ಪಕ್ಕದಲ್ಲಿಯೇ ಇದ್ದ ಡಿಜಿಟಲ್ ಗ್ರಂಥಾಲಯ ವೀಕ್ಷಿಸಿದರು. ಪಶು ಪಾಲನಾ ಆಸ್ಪತ್ರೆಯ ಕಟ್ಟಣ ನಿರ್ಮಾಣ ಸ್ಥಳಕ್ಕೆ ಭೇಟಿಕೊಟ್ಟರು.

ಚಾಮರಾಜನಗರ ಪಟ್ಟಣದಲ್ಲಿರುವ ಪಶು ಪಾಲನಾ ಇಲಾಖೆಯ ಪಶು ಆಸ್ಪತ್ರೆ ಹಾಗೂ ನಿರ್ಮಾಣ ಹಂತದಲ್ಲಿರುವ ಮೊದಲನೇ ಮಹಡಿಯ ಕಟ್ಟಡವನ್ನು ಪರಿಶೀಲಿಸಿದರು. ಬಳಿಕ ಚಾಮರಾಜನಗರ ತಾಲೂಕಿನ ಬಂದಿಗೌಡನಹಳ್ಳಿಗೆ ಭೇಟಿ ನೀಡಿ ಮೀನುಗಾರಿಕೆ ಇಲಾಖೆ ಸಹಾಯಧನದಿಂದ ಫಲಾನುಭವಿ ನಟರಾಜು ಅವರು ನಿರ್ಮಾಣ ಮಾಡಿರುವ ಸಿಹಿನೀರಿನ ಬಯೋಫ್ಲಾಕ್ ಮೀನು ಸಾಕಾಣಿಕೆ ಕೊಳವನ್ನು ವೀಕ್ಷಿಸಿದರು. ಮೀನು ಸಾಕಾಣಿಕೆ ವಿಧಾನ, ಮೀನುಗಳನ್ನು ರಫ್ತು ಮಾಡುತ್ತಿರುವ ವಹಿವಾಟು, ಇನ್ನಿತರ ವಿವರಗಳನ್ನು ಫಲಾನುಭವಿ ಬಸವರಾಜು ಅವರಿಂದ ಪಡೆದುಕೊಂಡರು. ಇದೇ ವೇಳೆ ಮೀನುಗಾರಿಕೆ ಉಪನಿರ್ದೇಶಕರಾದ ಮಂಜೇಶ್ವರ್ ಅವರು ಈ ಬಯೋಫ್ಲಾಕ್ ಮೀನು ಸಾಕಾಣಿಕೆ ಸೌಲಭ್ಯಕ್ಕೆ ಸಾಕಷ್ಟು ಬೇಡಿಕೆ ಇರುವುದಾಗಿ ಮಾಹಿತಿ ನೀಡಿದರು.

ಜಿಲ್ಲಾ ಪಂಚಾಯತ್ ಮೌಲ್ಯಮಾಪನ ಅಧಿಕಾರಿ ದೀಪಾ, ಸಮಾಜ ಕಲ್ಯಾಣ ಇಲಖೆ ಉಪನಿರ್ದೇಶಕರಾದ ಮುನಿರಾಜು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಎಚ್.ಆರ್. ಸುರೇಶ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾನಾಧಿಕಾರಿ ಡಾ. ಎಸ್. ಚಿದಂಬರ, ಪಶು ಪಾಲನಾ ಇಲಾಖೆಯ ಉಪನಿರ್ದೇಶಕರಾದ ಡಾ.ಮಂಜುನಾಥ್, ಪಂಚಾಯತ್ ರಾಜ್ ಇಲಾಖೆಯ ಎಂಜಿನಿಯರಿಂಗ್ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ರಮೇಶ್, ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಗುರುಶಾಂತಪ್ಪ ಬೆಳ್ಳುಂಡಗಿ, ಕೊಳ್ಳೇಗಾಲ ತಾಲೂಕು ಸಮಾಜ ಕಲ್ಯಾಣಾಧಿಕಾರಿ ಕೇಶವ ಮೂರ್ತಿ, ಇನ್ನಿತರ ಅಧಿಕಾರಿಗಳು ಹಾಜರಿದ್ದರು.

## ಕೇಂದ್ರದ ಒಪ್ಪಂದ ರೈತರಿಗೆ ಮಾರಕ

### ಕೇರಳ ಜೈವಕಷರ್ಕ ಸಮಿತಿ ಅಧ್ಯಕ್ಷ ವಿಶಾಲಾಕ್ಷನ್ ಅಭಿಪ್ರಾಯ

ಮೈಸೂರು: ಕೇಂದ್ರ ಸರ್ಕಾರವೂ ರಾಜಕೀಯ ಕಾರಣಗಳಿಗೆ ವಿದೇಶಗಳಿಗೆ ಶರಣಾಗಿ ಒಪ್ಪಂದ ಮಾಡಿಕೊಳ್ಳುತ್ತಿರುವುದು ಭಾರತದ ರೈತರಿಗೆ ಮಾರಕವಾಗಿದೆ ಎಂದು ಕೇರಳ ಜೈವಕಷರ್ಕ ಸಮಿತಿ ಅಧ್ಯಕ್ಷ ವಿಶಾಲಾಕ್ಷನ್ ಅಭಿಪ್ರಾಯಪಟ್ಟರು.

ಆಶಾ ಕಿಸಾನ್ ಸ್ವರಾಜ್, ಕರಾಮುವಿ ಪ್ರಸಾರಾಂಗ, ಮಹಿಳಾ ಅಧಿಕಾರ ಮಂಚ್ ಸಹಯೋಗದಲ್ಲಿ ಕರಾಮುವಿ ಘಟಿಕೋತ್ಸವ ಭವನದಲ್ಲಿ ಆಯೋಜಿಸಿರುವ ಕಿಸಾನ್ ಸ್ವರಾಜ್ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದರು. ಕೇಂದ್ರ ಸರ್ಕಾರದ ನೂತನ ಮಸೂದೆಗಳು ರೈತರ ಪರವಾಗಿಲ್ಲ. ಬೀಜ, ವಿದ್ಯುಚ್ಛಕ್ತಿ ಮಸೂದೆಗಳು ರೈತರಿಗೆ ಮಾರಕವಾಗಿವೆ. ಸಂಸತ್ತಿನಲ್ಲಿ ರೈತರ ಪರವಾಗಿ ಚರ್ಚೆ ನಡೆಯುತ್ತಿಲ್ಲ. ಅಮೆರಿಕದೊಂದಿಗೆ ವ್ಯಾಪಾರ ಒಪ್ಪಂದ ಬಗ್ಗೆ ಚರ್ಚೆಯಾಗಬೇಕಿತ್ತು. ರೈತರಿಗಿಂತ ವ್ಯಾಪಾರ ಉದ್ದೇಶವೇ ಮುಖ್ಯವಾಗಿರುವುದು ವಿಷಾದನೀಯ ಎಂದರು.

ಜಲಮೂಲಗಳ ಸಂರಕ್ಷಣೆ, ಒಣ ಭೂಮಿ, ಹಿಮಾಲಯ ಪ್ರದೇಶ ಸೇರಿ ಭಾರತದ ಪ್ರಾಕೃತಿಕ ಪರಿಸರವನ್ನು ಸಂರಕ್ಷಿಸಬೇಕು. ಮಣ್ಣಿನ ಆರೋಗ್ಯ ಕಾಪಾಡಿಕೊಳ್ಳಬೇಕು. ನೈಸರ್ಗಿಕವಾದ ಆಹಾರ ಪದ್ಧತಿ ಅಳವಡಿಸಿಕೊಳ್ಳಬೇಕು. ಆರೋಗ್ಯಕರ ಜೀವನ ಕೊಡುವುದು ನಿಜವಾದ ರೈತನ ಜವಾಬ್ದಾರಿಯಾಗಿದೆ. ಕಂಪನಿ ವಸ್ತು ತ್ಯಜಿಸಿದರೆ ಸ್ವಾವಲಂಬಿ: ರೈತರು ತಮ್ಮ ವ್ಯವಸಾಯ ಪದ್ಧತಿಯಲ್ಲಿ ಬದಲಾವಣೆ ಮಾಡಿದರೆ ನೆಮ್ಮದಿಯ ಜೀವನ ನಡೆಸಬಹುದು. ಕಂಪನಿ ವಸ್ತುಗಳನ್ನು ತ್ಯಜಿಸಿದರೆ ನೆಮ್ಮದಿಯ ಜೀವನ ನಡೆಸಬಹುದು. ರೈತರು ಕತ್ತೆ ದುಡಿಯುವಂತೆ ದುಡಿಯದೇ ತೃಪ್ತಿದಾಯಕ ಸಂತೋಷದಿಂದ ಬದುಕಬಹುದಾಗಿದೆ ಎಂದು ತಿಳಿಸಿದರು.




**ನಾಲ್ಕು ಕಂಪನಿಗಳು ಹಿಡಿತದಲ್ಲಿ ಶೇ.70 ಶೇರು**

ನಾಲ್ಕು ಕಂಪನಿಗಳು ಹಿಡಿತದಲ್ಲಿ ಶೇ.70 ಶೇರು ಇದೆ. ಇವರು ದೇಶದ ಜನರ ರಕ್ತ ಹೀರುತ್ತ ಲಾಭ ಮಾಡುತ್ತಿದ್ದಾರೆ. ರಸಾಯನಿಕ ಗೊಬ್ಬರ, ಕೀಟನಾಶಕ ಬಳಸಿ ವ್ಯವಸಾಯ ಮಾಡಿದರೆ ಅನಾರೋಗ್ಯ ಬರಲೇಬೇಕು. ರೈತರಿಗೆ ಪಾರಂಪರಿಕ ಬೀಜ ಕೈಗೆ ಸಿಕ್ಕರೆ ವಿಷವರ್ತುಲದಿಂದ ಪಾರಾಗುತ್ತಾರೆ. ಗುಲಾಮ ಪದ್ಧತಿಯಿಂದ ಬಿಡುಗಡೆ ಪಡೆದರೆ ಸ್ವಾವಲಂಬಿಗಳಾಗಬಹುದು. ಸಹಜ ಕೃಷಿಗೆ ಶ್ರಮ ಕಡಿಮೆ. ಉಳುಮೆ ಮಾಡಬೇಕಿಲ್ಲ. ಗೊಬ್ಬರ ಹಾಕಬೇಕಿಲ್ಲ. ಕೀಟ ನಾಶಕ ಹಾಕುವಂತಿಲ್ಲ. ಕಳೆ ನಿರ್ಮೂಲನೆ ಮಾಡದೇ ಇಳುವರಿ ಪಡೆಯಬಹುದಾಗಿದೆ ಎಂದು ವಿವರಿಸಿದರು.

ಕರಾಮುವಿ ಕುಲಪತಿ ಪ್ರೊ.ಶರಣಪ್ಪ ವಿ. ಹಲಸೆ ಮಾತನಾಡಿ, ರೈತರು ಉಳಿದರೆ ದೇಶ ಉಳಿಯುತ್ತದೆ. ಭವಿಷ್ಯದಲ್ಲಿ ದುಡ್ಡು ಇರುತ್ತದೆ. ಅದನ್ನು ತಿನ್ನಲಾಗುತ್ತದೆಯೇ? ರೈತರು ಸದೃಢಗೊಂಡರೆ ರಾಮರಾಜ್ಯ ನಿರ್ಮಾಣವಾಗುತ್ತದೆ. ಆಹಾರಕ್ಕೆ ಹಾಹಾಕಾರ ಇದ್ದಾಗ ಹಸಿರುಕ್ರಾಂತಿ ಬಂದಿತು. ಅದು ದೇಶದ ಕೃಷಿ ವಲಯವನ್ನು ನಾಶ ಮಾಡುತ್ತದೆಂದು ತಿಳಿದಿರಲಿಲ್ಲ. ರಸಾಯನಿಕ ಗೊಬ್ಬರ, ಕೀಟನಾಶಕದಿಂದ ವಿಷಾಹಾರ ಸೇವನೆ ಮಾಡುತಿದ್ದೇವೆ ಎಂದು ಕಳವಳ ವ್ಯಕ್ತಪಡಿಸಿದರು. ಧಾರವಾಡದದ ಈಕ್ವೇಟರ್ ಇನಿಷಿಯೇಟವ್ ಪ್ರಶಸ್ತಿ ಪುರಸ್ಕೃತೆ ಬೀಬಿಜಾನ್, ಕರಾಮುವಿ ಕುಲಸಚಿವ ಪ್ರೊ.ಎಸ್.ಕೆ. ನವೀನ್ ಕುಮಾರ್, ಶೈಕ್ಷಣಿಕ ಡೀನ್ ಪ್ರೊ.ಎಂ.ರಾಮನಾಥ ನಾಯುಡು, ಪ್ರಸಾರಾಂಗ ನಿರ್ದೇಶಕ ಡಾ.ಸಂತೋಷ್ ನಾಯಕ್ ಆರ್, ಆಶಾ ಕಿಸಾನ್ ಸ್ವರಾಜ್ ಸಂಚಾಲಕಿ ಕವಿತಾ ಕುರುಗಂಟಿ, ಮಹಿಳಾ ಅಧಿಕಾರ್ ಮಂಚ್ ಕವಿತಾ ಶ್ರೀನಿವಾಸನ್, ಪ್ರಸಾರಾಂಗದ ಸಹಾಯಕ ನಿರ್ದೇಶಕ ಮುನಿಸ್ವಾಮಿ ಇದ್ದರು.

## ಅರಣ್ಯ ಇಲಾಖೆಯಿಂದ ಕಲಿಕಾ ಸಾಮಾಗ್ರಿ ವಿತರಣೆ

ಎಚ್.ಡಿ.ಕೋಟೆ: ತಾಲೂಕು ಚಕ್ಕೊಡನಹಳ್ಳಿ ಗ್ರಾ.ಪಂ ವ್ಯಾಪ್ತಿಯ ಬೂದನೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಅರಣ್ಯ ಇಲಾಖೆ ವತಿಯಿಂದ ನಲಿ ಕಲಿ ಕಾರ್ಯಕ್ರಮದ ಟೇಬಲ್, ಛೇರ್, ಗ್ರಂಥಾಲಯಕ್ಕೆ ಬೀರು, ಬೆಂಚ್ ಪರಿಕರಗಳನ್ನ ನೀಡಿದರು.

ವಿದ್ಯಾರ್ಥಿಗಳನ್ನುದ್ದೇಶಿಸಿ ಡಿಸಿಎಫ್ ಸೀಮಾ ಮಾತನಾಡಿ ಸರ್ಕಾರಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳು ಗ್ರಾಮಾಂತರ ಪ್ರದೇಶ ಹಾಗೂ ಬಡವರ ಮಕ್ಕಳಾಗಿದ್ದು, ಎಲ್ಲರೂ ಶ್ರದ್ಧೆಯಿಂದ ಓದಿ ಒಳ್ಳೆಯ ವಿದ್ಯಾವಂತರಾಗಿ ಉನ್ನತ ಹುದ್ದೆಗಳನ್ನು ಪಡೆಯಬೇಕು. ನಿಮ್ಮನ್ನು ಕಷ್ಟಪಟ್ಟು ಓದಿಸುತ್ತಿರುವ ನಿಮ್ಮ ತಂದೆತಾಯಿಗಳಿಗೆ ಹೆಸರು ತರಬೇಕು ಊರಿಗೆ ಕೀರ್ತಿ ಹೆಚ್ಚಿಸಬೇಕು ಎಂದರು.


ಶಾಲೆಯ ಮುಖ್ಯಶಿಕ್ಷಕ ಸ್ವಾಮಿಗೌಡ ಮಾತನಾಡಿ, ನಮ್ಮ ಶಾಲೆ ಗ್ರಾಮಾಂತರ ಪ್ರದೇಶ ಮತ್ತು ಅತಿ ಹೆಚ್ಚು ಬುಡಕಟ್ಟು ಸಮುದಾಯಗಳ ಮಕ್ಕಳು ಕಲಿಯುತ್ತಿದ್ದಾರೆ. ಮತ್ತೆ ಬೂದನೂರು ಗ್ರಾಮದ ಎಲ್ಲಾ ಜನರು ಶಾಲೆಯ ಕಲಿಕೆಗೆ ಶ್ರಮ ಹಾಕುತ್ತಿದ್ದಾರೆ, ವಿಶೇಷವಾಗಿ ಶಾಲಾ ಕಮಿಟಿ ಮತ್ತು ಶಿಕ್ಷಕ ವೃಂದದವರು ಪ್ರಾಮಾಣಿಕ ಕೆಲಸ ಮಾಡುತ್ತಿರುವುದರಿಂದ ನಮ್ಮ ಶಾಲೆ ಇಂದು ಮಾದರಿ ಶಾಲೆಯಾಗಿದೆ ಎಂದು ತಿಳಿಸಿದರು. ಎಸಿಎಫ್ ಲಕ್ಷ್ಮಿಕಾಂತ್, ಆರ್ ಎಫ್ ಒ ವಿನೋದ್ ಗೌಡ, ರವಿಕುಮಾರ್, ಫಾರೆಸ್ಟರ್ ರೂಪೇಶ್, ಕೃಷ್ಣ, ಆಕಾಶ್ ಮತ್ತಿತರರು ಇದ್ದರು.



## ಅಮರನಾಥ ಯಾತ್ರೆಗೆ ನೊಂದಾಯಿಸಿ

ಮೈಸೂರು: ಕರ್ನಾಟಕ ರಾಜ್ಯ ಅಭಿವೃದ್ಧಿ ಪರಿಷತ್ ವತಿಯಿಂದ ಬರುವ ಏಪ್ರಿಲ್ ತಿಂಗಳಲ್ಲಿ ನಗರದಿಂದ ಅಮರನಾಥ್ ಯಾತ್ರೆ ಆಯೋಜಿಸಿದ್ದು, ಆಸಕ್ತರು ಪಾಲ್ಗೊಳ್ಳಬಹುದಾಗಿದೆ ಎಂದು ಸದಸ್ಯ ಸಿಂಧುವಳ್ಳಿ ಶಿವಕುಮಾರ್ ತಿಳಿಸಿದರು.

ಇದು 12 ದಿನಗಳ ಯಾತ್ರೆಯಾಗಿದ್ದು, ನಗರದಿಂದ ಕರೆದೊಯ್ದು ವಾಪಸು ಟ್ರೈನ್‌ನಲ್ಲಿ ಕರೆತರಲಾಗುವುದು. ಶುಲ್ಕ 17 ಸಾವಿರ ಆಗಿದ್ದು, ಊಟ, ಪ್ರೇಕ್ಷಣೀಯ ಸ್ಥಳಗಳ ದರ್ಶನ, ಕನ್ನಡ ಮಾತನಾಡುವ ಮಾರ್ಗದರ್ಶಕರು, ಪ್ರಯಾಣ ವಿಮೆ ಮೊದಲಾದವನ್ನು ಒಳಗೊಂಡಿದೆ. 20 ವರ್ಷ ಮೇಲ್ಪಟ್ಟು 70 ವರ್ಷದೊಳಗಿನವರು ಪಾಲ್ಗೊಳ್ಳಬಹುದಾಗಿದೆ. ಜಮ್ಮು, ಕಾಟ್ರಾ, ಶ್ರೀನಗರ, ಬಾಲ್ತಾಳ್, ಅಮರನಾಥ್, ವೈಷ್ಣೋದೇವಿ, ಶಿವಕೋರಿ ಸ್ಥಳಗಳು ಒಳಗೊಂಡಿವೆ. ಹೆಚ್ಚಿನ ಮಾಹಿತಿಗೆ ದೂ. 63627 56153 ನ್ನು ಸಂಪರ್ಕಿಸಬಹುದಾಗಿದೆ ಎಂದರು. ಶ್ರೀನಿವಾಸ ಕುಮಾರ್, ಮಂಜುಳಾ, ಅರುಣ್‌ಕುಮಾರ್ ಇದ್ದರು.




## ತಾಲೂಕು ಸಮಿತಿಯ ಸಂಘದ ಕಚೇರಿ ಉದ್ಘಾಟನೆ



ಹನೂರು: ತಾಲೂಕು ಕೇಂದ್ರದಲ್ಲಿ ವಿದ್ಯುತ್ ಗುತ್ತಿಗೆದಾರರ ಸಮಿತಿಯ ಸಂಘದ ಕಚೇರಿ ಉದ್ಘಾಟನೆಯಾಗಿರುವುದು ಸಂತೋಷದ ವಿಷಯ, ಪ್ರತಿಯೊಬ್ಬರು ಇದರ ಸದುಪಯೋಗ ಪಡೆದುಕೊಂಡು ಸಂಘದ ಏಳಿಗೆಗೆ ಶ್ರಮಿಸಬೇಕು ಎಂದು ರಾಜ್ಯಾಧ್ಯಕ್ಷ ರಮೇಶ್ ಕರೆ ನೀಡಿದರು.

ತಾಲೂಕಿನ ಕೆಇಬಿ ಕಚೇರಿಯ ಮುಂಭಾಗ ನಂದಿನಿ ಹಾಲಿನ ಡೈರಿ ಪಕ್ಕದಲ್ಲಿರುವ ನೂತನ ಕಟ್ಟಡದಲ್ಲಿ ಹನೂರು ತಾಲೂಕು ಸಮಿತಿಯ ಸಂಘದ ಕಚೇರಿ ಉದ್ಘಾಟಿಸಿ ನಂತರ ಅವರು ಮಾತನಾಡಿದರು. ಹನೂರು ತಾಲೂಕಿನಲ್ಲಿ ಸಾಕಷ್ಟು ದಿನಗಳಿಂದ ಕಚೇರಿ ಇಲ್ಲದೆ ವಿದ್ಯುತ್ ಗುತ್ತಿಗೆದಾರ ಬಂಧುಗಳು ಸಾಕಷ್ಟು ತೊಂದರೆಯಿಂದ ಅನುಭವಿಸುತ್ತಿದ್ದರು ಇದೀಗ ನೂತನ ಕಚೇರಿ ಆರಂಭವಾಗಿದ್ದು ತಮ್ಮೆಲ್ಲ ಕಷ್ಟಗಳಿಗೆ ಪೂರ್ಣ ವಿರಾಮ ಸಿಕ್ಕಿದೆ ಮುಂದಿನ ದಿನಗಳಲ್ಲಿ ಈ ಕಚೇರಿಯ ಸದುಪಯೋಗ ಪಡೆದುಕೊಂಡು ತಾವೆಲ್ಲರೂ ಕೂಡ ಒಳ್ಳೆಯ ಕೆಲಸಗಳನ್ನು ಮಾಡಬೇಕು. ಸಂಘದ ನೂತನ ಪದಾಧಿಕಾರಿಗಳು ಸಹ ತಾಲೂಕಿನ ಸಂಘದ ಸರ್ವ ಸದಸ್ಯರ ಅಭಿವೃದ್ಧಿಗಾಗಿ ಸಂಘದ ಏಳಿಗೆಗಾಗಿ ಸದಾ ತಯಾರಿರಬೇಕು. ಜೊತೆಗೆ ಸಂಘಕ್ಕೆ ಯಾವುದೇ ಕಪ್ಪು ಚುಕ್ಕೆ ಬಾರದಂತೆ ತಡೆಗಟ್ಟಲು ಸದಾ ಸಿದ್ಧವಿರಬೇಕು ಎಂದರು.

**ನೂತನ ಪದಾಧಿಕಾರಿಗಳ ಆಯ್ಕೆ**

ಅಧ್ಯಕ್ಷರಾಗಿ ಸಣ್ಣ ಕಾಳಶೆಟ್ಟಿ, ಉಪಾಧ್ಯಕ್ಷರಾಗಿ ಜಯಪ್ರಕಾಶ್, ಕಾರ್ಯದರ್ಶಿಯಾಗಿ ಲಿಂಗರಾಜು ,ಖಜಾಂಚಿಯಾಗಿ ಸುಧಾಕರ್, ಸಹಕಾರ್ಯದರ್ಶಿಯಾಗಿ ಚಂದ್ರು ಶೇಖರ್, ಆಯ್ಕೆಯಾದರು.ಇದೆ ಸಂದರ್ಭದಲ್ಲಿ ಹನೂರು ಎ ಇ ಇ ರಂಗಸ್ವಾಮಿ, ಶಬೀರ್ ಅಹ್ಮದ್, ಜಿಲ್ಲಾ ಗುತ್ತಿಗೆದಾರ ಸಂಘದ ಅಧ್ಯಕ್ಷ ಸಂದೀಪ್ ಸುರೇಶ್, ಸಂಪತ್ತು, ಹಿರಿಯ ಗುತ್ತಿಗೆದಾರ ದೇವೇಗೌಡ, ಹನೂರು ತಾಲೂಕಿನ ವಿದ್ಯುತ್ ಗುತ್ತಿಗೆದಾರರ ಸಂಘದ ಸದಸ್ಯರು ಇದ್ದರು.

## ನೀರು, ರಸ್ತೆ ಸಮಸ್ಯೆ ಬಗೆಹರಿಸಲು ಮನವಿ

ಚಾಮರಾಜನಗರ, ರಾಮಸಮುದ್ರ ಬಡಾವಣೆಯ ದುರ್ಗಿಗುಡಿ ಬೀದಿ, ಕೋಟೆ ಬೀದಿ, ಅಂಬೇಡ್ಕರ್ ಬಡಾವಣೆ, ಚಿಕ್ಕ ಹೊಸ ಬಡಾವಣೆಯ ಬೀದಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದ್ದು, ಆದಷ್ಟು ಬೇಗ ಸಮಸ್ಯೆ ಬಗೆಹರಿಸುವಂತೆ ರಾಮಸಮುದ್ರ ಪಟ್ಟಣದ ನಿವಾಸಿಗಳು ಜಿಲ್ಲಾಧಿಕಾರಿ ಶ್ರೀ ರೂಪ ಅವರಿಗೆ ನೀಡಿರುವ ಮನವಿ ಪತ್ರದಲ್ಲಿ ಒತ್ತಾಯಿಸಿದರು.

ಬಡಾವಣೆಯ ಬೋರ್ ಗಳಲ್ಲಿ ನೀರಿಲ್ಲದೆ ಬರಡಾಗಿವೆ. ದುರಸ್ತಿ ಮಾಡಿಸುವಂತೆ ನಗರಸಭೆ ಅಧಿಕಾರಿಗಳಿಗೆ ಅನೇಕ ಬಾರಿ ಮನವಿ ಮಾಡಿದರೂ ರಿಬೋರ್ ಮಾಡಿಸೋದಕ್ಕೆ ಮುಂದಾಗಿಲ್ಲ ಎಂದು ದೂರಿದರು.

ಈ ಕೂಡಲೇ ಕುಡಿಯುವ ನೀರು ಹಾಗೂ ಚರಂಡಿ ನಿರ್ಮಿಸಲು ತುರ್ತಾಗಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಬಡಾವಣೆಯ ಹಳ್ಳದ ಬೀದಿಯ ರಸ್ತೆಯು ತುಂಬಾ ಸಮಸ್ಯೆಯಿಂದ ಕೂಡಿದ್ದು, ಜನರು ತಿರುಗಾಡಲು ತುಂಬಾ ತೊಂದರೆಯಾಗುತ್ತಿದೆ. ರಾಮಸಮುದ್ರದ ಆಯ್ದ ಬೀದಿಗಳಿಗೆ ರಸ್ತೆ ಮತ್ತು ಚರಂಡಿ ನಿರ್ಮಾಣ ಮಾಡಲು ನಗರೋತ್ಥನ ಯೋಜನೆಯಡಿಯಲ್ಲಿ ಹಣ ಬಿಡುಗಡೆಯಾಗಿ ಟೆಂಡರ್ ಆಗಿರುತ್ತದೆ. ಆದರೆ ಗುತ್ತಿಗೆದಾರರು ರಸ್ತೆಯನ್ನು ನಿರ್ಮಾಣ ಮಾಡದೆ ವಿಳಂಬ ಮಾಡಿರುತ್ತಾರೆ. ಆದ್ದರಿಂದ ರಸ್ತೆಯ ಕಾಮಗಾರಿಯನ್ನು ಬೇಗ ಮುಗಿಸಿ ಕೊಡಬೇಕು



ರಾಮಸಮುದ್ರ ಕಾರ್ಮಿಕರ ಕಾಲೋನಿ ಹತ್ತಿರ ಒಳಚರಂಡಿ ಬ್ಲಾಕ್ ಆಗಿ ನೀರು ರಸ್ತೆಯ ಮೇಲೆ ಬಂದು ರಸ್ತೆಯು ಅವ್ಯವಸ್ಥೆಯಿಂದ ಕೂಡಿದೆ ಮಲೀನವಾದ ನೀರಿನಿಂದ ಅಲ್ಲಿನ ನಿವಾಸಿಗಳ ವಾಸಿಸಲು ತುಂಬಾ ತೊಂದರೆಯಾಗುತ್ತಿದ್ದು ಇಲ್ಲಿನ ಸಮಸ್ಯೆಯನ್ನು ನಿವಾರಿಸಲು ಗಮನ ಹರಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಯುವ ಮುಖಂಡ ರಾಮಸಮುದ್ರ ಶಿವು, ಪಿಎಲ್ ಡಿ ಬ್ಯಾಂಕ್ ನ ಮಾಜಿ ಅಧ್ಯಕ್ಷ ಆರ್.ವಿ. ಮಹದೇವಸ್ವಾಮಿ,ಮಾಸ್ಟರ್ ಲಿಂಗರಾಜು, ನಾಗಬಸವಣ್ಣ, ಆರ್.ಎಂ ವಿಜಯಕುಮಾರ್, ನವೀನ್ ಇತರರು ಹಾಜರಿದ್ದರು.

**ಆಶಾ ಕಾರ್ಯಕರ್ತೆಯರ ಆಗ್ರಹ**

## 2026ರ ನೀಡಿದ್ದ ಭರವಸೆಗಳನ್ನು ಈಡೇರಿಸಿ

ಹನೂರು : ಮಾರ್ಚ್ 2026ರ ರಾಜ್ಯ ಬಜೆಟ್‌ನಲ್ಲಿ ಆಶಾ ಕಾರ್ಯಕರ್ತೆಯರಿಗೆ ನೀಡಲಾಗಿದ್ದ ಹಿಂದಿನ ಭರವಸೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಹನೂರು ಪಟ್ಟಣದಲ್ಲಿ ತಹಸೀಲ್ದಾರ್ ಚೈತ್ರ ರವರ ಮುಖಾಂತರ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು.

ಈ ವೇಳೆ ಸಂಘದ ಅಧ್ಯಕ್ಷೆ ಸುಜಾತ ಮಾತನಾಡಿ ಆಶಾ ಕಾರ್ಯಕರ್ತೆಯರಿಗೆ ಮಾಸಿಕ ಕನಿಷ್ಠ ರೂ.10 ಸಾವಿರ ಗ್ಯಾರಂಟಿ ನೀಡುವುದಾಗಿ ರಾಜ್ಯ ಸರ್ಕಾರ ಘೋಷಿಸಿದ್ದರೂ ಇದುವರೆಗೆ ಅಧಿಕೃತ ಆದೇಶ ಹೊರಬಂದಿಲ್ಲ. 2025ರ ಮಾರ್ಚ್ ಬಜೆಟ್‌ನಲ್ಲಿ ರಾಜ್ಯದ ಅಂಗನವಾಡಿ ಮತ್ತು ಬಿಸಿಯೂಟ ಕಾರ್ಯ ಕರ್ತೆಯರೊಂದಿಗೆ ಆಶಾ ಕಾರ್ಯಕರ್ತೆಯರಿಗೂ ರೂ.1,000 ಹೆಚ್ಚಳ ಮಾಡುವುದಾಗಿ ತಿಳಿಸಲಾಗಿತ್ತು. ಆ ಭರವಸೆಯ ಹಿನ್ನೆಲೆಯಲ್ಲಿ ಹೋರಾಟ ಕೈಬಿಡಲಾಗಿತ್ತು. ಆದರೆ ಅಂಗನವಾಡಿ ಮತ್ತು ಬಿಸಿಯೂಟ ಕಾರ್ಯಕರ್ತೆಯರಿಗೆ ಹೆಚ್ಚಳ ಜಾರಿಯಾದರೂ ಆಶಾ ಕಾರ್ಯಕರ್ತೆಯರಿಗೆ ಮಾತ್ರ ಯಾವುದೇ ಹೆಚ್ಚಳ ಮಾಡಿಲ್ಲ ಎಂದು ಅವರು ತಿಳಿಸಿದರು.



ಅದೇ ರೀತಿ, ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಪ್ರಸ್ತುತ ಇರುವ ರೂ.5 ಸಾವಿರ ಗೌರವಧನವನ್ನು ರೂ.8,000ಕ್ಕೆ ಹೆಚ್ಚಿಸುವುದಾಗಿ ಭರವಸೆ ನೀಡಲಾಗಿತ್ತು. ಆದರೆ 14 ತಿಂಗಳು ಕಳೆದರೂ ಆ ಕುರಿತು ಯಾವುದೇ ಆದೇಶ ಜಾರಿಯಾಗಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಆರೋಗ್ಯ ಸಚಿವರು ಹಾಗೂ ರಾಜ್ಯ ಮಟ್ಟದ ಅಧಿಕಾರಿಗಳು ಹಲವಾರು ಸಭೆಗಳು ನಡೆಸಿದರೂ ಸ್ಪಷ್ಟ ಫಲಿತಾಂಶ ಕಂಡುಬಂದಿಲ್ಲ. ಬದಲಾಗಿ ಇಲಾಖೆಯಿಂದ ಆಶಾ ಕಾರ್ಯಕರ್ತೆಯರ ವಿರುದ್ಧ ಏಕಪಕ್ಷೀಯ ಆದೇಶಗಳನ್ನು ಹೊರಡಿಸಲಾಗುತ್ತಿದೆ ಎಂದು ಆರೋಪಿಸಿದರು. ರಾಜ್ಯದಲ್ಲಿ ತರ್ಕಬದ್ಧಗೊಳಿಸುವಿಕೆ ಎಂಬ ಹೆಸರಿನಲ್ಲಿ ಆಶಾ ಕಾರ್ಯಕರ್ತೆಯರ ಸೇವೆಯನ್ನು ಕಡಿತಗೊಳಿಸುವ ಆದೇಶ ಹೊರಡಿಸಿರುವುದು ಕೇಂದ್ರ ಸರ್ಕಾರದ ಮಾರ್ಗಸೂಚಿಗಳಿಗೂ ವಿರುದ್ಧವಾಗಿದೆ ಎಂದರು. ಕೈಬಿಡಲಾಗುವ ಆಶಾಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ 'ಗ್ರೂಪ್–ಡಿ' ನೌಕರಿ ನೀಡುವುದಾಗಿ ಹೇಳುತ್ತಿರುವುದು, ಹೆಚ್ಚಿನ ಆಶಾ ಕಾರ್ಯಕರ್ತೆಯರನ್ನು ಕೈಬಿಡುವ ಹುನ್ನಾರವೆಂದು ಅವರು ಆರೋಪಿಸಿದರು. ಈ ವೇಳೆ ಅದ್ಯಕ್ಷರಾದ ಸುಜಾತ,ಕಾರ್ಯದರ್ಶಿ ಶಶಿಕಲ ಾ,ಪ್ರಿಯಾಂಕ,ಸರೋಜ,ಸುನೀತ, ಗೌರಮ್ಮ ಇದ್ದರು.

## ಸಂಕ್ಷಿಪ್ತ ಸುದ್ದಿ

### ವೆಂಡರ್ ಡೆವೆಲಪ್ಮೆಂಟ್ ಕಾರ್ಯಕ್ರಮ

**ಮೈಸೂರು:** ಕೈಗಾರಿಕಾ ಮತ್ತು ವಾಣಿಜ್ಯ ಇಲಾಖೆ ವತಿಯಿಂದ ಖಂಒಕ ಯೋಜನೆಯಡಿ Vendor Development Programme ಕಾರ್ಯಕ್ರಮವನ್ನು ಮಾ.5 ರಂದು ಬೆಳಗ್ಗೆ 10–30ಕ್ಕೆ ಗಂಟೆಗೆ ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್‌ನಲ್ಲಿರುವ ಹೆಚ್. ಕೆಂಪೇಗೌಡ ಒಳ ಕ್ರೀಡಾಂಗಣದಲ್ಲಿ (ಸ್ಪೋರ್ಟ್ಸ್ ಕಾಂಪ್ಲೆಕ್ಸ್) ಏರ್ಪಡಿಸಲಾಗಿದೆ.

ಕಾರ್ಯಕ್ರಮದಲ್ಲಿ ಬೃಹತ್ ಮತ್ತು ಮಧ್ಯಮ ಗಾತ್ರದ ಕೈಗಾರಿಕೆಗಳ ಪ್ರತಿನಿಧಿಗಳು ಭಾಗವಹಿಸಿ, ಘಟಕಗಳು ಸಂಗ್ರಹಣೆ ಮಾಡುವ ಮಾಹಿತಿ ಹಾಗೂ ಸಂಗ್ರಹಣೆ ಬಗ್ಗೆ ಒಖಒಇ ಘಟಕಗಳಿಗೆ ಮಾಹಿತಿ ನೀಡಲಾಗುತ್ತದೆ. ಕಾರ್ಯಕ್ರಮಕ್ಕೆ ಉದ್ದಿಮೆದಾರರು ಭಾಗವಹಿಸಿ ಪ್ರಯೋಜನ ಪಡೆದುಕೊಳ್ಳಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜಿಲ್ಲಾ ಕೈಗಾರಿಕಾ ಕೇಂದ್ರ ಕಛೇರಿಯ ದೂ.ಸಂ : 08212449810 ನ್ನು ಸಂಪರ್ಕಿಸಬಹುದಾಗಿದೆ ಎಂದು ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಪರೀಕ್ಷಾ ಕೇಂದ್ರಗಳ ಸುತ್ತಲು ನಿಷೇಧಾಜ್ಞೆ ಜಾರಿ



**ಮೈಸೂರು:** ಮಾರ್ಚ್ 1 ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರ ವತಿಯಿಂದ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಸಂಘದಡಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ವಸತಿ ಶಾಲೆಗಳಲ್ಲಿ 6 ನೇ ತರಗತಿಗೆ ಪ್ರವೇಶಾತಿಯನ್ನು ನೀಡುವ ಸಂಬಂಧ ಪ್ರವೇಶ ಪರೀಕ್ಷೆ ನಡೆಯಲಿದ್ದು, ಸದರಿ ಪರೀಕ್ಷೆಯನ್ನು ಸುಸೂತ್ರವಾಗಿ ನಡೆಸುವ ಉದ್ದೇಶದಿಂದ ಬೆಳಿಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಮಹಾರಾಣಿ ಸರ್ಕಾರಿ ಪದವಿ ಪೂರ್ವ ಕಾಲೇಜು, ನಾರಾಯಣ ಶಾಸ್ತ್ರಿ ರಸ್ತೆ, ಪರೀಕ್ಷಾ ಕೇಂದ್ರದ ವ್ಯಾಪ್ತಿಯಲ್ಲಿ ಸೂಕ್ತ ಬಂದೋಬಸ್ತ್ ವ್ಯವಸ್ಥೆ ಹಾಗೂ ಪರೀಕ್ಷಾ ಕೇಂದ್ರದ 200 ಮೀಟರ್ ವ್ಯಾಪ್ತಿ ಪ್ರದೇಶದ ಸುತ್ತಲೂ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ–2023 ಸೆಕ್ಷನ್ 163 ರೀತ್ಯ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷಾರ್ಥಿಗಳು ಹಾಗೂ ಪರೀಕ್ಷಾ ಸಿಬ್ಬಂದಿಗಳನ್ನು ಹೊರತುಪಡಿಸಿ ಇತರೆ ಅನಧಿಕೃತ ವ್ಯಕ್ತಿಗಳು ಸಂಚರಿಸಬಾರದು ಮತ್ತು ಯಾರೂ ಆಕ್ಷೇಪಾರ್ಹ ವಸ್ತುಗಳನ್ನು ಒಯ್ಯಬಾರದು ಹಾಗೂ ಪರೀಕ್ಷಾ ಕೇಂದ್ರದ ಸುತ್ತಮುತ್ತಲಿರುವ ಜೆರಾಕ್ಸ್, ಬ್ರೌಸಿಂಗ್ ಸೆಂಟರ್‌ಗಳನ್ನು ಪರೀಕ್ಷಾ ಅವಧಿಯಲ್ಲಿ ಮುಚ್ಚುವಂತೆ ಆದೇಶಿಸಲಾಗಿದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮೌಢ್ಯ ಮತ್ತು ಮೂಢನಂಬಿಕೆಗಳನ್ನು ತೊಲಗಿಸಿ: ಶಿವಲಿಂಗಯ್ಯ.ಸಿ

**ಮಂಡ್ಯ:** ನಮ್ಮ ದೇಶದಲ್ಲಿ ಮತ್ತು ಸಮಾಜದಲ್ಲಿ ಮೌಢ್ಯ ಹಾಗೂ ಮೂಡನಂಬಿಕೆಗಳ ಆಚರಣೆ ಅತಿ ಹೆಚ್ಚಾಗಿ ನಡೆಯುತ್ತಿದೆ. ಸಮಾಜದ ಮೌಢ್ಯ ಮತ್ತು ಮೂಢನಂಬಿಕೆಗಳನ್ನು ತೊಲಗಿಸಿ ವೈಚಾರಿಕತೆಯ ಬಗ್ಗೆ ಅರಿವು ಮೂಡಿಸಿ ಎಂದು ಕರ್ನಾಟಕ ರಾಜ್ಯ ವೈಜ್ಞಾನಿಕ ಸಂಶೋಧನೆ ಮಂಡಳಿ ಅಧ್ಯಕ್ಷರಾದ ಶಿವಲಿಂಗಯ್ಯ ಸಿ. ರವರು ಹೇಳಿದರು.

ಮಹಿಳಾ ಸರ್ಕಾರಿ ಕಾಲೇಜು(ಸ್ವಾ) ಮಂಡ್ಯ,ವಿಜ್ಞಾನ ವೇದಿಕೆ ಮತ್ತು ಐಕ್ಯೂಎಸಿ ಸಹಯೋಗದೊಂದಿಗೆ ಕರ್ನಾಟಕ ರಾಜ್ಯ ವಿಜ್ಞಾನಿಕ ಸಂಶೋಧನಾ ಮಂಡಳಿ ಜಿಲ್ಲಾ ಘಟಕದ ವತಿಯಿಂದ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ಮಂಡ್ಯ ವಿಜ್ಞಾನೋತ್ಸವ – 2026 ವೈಜ್ಞಾನಿಕ ಅರಿವು ಮತ್ತು ರಹಸ್ಯ ಬಯಲು ಕಾರ್ಯಕ್ರಮ ಮಂಡ್ಯ ಮಹಿಳಾ ಸರ್ಕಾರಿ ಕಾಲೇಜು ಆವರಣದಲ್ಲಿರುವ ವನರಂಗದಲ್ಲಿ ಏರ್ಪಡಿಸಿದ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮೌಢ್ಯಾಚರಣೆಯಲ್ಲಿ ವಿಶ್ವದಲ್ಲಿ ಭಾರತ 2 ನೇ ಸ್ಥಾನವನ್ನು ಪಡೆದಿದೆ. ಇದು ನಮ್ಮ ದೇಶಕ್ಕೆ ಕಳಂಕವಾಗಿದೆ.ಇದನ್ನು ವೈಜ್ಞಾನಿಕವಾಗಿ ದಾರಿಗೆ ತರುವ ಉದ್ದೇಶದಿಂದ ನಮ್ಮ ಪರಿಷತ್ ರಾಜ್ಯಾದ್ಯಂತ ಅರಿವು ಮೂಡಿಸುವ ಕೆಲಸವನ್ನು ಮಾಡುತ್ತಿದೆ. ಹೆಣ್ಣು ಮಕ್ಕಳಲ್ಲಿ ಮೂಡ ನಂಬಿಕೆ ಹೆಚ್ಚು ಆಚರಣೆಯಲ್ಲಿದ್ದು ಹಾಗಾಗಿ ಅವರಿಂದಲೇ ಅರಿವು ಮೂಡಿಸುವ ಕೆಲಸವಾಗಬೇಕು ಎಂದು ಹೇಳಿದರು.



ಸರ್ಕಾರಿ ಮಹಿಳಾ ಕಾಲೇಜಿನ ಪ್ರಾಶುಪಾಲರಾದ ಪ್ರೊ. ಗುರುರಾಜ ಪ್ರಭು. ಕೆ ಮಾತನಾಡಿ ನಾವು ಎಷ್ಟೇ ಮುಂದುವರೆದಿದ್ದರೂ ಕೂಡ ಮೂಢನಂಬಿಕೆ ಎಂಬುದನ್ನು ಕಾಣಬಹುದಾಗಿದೆ. ಹಾಗಾಗಿ ವಿದ್ಯಾರ್ಥಿನಿಗಳ ಮೂಲಕ ವೈಜ್ಞಾನಿಕ ಅರಿವು ಮೂಡಿಸುವ ಕೆಲಸವನ್ನು ಇಂದಿನಿಂದ ಪ್ರಾರಂಭ ಮಾಡಿದ್ದೇವೆ ಎರಡು ದಿನಗಳ ಕಾಲ ನಡೆಯುವ ಈ ವಿಜ್ಞಾನೋತ್ಸವ ಕಾರ್ಯಕ್ರಮದಲ್ಲಿ ನಾಳೆ ಜಾಥಾ ನಡೆಸಿ ಸಾರ್ವಜನಿಕರು ದಿನ ನಿತ್ಯದಲ್ಲಿ ವಿಜ್ಞಾನದ ಕುರಿತು ಅರಿವು ಮೂಡಿಸುವ ಕೆಲಸ ಮಾಡುವುದಾಗಿ ತಿಳಿಸಿದರು.

ವಿಜ್ಞಾನ ವೇದಿಕೆ ಸಂಚಾಲಕರಾದ ಜ್ಯೋತಿ ಡಿ. ಕೆ ಮಾತನಾಡಿ.ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ಎರಡು ದಿನ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ ಮೊದಲ ದಿನ ಅರಿವು ಹಾಗೂ ನಾಳೆ ಜಾಥಾ ಕಾರ್ಯಕ್ರಮ ನಡೆಯಲಿದೆ ಎಂದು ಮಾಹಿತಿ ನೀಡಿದರು.

ವೇದಿಕೆಯಲ್ಲಿ ನಂಜರಾಜು ಸಿ. ಎನ್, ಜೈಪ್ರಕಾಶ್ ಎ. ಸಿ, ಪ್ರೋ. ಜಯಲಕ್ಷ್ಮಿ. ರವಿಕಿರಣ್ ಕೆ. ಪಿ, ಹೇಮಲತಾ ಎಸ್. ಪಿ, ಪ್ರದೀಪ್ ಕುಮಾರ್ ಎಸ್ ಪರೀಕ್ಷೆ ನಿಯಂತ್ರಣಾಧಿಕಾರಿ ರವಿಕಾಂತ್ ಬಿ ಲಮಾಣಿ ಉಪಸ್ಥಿತರಿದ್ದರು.

# ವಿಶೇಷ ಚೇತನರನ್ನು ಗುರುತಿಸಿ ಮುಖ್ಯವಾಹಿನಿಗೆ ತನ್ನಿ: ಡಾ. ಕುಮಾರ

**ಮಂಡ್ಯ:** ವಿಶೇಷ ಚೇತನರು ಸಮಾಜದ ಮುಖ್ಯ ವಾಹಿನಿಗೆ ಬರಬೇಕು ಮತ್ತು ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ಎಲ್ಲರೂ ಸಹಕರಿಸಬೇಕುಎಂದು ಜಿಲ್ಲಾಧಿಕಾರಿ ಡಾ. ಕುಮಾರ ರವರು ತಿಳಿಸಿದರು.


ಶುಕ್ರವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್,ಕಾರ್ಮಿಕ ಇಲಾಖೆ, ಅಂಗವಿಕಲರ ಕಲ್ಯಾಣ ಇಲಾಖೆ, ಸಾರಿಗೆ ಇಲಾಖೆ, ಮಂಡ್ಯ ಇವರ ಸಂಯುಕ್ತ ಆಶ್ರಯದಲ್ಲಿ ವಿಶೇಷಚೇತನರಿಗೆ ಕಾರ್ಪೋರೇಟ್ ಹಾಗೂ ಇತರೆ ಖಾಸಗಿ ಕಂಪನಿಗಳ ಕಾರ್ಪೋರೇಟ್ ನಿಧಿಯಿಂದ ತ್ರಿಚಕ್ರ ವಾಹನ ವಿತರಣಾ ಕಾರ್ಯಕ್ರಮವನ್ನು ಜಿಲ್ಲಾಧಿಕಾರಿಗಳ ಕಛೇರಿ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ವಿಶೇಷ ಚೇತನರನ್ನು ಸಮಾಜದ ಮುಖ್ಯ ವಾಹಿನಿಗೆ ತರಲು ಪ್ರತಿಯೊಬ್ಬರ ಸಹಕಾರ ತುಂಬಾ ಅಗತ್ಯ ಎಂದು ಹೇಳಿದರು.

ಸಂಸ್ಥೆಗಳ ಅನುದಾನ ಬಳಸಿಕೊಂಡು ತ್ರಿಚಕ್ರ ವಾಹನವನ್ನು ವಿಶೇಷ ಚೇತನ ಪಲಾನುಭವಿಗೆ ನೀಡಲಾಗುತ್ತಿದ್ದು ಅದರಿಂದ ವಿಶೇಷ ಚೇತನರು ಅವರ ಬದುಕಿನಲ್ಲಿ ಸ್ವಾವಲಂಬಿಗಳ ಆಗುವಂತೆ ಪ್ರೇರೇಪಿಸಬೇಕು ಎಂದು ಹೇಳಿದರು.

ವಿಶೇಷ ಚೇತನರನ್ನು ಗೌರವಿಸಬೇಕು ಮತ್ತು ಹೆಚ್ಚು ಹೆಚ್ಚು ಅವಕಾಶಗಳನ್ನು ಕಲ್ಪಿಸಬೇಕು ಶೈಕ್ಷಣಿಕ ಅರ್ಹತೆ ಅನುಗುಣವಾಗಿ ಬೇರೆ ಬೇರೆ ಕಡೆ ಉದ್ಯೋಗ ಅವಕಾಶಗಳನ್ನು ನೀಡಿ ಸ್ವಾವಲಂಬಿಯಾಗಿ ಜೀವನ ನಡೆಸುವಂತೆ ಮಾಡಬೇಕು.ಸರ್ಕಾರದ ಕಾರ್ಯಕ್ರಮಗಳ ಜೊತೆಗೆ ಸಾಮಾಜಿಕ ಕಾರ್ಯಕ್ರಮಗಳನ್ನು ಮಾಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಶೇಷ ಚೇತನ ಫಲಾನುಭವಿಯಾದ ರಾಮಕೃಷ್ಣ ರವರಿಗೆ ತ್ರಿಚಕ್ರ ವಾಹನ ನೀಡಿಲಾಯಿತು.

ಕಾರ್ಯಕ್ರಮದಲ್ಲಿ ಮಂಡ್ಯ ಡಯೋಗ್ನೋಸ್ಟಿಕ್ ಸೆಂಟರ್ ಮ್ಯಾನೇಜಿಂಗ್ ಡೈರೆಕ್ಟರ್ ಡಾ. ಎಂ ಎಸ್ ಸಿದ್ದೇಗೌಡ, ದಯಾಗ್ನೋಸ್ಟಿಕ್ ಸೆಂಟರ್ ಅಧ್ಯಕ್ಷರಾದ ಡಾಕ್ಟರ್ ಬಿ ಡಿ ಕೃಷ್ಣಪ್ಪ, ಮಂಡ್ಯ ಕಾರ್ಮಿಕ ಅಧಿಕಾರಿಗಳಾದ ಡಾ. ಎಂ ಸವಿತ ರವರು ಉಪಸ್ಥಿತರಿದ್ದರು.




# ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ ಆರಂಭ



**ಮೈಸೂರು:** ರಾಜ್ಯಾದ್ಯಂತ ಇಂದಿನಿಂದ ದ್ವಿತೀಯ ಪಿಯುಸಿ ಪರೀಕ್ಷೆ ಆರಂಭವಾಗಿದ್ದು, ಮೈಸೂರು ಜಿಲ್ಲೆಯಲ್ಲಿ ಒಟ್ಟು 35,835 ವಿದ್ಯಾರ್ಥಿಗಳು ಈ ಬಾರಿ ಪರೀಕ್ಷೆಗೆ ಹಾಜರಾಗುತ್ತಿದ್ದು ಇದರಲ್ಲಿ 15,600 ಹುಡುಗರು,20,122 ಹುಡುಗಿಯರು ಪರೀಕ್ಷೆ ಬರೆಯಲಿದ್ದಾರೆ.

ಫೆ.28 ರಿಂದ ಮಾ.17ರವರಗೆ ಪಿಯು ಪರೀಕ್ಷೆ ನಡೆಯಲಿದ್ದು, ಜಿಲ್ಲೆಯಲ್ಲಿ ಒಟ್ಟು 51 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ. ಮೈಸೂರು ನಗರ 28, ಗ್ರಾಮಾಂತರ 23 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿದೆ. ತಾಲೂಕುವಾರು ನೋಡುವುದಾದರೆ ಕೆ.ಆರ್ ನಗರ 3, ಹುಣಸೂರು 4, ನಂಜನಗೂಡು 5, ಎಚ್.ಡಿ ಕೋಟೆ 3, ಪಿರಿಯಾಪಟ್ಟಣ 4 ಮತ್ತು ಟಿ.ನರಸಿಪುರ 2 ಕೇಂದ್ರಗಳನ್ನು ತೆರೆಯಲಾಗಿದೆ.

ಎಲ್ಲಾ 51 ಪರೀಕ್ಷಾ ಕೇಂದ್ರಗಳ ಪರೀಕ್ಷೆ ನಡೆಯುವ ಎಲ್ಲಾ ಕೊಠಡಿ,ಪ್ರಶ್ನೆ ಪತ್ರಿಕೆ, ಉತ್ತರ ಪತ್ರಿಕೆ ನಿರ್ವಹಣೆ ಕೊಠಡಿಗಳಲ್ಲಿ ವೆಬ್ ಕಾಸ್ಟಿಂಗ್ ನಡೆಯಲಿದೆ.ಡಿ.ಸಿ ಕಚೇರಿಯಲ್ಲಿ ಹಾಗೂ ಪರೀಕ್ಷಾ ಮಂಡಳಿಯಲ್ಲಿ ಇದನ್ನು ವೀಕ್ಷಣೆ ಮಾಡಬಹುದು ಇದರ ಜೊತೆಗೆ ಸ್ಪೆಷಲ್ ಸ್ಕ್ವಾಡನ್ನೂ ನೇಮಕ ಮಾಡಲಾಗಿದೆ. ಪರೀಕ್ಷೆಗೆ ಬರುವ ವಿದ್ಯಾರ್ಥಿಗಳಿಗೆ ಉಚಿತ ಕೆಎಸ್‌ಆರ್ಟಿಸಿ ಬಸ್ ವ್ಯವಸ್ಥೆಯನ್ನು ಸರ್ಕಾರದ ವತಿಯಿಂದ ಮಾಡಲಾಗಿದೆ. ಪರೀಕ್ಷಾ ಕೇಂದ್ರಗಳ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಆದೇಶವನ್ನು ಜಿಲ್ಲಾಧಿಕಾರಿ ಮಾಡಿದ್ದಾರೆ. ಪರೀಕ್ಷಾ ಕೇಂದ್ರಗಳಿಗೆ ಮೊಬೈಲ್ ಕಡ್ಡಾಯವಾಗಿ ನಿಷೇಧಿಸಲಾಗಿದೆ. ಜೊತೆಗೆ ವಿದ್ಯಾರ್ಥಿಗಳಿಗೆ ಮೂಲಭೂತವಾಗಿ ಕುಡಿಯುವ ನೀರು,ಶೌಚಾಲಯ ಸೇರಿದಂತೆ ಎಲ್ಲಾ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಪದವಿ ಪೂರ್ವ ವಿಭಾಗದ ಉಪ ನಿರ್ದೇಶಕಿ ಎಂ.ಪಿ ನಾಗಮ್ಮ ತಿಳಿಸಿದರು.

# ಯುವನಿಧಿ ಯೋಜನೆಗೆ ಹೆಚ್ಚು ಪ್ರಚಾರ ಮಾಡಿ: ಚಿಕ್ಕಲಿಂಗಯ್ಯ



**ಮಂಡ್ಯ:** ಜಿಲ್ಲಾ ಎಲ್ಲಾ ಕಾಲೇಜುಗಳಲ್ಲಿ ಯುವನಿಧಿ ಯೋಜನೆಯ ಕುರಿತಾಗಿ ಹೆಚ್ಚಿನ ಪ್ರಚಾರ ಮಾಡಬೇಕು ಮತ್ತು ಯೋಜನೆ ಕುರಿತು ಸೂಚನಾ ಫಲಕಗಳನ್ನು ಅಳವಡಿಸಿ ಎಂದು ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಚಿಕ್ಕಲಿಂಗಯ್ಯ ರವರು ಹೇಳಿದರು.

ಜಿಲ್ಲಾ ಪಂಚಾಯತ್ ಮಿನಿ ಸಭಾಂಗಣದಲ್ಲಿ ಶುಕ್ರವಾರ ಏರ್ಪಡಿಸಲಾಗಿದ್ದ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿಮಾತನಾಡಿ ಅನ್ನಸುವಿಧ ಯೋಜನೆಯ ಮೂಲಕ 75 ವರ್ಷ ಮೇಲ್ಪಟ್ಟವರಿಗೆ ಈಗಾಗಲೇ ಪಡಿತರವನ್ನು ಮನೆ ಬಾಗಿಲಿಗೆ ತಲುಪಿಸಲಾಗುತ್ತಿದೆ. ಕೆಲವರ ಬಳಿ ಮೊಬೈಲ್ ಇಲ್ಲದ ಕಾರಣ ಓಟಿಪಿ ಪಡೆದು ಪಡಿತರ ತಲುಪಿಸಲು ಸಾಧ್ಯವಾಗುತ್ತಿಲ್ಲ.ಮಾನವಿಯತೆ ದೃಷ್ಟಿಯಿಂದ ವಯಸ್ಕರಿಗೆ ಪಡಿತರವನ್ನು ನೀಡಿ ಎಂದು ತಿಳಿಸಿದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರು ರಾಜೇಂದ್ರ ಎಸ್. ಹೆಚ್. ಮಾತನಾಡಿ ಶಾಲಾ ಕಾಲೇಜು ಮಕ್ಕಳಿಗೆ ಪರೀಕ್ಷೆ ಶಾಲಾ ಕಾಲೇಜು ಮಕ್ಕಳಿಗೆ ತೊಂದರೆಯಾಗದಂತೆ ವಿದ್ಯುತ್ ಪೂರೈಕೆ ಮಾಡಬೇಕು ಮತ್ತು ಯುವನಿಧಿ ಯೋಜನೆಯಡಿ ವಿಶ್ವ ವಿದ್ಯಾಲಯ ಗಳಲ್ಲಿ ಬ್ಯಾನರ್ ಗಳನ್ನು ಅಳವಡಿಸಿ ಯುವನಿಧಿ ಯೋಜನೆ ಬಗ್ಗೆ ಅರಿವು ಮೂಡಿಸಿ ಎಂದು ಹೇಳಿದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರು ಶಿವಣ್ಣ ರವರು ಮಾತನಾಡಿ ಅನ್ನ ಭಾಗ್ಯ ಯೋಜನೆಯಡಿಯಲ್ಲಿ ಅನ್ನ ಸುವಿಧಾ ಯೋಜನೆ ಕುರಿತು ಪಲಾನುಭವಿಗಳಿಗೆ ನ್ಯಾಯಾಬೆಲೆ ಅಂಗಡಿ ಮಾಲೀಕರು ಪಲಾನುಭವಿಗಳಿಗೆ ಮಾಹಿತಿಯನ್ನು ತಿಳಿಸಬೇಕು ಮತ್ತು ಯೋಜನೆಯನ್ನು ತಲುಪಿಸಬೇಕು ಎಂದು ಹೇಳಿದರು.

ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರು ಹನುಮಂತಯ್ಯ ರವರು ಮಾತನಾಡಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ವೇಗಧೂತ ಬಸ್ಸುಗಳು ಬೆಂಗಳೂರು ಟು ಮೈಸೂರಿಗೆ ಪ್ರಯನಿಸುವ ವೇಗಧೂತ ಬಸ್ಸು ಗಳನ್ನು ಮಂಡ್ಯ ನಿಲ್ದಾಣದಲ್ಲಿ ನಿಲ್ಲುವಂತೆ ಬಸ್ಸು ಸೂಚಿಸಿದರು.

ಜಿಲ್ಲಾ ಪಂಚಾಯತ್ ಯೋಜನಾಧಿಕಾರಿ ಧನುಷ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕಿ ಆಶಾ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕರಾದ ಪ್ರತೀಕ್ ಹೆಗ್ಗಡೆ,ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಯ ಅನುಷ್ಠಾನ ಪ್ರಾಧಿಕಾರದ ಸದಸ್ಯರುಗಳಾದ ಅಜಯ್ ಕುಮಾರ್ ಬಿ.ಪಿ, ಎ.ಬಿ ಕುಮಾರ, ಕೆ. ರುದ್ರಪ್ಪ, ವೀಣಾ ,ಶಂಕರೇಗೌಡ, ಬಸವರಾಜು, ಮಹಮದ್ ಅನ್ಸರ್, ರಮೇಶ್ ಬಿ.ಎಂ, ಪಿ ಮಾದೇಶ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

**ರೈತರಿಗೆ ಕಿರುಕುಳ ನೀಡುವ ಖಾಸಗಿ ಫೈನಾನ್ಸಿಯರ್ ಗಳ ವಿರುದ್ಧ ಕಠಿಣ ಕ್ರಮ : ಡಿಸಿ**

# ರೈತರ ಕುಂದುಕೊರತೆಗಳಿಗೆ ಹಾಗೂ ಸಮಸ್ಯೆಗಳಿಗೆ ಅಧಿಕಾರಿಗಳು ಸ್ಪಂದಿಸಬೇಕು: ಡಾ ಕುಮಾರ

**ಮಂಡ್ಯ :** ಖಾಸಗಿ ಹಣಕಾಸು ಸಂಸ್ಥೆಗಳು ಮತ್ತು ಮೈಕ್ರೋ ಫೈನಾನ್ಸ್ ಕಂಪನಿಗಳು ರೈತರಿಗೆ ಹಾಗೂ ಜನಸಾಮಾನ್ಯರಿಗೆ ಸಾಲ ವಸೂಲಾತಿ ಹೆಸರಿನಲ್ಲಿ ಕಿರುಕುಳ ನೀಡಬಾರದು ಎಂಬುದು ಸರ್ಕಾರದ ಕಟ್ಟುನಿಟ್ಟಿನ ಆದೇಶವಾಗಿದೆ. ನಿಯಮ ಮೀರಿ ವರ್ತಿಸುವ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ ಕುಮಾರ ಅವರು ತಿಳಿಸಿದರು.

ಅವರು ಇಂದು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕರ್ನಾಟಕ ರ?ತ ಸಂಘದ ಬೇಡಿಕೆಗಳ ಸಂಬಂಧ ನಡೆದ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಆರ್‌ಬಿಐಗೆ ಒಳಪಡುವ ಮೈಕ್ರೋ ಫೈನಾನ್ಸ್ ಕಂಪನಿಗಳು ಸಾಲ ವಸೂಲಾತಿ ಮಾಡುವಾಗ ಆರ್‌ಬಿಐ (ಖಃಖ) ನಿಗದಿಪಡಿಸಿದ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು ನಿಯಮಗಳನ್ನು ಪಾಲಿಸಬೇಕು. ನಿಯಮ ಮೀರಿ ದೌರ್ಜನ್ಯ ಎಸಗುವ ಸಂಸ್ಥೆಗಳ ವಿರುದ್ಧ ಕಾನೂನು ರೀತಿ ಕ್ರಮ ಕ?ಗೊಳ್ಳಲಾಗುವುದು ಎಂದು ತಿಳಿಸಿದರು.

ಬೆಳಿಗ್ಗೆಯ ಸಮಯದಲ್ಲಿ ರೈತರು ತಮ್ಮ ಬೆಳೆಗಳಿಗೆ ನೀರು ಹರಿಸುವುದು ಅತ್ಯಂತ ಪ್ರಯೋಜನಕಾರಿ ಚೆಸ್ಕಾಂ ನಿಂದ ಬೆಳಿಗ್ಗೆ ವಿದ್ಯುತ್ ನೀಡಲು ಅಗತ್ಯ ಕ್ರಮ ಕ?ಗೊಳ್ಳಿ. ಹಗಲು ವೇಳೆ ವಿದ್ಯುತ್ ನೀಡಲು ತಾಂತ್ರಿಕ ಅಡಚಣೆಗಳು ಇದ್ದರೆ ಅದನ್ನು ಬಗಹರಿಸಿ ಅಗತ್ಯ ಕ್ರಮಕೊಳ್ಳಿ ಎಂದು ತಿಳಿಸಿದರು.

ಬೆಳಿಗ್ಗೆ ವಿದ್ಯುತ್ ನೀಡುವುದರಿಂದ ರೈತರಿಗೆ ಕ್ರಿಮಿ ಕೀಟಗಳ ಭಯವಿಲ್ಲದೆ ಮತ್ತು ಸರಿಯಾದ ಬೆಳಕಿನಲ್ಲಿ ನೀರು ಹರಿಸಲು ಅನುಕೂಲವಾಗುತ್ತದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ರೈತರ ಕುಂದುಕೊರತೆಗಳಿಗೆ ಹಾಗೂ ಸಮಸ್ಯೆಗಳಿಗೆ ಅಧಿಕಾರಿಗಳು ಸ್ಪಂದಿಸಬೇಕು ಎಂದು ತಿಳಿಸಿದ ಜಿಲ್ಲಾಧಿಕಾರಿಗಳು ರೈತರಿಗೆ ಕೃಷಿ ಚಟುವಟಿಕೆಗಳನ್ನು ಉತ್ತೇಜಿಸಲು ಬ್ಯಾಂಕುಗಳು ಹಲವು ಬೆಳೆ ಸಾಲ ಯೋಜನೆಗಳನ್ನು ಸಮರ್ಪಕವಾಗಿ ನೀಡಲು ಕ್ರಮವಹಿಸಿ ಎಂದು ಅವರು ತಿಳಿಸಿದರು.

ಸಭೆಯಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಂಟಿ ನಿರ್ದೇಶಕರಾದ ಪ್ರತೀಕ್ ಹೆಗ್ಡೆ ಹಾಗೂ ರೈತ ಮುಖಂಡರು ಭಾಗವಹಿಸಿದ್ದರು.



# ಪೋಷಕರು ಮಕ್ಕಳನು ಸರ್ಕಾರಿ ಶಾಲೆಗಳಿಗೆ ಸೇರಿಸಿ: ಶಂಕರೇಗೌಡ

**ಕೆ.ಆರ್.ನಗರ:** ಪೋಷಕರುಗಳು ಖಾಸಗಿ ಶಾಲೆಗಳ ವ್ಯಾಮೋಹ ಬಿಟ್ಟು ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಬೇಕೆಂದು ತಾಲೂಕು ಸರ್ಕಾರಿ ನೌಕರರ ಸಂಘದ ಗೌರವಾಧ್ಯಕ್ಷ ಶಂಕರೇಗೌಡ ಹೇಳಿದರು.

ಅವರು ಸಾಲಿಗ್ರಾಮ ತಾಲೂಕಿನ ಲಕ್ಕಿಕುಪ್ಪೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಖಾಸಗಿ ಶಾಲೆಗಳಲ್ಲಿ ಓದಿದರೆ ಮಾತ್ರ ಮಕ್ಕಳು ದೊಡ್ಡವರಾಗುತ್ತಾರೆಂಬ ಭ್ರಮೆಯನ್ನು ಬಿಡಬೇಕು. ಸರ್ಕಾರಿ ಶಾಲೆಗಳಲ್ಲಿ ಓದಿದ ವಿದ್ಯಾರ್ಥಿಗಳು ಇಂದು ಉನ್ನತ ಸ್ಥಾನಮಾನಗಳನ್ನು ಅಲಂಕರಿಸಿದ್ದಾರೆ. ಸರ್ಕಾರಿ ಶಾಲೆಗಳಲ್ಲಿ ಹಲವು ಸೌಲಭ್ಯಗಳು ದೊರೆಯುತ್ತವೆ. ವಿದ್ಯಾರ್ಥಿಗಳು ಅವುಗಳನ್ನು ಸದುಪಯೋಗ ಪಡಿಸಿಕೊಂಡು ಚೆನ್ನಾಗಿ ಕಲಿತು ಅತ್ಯುನ್ನತ ಸ್ಥಾನಗಳನ್ನು ಪಡೆಯಬೇಕು ಆ ಮೂಲಕ ನಾಡಿಗೆ ಕೊಡುಗೆಯನ್ನು ನೀಡಬೇಕು ಎಂದರು.

ಗ್ರಾಮಸ್ಥರುಗಳು, ಯುವಕರು, ಮುಖಂಡರು ಹಾಗೂ ಶಾಲಾ ಅಭಿವೃದ್ಧಿ ಸಮಿತಿಯವರು ಶಾಲೆಯ ಅಭಿವೃದ್ಧಿಗೆ ಹಾಗೂ ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕು ಎಂದರು.




ಮಕ್ಕಳಲ್ಲಿರುವ ಸುಪ್ತ ಪ್ರತಿಭೆಯು ಅನಾವರಣಗೊಳ್ಳಲು ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮಗಳು ಉತ್ತಮ ವೇದಿಕೆಯಾಗಿವೆ. ಅವುಗಳ ಮೂಲಕ ಮಕ್ಕಳಿಗೆ ಪ್ರೋತ್ಸಾಹಿಸುವಂತಹ ಕೆಲಸವನ್ನು ಮಾಡಬೇಕು ಜೊತೆಗೆ ಒಳ್ಳೆಯ ಸಂಸ್ಕಾರವನ್ನು ಕಲಿಸಿ ಉತ್ತಮ ಪ್ರಜೆಗಳನ್ನಾಗಿ ರೂಪಿಸುವ ಕೆಲಸ ಮಾಡಬೇಕು ಎಂದರು.

ಶಾಲಾ ವಿದ್ಯಾರ್ಥಿಗಳಿಂದ ವಿಶೇಷ ಸಾಂಸ್ಕೃತಿಕ ಕಾರ್ಯಕ್ರಮವನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿತರಿಸಿ, ಅಧಿಕಾರಿಗಳು, ಶಿಕ್ಷಕರುಗಳು ಹಾಗೂ ಗಣ್ಯರುಗಳನ್ನು ಅಭಿನಂದಿಸಲಾಯಿತು.

ಸಮಾರಂಭದಲ್ಲಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎಲ್.ವಿ.ಗೋಪಾಲ್, ಮಾಜಿ ಉಪಾಧ್ಯಕ್ಷ ಮಹದೇವ್, ತಾಲೂಕು ಉಪಾಧ್ಯಾಯರ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕಾಂತರಾಜು, ಎಸ್ ಡಿ ಎಂ ಸಿ ಅಧ್ಯಕ್ಷ ಹರೀಶ್, ಉಪಾಧ್ಯಕ್ಷೆ ಪಲ್ಲವಿ, ಹಾಲಿನ ಡೇರಿ ಅಧ್ಯಕ್ಷ ಸಂಜಯ್ ಕುಮಾರ್, ಮಾಜಿ ಅಧ್ಯಕ್ಷ ಮೊಗಣ್ಣೆಗೌಡ, ಸಿಇಓ ಮಂಜುನಾಥ್, ಮುಖಂಡರುಗಳಾದ ರಾಮಕೃಷ್ಣ, ಲೋಕೇಶ್, ಕೃಷ್ಣೇಗೌಡ, ಸ್ವಾಮಿ, ರಾಮಯ್ಯ, ಶಿವಕುಮಾರ್, ಸದಾಶಿವಪ್ಪ, ಪ್ರದೀಪ್, ಮಂಜಯ್ಯ, ಮುಖ್ಯ ಶಿಕ್ಷಕ ಮುರಳಿಧರ, ಶಿಕ್ಷಕರಾದ ಜಯಣ್ಣ, ನಿರಂಜನ್, ಅತಿಥಿ ಶಿಕ್ಷಕಿ ವಿದ್ಯಾ, ಎಸ್ ಡಿ ಎಂ ಸಿ ಸಮಿತಿಯವರು, ಲಕ್ಕಿಕುಪ್ಪೆ, ಗುಮ್ಮನಹಳ್ಳಿ,,

ಲಕ್ಕಿಕುಪ್ಪೆಕೊಪ್ಪಲು ಗ್ರಾಮಸ್ಥರು ಭಾಗವಹಿಸಿದ್ದರು.

## ಅರ್ಜಿ ಆಹ್ವಾನ

**ಮಂಡ್ಯ:** ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿ., ವತಿಯಿಂದ 2025–26 ನೇ ಸಾಲಿನಲ್ಲಿ ಮಂಜೂರಾದ ವಿಶೇಷ ಘಟಕ ಯೋಜನೆ/ ಗಿರಿಜನ ಉಪಯೋಜನೆಯಾಡಿ ಕುರಿ/ಮೇಕೆ ಘಟಕಗಳನ್ನು (10+1) ಅನುಷ್ಠಾನಗೊಳಿಸಲು ಜಿಲ್ಲೆಗೆ ನಿಗದಿಪಡಿಸಿರುವ ವಿಶೇಷ ಘಟಕ ಯೋಜನೆ(16), ಗಿರಿಜನ ಉಪಯೋಜನೆ(04) ಗುರಿಗಳನ್ನು ಮಂಡ್ಯ ಜಿಲ್ಲೆಗೆ ನಿಗದಿಪಡಿಸಿ ಅರ್ಹ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ FRUTIS ID (ಗುರುತಿನ ಸಂಖ್ಯೆ) ಹೊಂದಿರುವ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಸದರಿ ಕಾರ್ಯಕ್ರಮದಲ್ಲಿ ಸರ್ಕಾರದ ನಿಯಮಗಳಂತೆ ಮಹಿಳೆಯರಿಗೆ (ಶೇ.33.3),ವಿಶೇಷ ಚೇತನರಿಗೆ (ಶೇ.3) ಆದ್ಯತೆ ನೀಡುವುದು ಹಾಗೂ ಕಳೆದ 5 ವರ್ಷಗಳಲ್ಲಿ ಪಶುಪಾಲನಾ ಇಲಾಖೆ/ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮದಲ್ಲಿ ವಿವಿಧ ಯೋಜನೆಗಳಲ್ಲಿ ಸಹಾಯಧನ ಸವಲತ್ತು ಪಡೆದಿರುವ ಕುಟುಂಬಗಳು ಮತ್ತೆ ಈ ಯೋಜನೆಯ ಸವಲತ್ತು ಪಡೆಯಲು ಅರ್ಹರಿರುವುದಿಲ್ಲ. ಅರ್ಹ ಕುರಿಗಾರರು ಅರ್ಜಿಗಳನ್ನು ಫೆಬ್ರವರಿ 26 ರಿಂದ ಸಹಾಯಕ ನಿರ್ದೇಶಕರು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ., ಜಿಲ್ಲಾ ಕಛೇರಿಯಲ್ಲಿ ಪಡೆಯಬಹುದು. ಮಾ.13ರೊಳಗೆ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನವಾಗಿರುತ್ತದೆ. ಎಂದು ಕರ್ನಾಟಕ ಕುರಿ ಮತ್ತು ಉಣ್ಣೆ ಅಭಿವೃದ್ಧಿ ನಿಗಮ ನಿಯಮಿತ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆರೋಗ್ಯ ಮಿತ್ರ ಲಾವಂಚ



✍ಸೌಮ್ಯಸನತ್

ನಮ್ಮ ಸುತ್ತಮುತ್ತಲು ಹಲವು ಪ್ರಾಕೃತಿಕ ಗಿಡಮೂಲಿಕೆಗಳಿವೆ, ಅವುಗಳನ್ನು ನಾವು ಹೆಚ್ಚಾಗಿ ಸೇವಿಸುವುದಿಲ್ಲ, ಅಷ್ಟೇ ಯಾಕೆ ಅವುಗಳನ್ನು ನಾವು ವಿಶೇಷವೆಂದೂ ಕೂಡ ಪರಿಗಣಿಸುವುದಿಲ್ಲ. ಹಿಂದೆ

ಮಣ್ಣಿನ ಪಾತ್ರೆಯಲ್ಲಿ ಕುಡಿಯಲೆಂದು ಇರಿಸಿದ್ದ ನೀರಿಗೆ, ತಲೆಗೆ ಹಾಕಲೆಂದು ಇಟ್ಟ ಎಣ್ಣೆಗೆ, ಮನೆಯ ಕಿಟಕಿಗಳಿಗೆ ಜಾಲರಿಯಂತೆ ಈ ಬೇರನ್ನು ಬಳಸುತ್ತಿದ್ದರು. ಕುಡಿಯುವ ನೀರು ಶುದ್ಧವಾಗುವ ಜೊತೆ ತಂಪಾಗಿ ಸುವಾಸನೆ ಹೊಂದಿದರೆ ಎಣ್ಣೆಯು ತಲೆಗೆ ತಂಪು ನೀಡುತ್ತಿತ್ತು. ಕಿಟಕಿಯಿಂದ ಬರುವ ಗಾಳಿ ಹಿತವಾಗಿರುತ್ತಿತ್ತು. ಹಾಗಾದರೆ ಈ ಬೇರನ್ನು ನೀಡುವ ಸಸ್ಯ ಯಾವುದೆಂಬ ಅಚ್ಚರಿಯೆ?

ಅದೊಂದು ಬರಿಯ ಹುಲ್ಲು ! ಈ ನಿಷ್ಪಾಪಿ ಸಸ್ಯ ಅಥವಾ ಹುಲ್ಲಿನ ಹೆಸರೇ ಲಾವಂಚ. ಕನ್ನಡದಲ್ಲಿ ಲಾವಂಚ, ಕಾಡುದಪ್ಪ, ಕರಿಸಜ್ಜೆ ಹುಲ್ಲು, ಮಡಿವಾಳ ಗಿಡ ಎಂದೆಲ್ಲ ಕರೆಸಿಕೊಳ್ಳುವ ಇದನ್ನು ತುಳುವಿನಲ್ಲಿ ಮಲ್ಲಿವಾಳ್, ಮುಡ್ಯಲ, ರಾಮಂಚ ವೆನ್ನುವರು.



ನಮ್ಮ ಹಿರಿಯರು ಈ ಹುಲ್ಲಿನ ಬೇರನ್ನು ಚೆನ್ನಾಗಿ ತೊಳೆದು ಒಣಗಿಸಿ ತಮ್ಮ ಮನೆಗಳಲ್ಲಿ ಮರದ ಕಲೆಂಬಿ (ದೊಡ್ಡ ಪೆಟ್ಟಿಗೆ) ಯಲ್ಲಿದ್ದ ಅಕ್ಕಿ, ದಿಂಬು, ಹೊದಿಕೆ, ಬಟ್ಟೆಗಳ ನಡುವೆ ಮಾತ್ರವಲ್ಲದೆ ಅಜ್ಜಿ, ಅಮ್ಮ ಕಬ್ಬಿಣದ ಪೆಟ್ಟಿಗೆಯೊಳಗಿಟ್ಟ ತಮ್ಮ ಸೀರೆಗಳ ನಡುವೆ ಜೋಪಾನವಾಗಿ ಜೋಡಿಸಿಡುತ್ತಿದ್ದರು. ಸೊಳ್ಳೆ, ಕೀಟ, ತಿಗಣೆ, ಜಿರಳೆಗಳ ನಿವಾರಣೆಗೆ ಈ ಬೇರು ಉಪಯುಕ್ತವಾಗಿತ್ತು.

ಇತ್ತೀಚಿಗೆ ಜನರು ಲಾವಂಚ ಅಥವಾ ಮಡಿವಾಳ ಹುಲ್ಲಿನ ಬೇರುಗಳನ್ನು ಬಳಸುವುದನ್ನೇ ಮರೆತು ಬಿಟ್ಟಿದ್ದಾರೆ. ಫ್ರಿಡ್ಜ್ ಇಲ್ಲದ ಕಾಲದಲ್ಲಿ ದೇಹವನ್ನು ತಂಪಾಗಿಸಲು ಲಾವಂಚ ಬಳಸಲಾಗುತ್ತಿತ್ತು. ಅದರಲ್ಲಿಯೂ ವಿಶೇಷವಾಗಿ ಬೇಸಿಗೆ ಕಾಲದಲ್ಲಿ ಲಾವಂಚ ಬಳಸುವುದರಿಂದ ಬೇಸಿಗೆಯಲ್ಲಿ ಬರುವ ರೋಗಗಳಿಂದ ರಕ್ಷಣೆ ಸಿಗುತ್ತಿತ್ತು. ಲಾವಂಚ ಅಥವಾ ವೇಟಿವೆರ್ ನೀರನ್ನು ಸೇವಿಸುವ ಮೂಲಕ ದೇಹವನ್ನು ತಂಪಾಗಿರಿಸಿಕೊಳ್ಳಬಹುದು. ಲಾವಂಚದ ಬೇರು ಹಲವು ಆಯುರ್ವೇದ ಔಷಧಿಗಳಲ್ಲಿ ಬಳಸಲ್ಪಡುತ್ತದೆ. ಮೈಕೈ ನೋವು, ವಾತ, ಹೊಟ್ಟೆ ನೋವು, ಜಂತುಹುಳದ ಸಮಸ್ಯೆ, ಮಲಬದ್ಧತೆ, ತಲೆನೋವು, ನರಮಂಡಲದ ಶಾಂತತೆ, ಒತ್ತಡ ನಿವಾರಣೆ, ರಕ್ತ ಪರಿಚಲನೆಯ ಸುಧಾರಣೆ, ಜೀರ್ಣಾಂಗ ವ್ಯವಸ್ಥೆ ಸರಿಪಡಿಸಲು, ಉರಿಮೂತ್ರ, ಕೈಕಾಲು ನೋವು, ನರಗಳ ನಿಶ್ಯಕ್ತಿ,



ಮೊಡವೆ, ಸಂಧಿವಾತ, ನಂಜು ನಿವಾರಕ, ಜ್ವರ, ಬೆನ್ನು ನೋವು ಇತ್ಯಾದಿಗಳಿಗೆ ಔಷಧಿಯಾಗಿದೆ. ಬೇಸಿಗೆಯಲ್ಲಿ ಬಿಸಿಲಬೇಗೆಯಿಂದ ಉಂಟಾಗುವ ಕಾಯಿಲೆಗೆ ರಕ್ಷಣೆ ಲಾವಂಚದ ಬೇರು ಹಾಕಿರಿಸಿದ ನೀರು. ತೈಲವು ಚರ್ಮ ರಕ್ಷಣೆಗೆ ಪ್ರಮುಖವಾಗಿರುವುದರಿಂದ ಕ್ರೀಮ್, ಸಾಬೂನುಗಳಲ್ಲಿ ಬಳಸುತ್ತಾರೆ.

ಆರೋಗ್ಯ ಭಾಗ್ಯ

**ಬೇಸಿಗೆ ಕಾಲದಲ್ಲಿ ಲಾವಂಚ ನೀರನ್ನು ಸೇವಿಸುವ ಲಾಭಗಳು**

1. ಬೇಸಿಗೆಯಲ್ಲಿ ದೇಹದ ದುರ್ವಾಸನೆ ಒಂದು ಸಾಮಾನ್ಯ ಸಮಸ್ಯೆಯಾಗಿರುತ್ತದೆ, ಇದನ್ನು ತಪ್ಪಿಸಲು ಲಾವಂಚ ನೀರನ್ನು ಸೇವಿಸಬಹುದು .
2. ಹೊಟ್ಟೆಯನ್ನು ಸ್ವಚ್ಛಗೊಳಿಸಲು ಲಾವಂಚ ನೀರನ್ನು ಕುಡಿಯಬಹುದು. ಇದು ಜೀರ್ಣಕ್ರಿಯೆಯನ್ನು ಸುಧಾರಿಸುತ್ತದೆ. ಮಲಬದ್ಧತೆಯಿಂದ ಬಳಲುತ್ತಿರುವವರು ಈ ನೀರನ್ನು ಕುಡಿದರೆ ಉತ್ತಮ ಪರಿಹಾರ ದೊರಕುತ್ತದೆ. ಈ ನೀರು ಹೊಟ್ಟೆಯನ್ನು ತಂಪಾಗಿಸುತ್ತದೆ ಮತ್ತು ಹೊಟ್ಟೆಯಲ್ಲಿನ ಗ್ಯಾಸ್, ಮಲಬದ್ಧತೆ ಇತ್ಯಾದಿ ಸಮಸ್ಯೆಗಳಿಂದ ಮುಕ್ತಿ ಸಿಗುತ್ತದೆ.
3. ಲಾವಂಚ ಬೇರಿನ ನೀರನ್ನು ಸೇವಿಸಿದರೆ ಬೇಸಿಗೆಯಲ್ಲಿನ ಕೂದಲು ಉದುರುವಿಕೆ ಸಮಸ್ಯೆ ದೂರಾಗುತ್ತದೆ. ಬೇಸಿಗೆಯಲ್ಲಿ ತಲೆಯಲ್ಲಿ ತುರಿಕೆಯ ಸಮಸ್ಯೆ ಇರುವವರು ಈ ನೀರನ್ನು ಕುಡಿಯಬಹುದು .
4. ಲಾವಂಚ ಬೇರುಗಳನ್ನು ನೀರಿನಲ್ಲಿ ಹಾಕಿ ಕುದಿಸಿ ಭಟ್ಟಿ ಇಳಿಸುವ ಮೂಲಕ ಅದರಿಂದ ತೈಲವನ್ನು ತಯಾರಿಸಲಾಗುತ್ತದೆ. ಈ ತೈಲವನ್ನು ಸಾಮಾನ್ಯವಾಗಿ ಸಾಬೂನು, ಸುಗಂಧವರ್ಧಕ, ಅಗರಬತ್ತಿ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಈ ತೈಲವನ್ನು ಮೈ-ಕೈ ನೋವು ನಿವಾರಿಸಲು ಕೂಡ ಬಳಸಲಾಗುತ್ತದೆ. ಇದಲ್ಲದೆ ವಾತ, ಹೊಟ್ಟೆಯಲ್ಲಿ ಜಂತುವಿನ ಸಮಸ್ಯೆ, ಹೊಟ್ಟೆಶೂಲೆ ಇತ್ಯಾದಿಗಳ ಸಮಸ್ಯೆ ನಿವಾರಣೆಗೆ ಲಾವಂಚ ಬೆರೆಸಿದ ನೀರನ್ನು ಕುದಿಸಿ, ನಂತರ ಸೋಸಿ ಕುಡಿಯಬಹುದು. ಹಲವಾರು ಆಯುರ್ವೇದ ಔಷಧಿಗಳಲ್ಲಿ ಇದನ್ನು ಬಳಸಲಾಗುತ್ತದೆ.

ಲಾವಂಚದ ಬೇರಿನ ಉಪಯೋಗಗಳ ಬಗ್ಗೆ ನಮಗೆಲ್ಲಾ ತಿಳಿದೇ ಇದೆ. ಇದನ್ನು ಬಿಸಿನೀರಿಗೆ ಹಾಕಿ ಕುದಿಸಿ ತಣಿಸಿ ಕುಡಿಯುವುದರಿಂದ ಹಲವು ಆರೋಗ್ಯದ ಪ್ರಯೋಜನಗಳನ್ನು ಪಡೆದುಕೊಳ್ಳಬಹುದು. ಅದರ ಹೊರತಾಗಿ ಅದನ್ನು ಕೊಠಡಿಯಲ್ಲಿ ಇಟ್ಟುಕೊಳ್ಳುವುದರಿಂದ ಮನೆಯನ್ನು ತಂಪಾಗಿಸಬಹುದು. ಲಾವಂಚದ ಹುಲ್ಲನ್ನು ಕೋಣೆಗೆ ಕಿಟಕಿಗಳಿಗೆ ಕಟ್ಟಿ, ದಿನಕ್ಕೆರಡು ಬಾರಿ ಅದಕ್ಕೆ ನೀರು ಸಿಂಪಡಿಸಿ. ಕುಡಿಯುವ ನೀರಿನ ಪಾತ್ರೆಗೆ ಅಥವಾ ಹೂಜಿಗೆ ಲಾವಂಚದ ಬೇರನ್ನು ಹಾಕಿಟ್ಟು ಅರ್ಧ ಗಂಟೆ ಬಳಿಕ ಕುಡಿಯಿರಿ. ಇದು ತಂಪಾಗಿ, ಶುದ್ಧವಾಗಿರುತ್ತದೆ.

ನೆನೆಸಿಟ್ಟ ಲಾವಂಚದ ಮೇಲೆ ತರಕಾರಿ ಹಣ್ಣುಗಳನ್ನು ಇಟ್ಟರೆ ಅದು ಬೇಗ ಕೆಡುವುದಿಲ್ಲ. ಕಾಲುಗಳು ವಿಪರೀತ ಸುಸ್ತಾಗಿದ್ದರೆ ಲಾವಂಚದ ಬೇರಿನ ಮೇಲೆ ಐದು ನಿಮಿಷ ಇಟ್ಟು ನೋಡಿ, ನೋವು ಮಾಯವಾಗಿ ಕಾಲುಗಳಿಗೆ ತಂಪಾದ ಅನುಭವವಾಗುತ್ತದೆ.



ಹಲವಾರು ಗೃಹಾಲಂಕಾರ ವಸ್ತುಗಳ ತಯಾರಿಕೆಗೂ ಕೂಡ ಲಾವಂಚ ಬೇರನ್ನು ಬಳಸಲಾಗುತ್ತದೆ. ಇದರಿಂದ ಚಾಪೆ, ಬುತ್ತಿ, ಬೀಸಣಿಕೆ ಇತ್ಯಾದಿ ವಸ್ತುಗಳನ್ನು ತಯಾರಿಸಬಹುದು. ಲಾವಂಚ ಬೇರುಗಳಿಗೆ ನೀರು ಮತ್ತು ಮಣ್ಣನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವಿದೆ. ಹೀಗಾಗಿ ಕೆಲ ಇಳಿಜಾರು ಪ್ರದೇಶಗಳಲ್ಲಿನ ರೈತರು ನೀರನ್ನು ಭೂಮಿಯಲ್ಲಿ ಇಂಗಿಸಲು ಲಾವಂಚ ಹುಲ್ಲನ್ನು ಬೆಳೆಯುತ್ತಾರೆ. ಇದೆ ಕಾರಣಕ್ಕೆ ಇದನ್ನು 'ಬಡವ ನಿರಾವರಿ' ಎಂದೂ ಕೂಡ ಕರೆಯಲಾಗುತ್ತದೆ.

ಈ ಹುಲ್ಲನ್ನು ಜಾನುವಾರುಗಳಿಗೆ ತಿನ್ನಲೂ ಕೂಡ ಕೊಡಬಹುದು.

ಲಾವಂಚದ ಬೇರುಗಳಿಂದ ಹೆಣೆದ ಬೀಸಣಿಗೆಗೆ ನೀರು ಚಿಮುಕಿಸಿ ಗಾಳಿ ಹಾಕುವ ಕ್ರಮ ಮೊಗಲ್ ದೊರೆಗಳ ಕಾಲದಲ್ಲಿತ್ತು ಎನ್ನುತ್ತದೆ ಇತಿಹಾಸ.

ಪ್ರಭು ಶ್ರೀರಾಮ ಚಂದ್ರ ಸೀತೆ, ಲಕ್ಷ್ಮಣರ ಜೊತೆ ವನವಾಸದಲ್ಲಿದ್ದಾಗ ಕುಡಿಯುವ ನೀರು ಶುದ್ಧೀಕರಿಸಲು ಲಾವಂಚ ಬಳಸುತ್ತಿದ್ದರೆನ್ನಲಾಗುತ್ತದೆ. ಆದ್ದರಿಂದಲೇ ರಾಮಾಂಚ ಎಂಬ ಹೆಸರು ಬಂದಿದೆ ಎಂಬ ಪ್ರತೀತಿಯಿದೆ.


ಹಿರಿಯ ಕಾದಂಬರಿಕಾರ ಎಸ್ ಎಲ್ ಭೈರಪ್ಪನವರ "ಪರ್ವ" ಕಾದಂಬರಿಯಲ್ಲಿ ದ್ರೌಪದಿ ತನ್ನ ಮಕ್ಕಳಿಗೆ ತಂಪಾಗಲೆಂದು ಬೇಸಿಗೆಯಲ್ಲಿ ಕಿಟಕಿಗಳಿಗೆ ಲಾವಂಚದ ಬೇರಿನ ಹೆಣೆದ ಪರದೆ ಹಾಕಿ ಆಗಾಗ ನೀರು ಚಿಮುಕಿಸುತ್ತಿದ್ದಳೆಂದಿದ್ದಾರೆ. ಗುಬ್ಬಿ ಗೋಸಲ ಚನ್ನ ಬಸವೇಶ್ವರರಿಗೆ ಭೀಮನ ಅಮವಾಸ್ಯೆ ಪ್ರಯುಕ್ತ ಲಾವಂಚದ ಅಲಂಕಾರವನ್ನು ಮಾಡಿದ್ದರು. ತುಮಕೂರಿನಲ್ಲಿ ಶನಿದೇವರಿಗೂ ಲಾವಂಚದ ಬೇರಿನ ಅಲಂಕಾರ ಮಾಡಿ ಪೂಜಿಸುತ್ತಾರೆ. ಉಡುಪಿ ಜಿಲ್ಲೆಯ ದೇವಸ್ಥಾನ ವೊಂದರಲ್ಲಿ ಲಾವಂಚದ ಬೇರು ಪ್ರಸಾದ ರೂಪದಲ್ಲಿ ದೊರಕುವುದಂತೆ. ಭಟ್ಕಳದ "ಉಶಿರಾ" ಕಂಪನಿ ದಶಕಗಳಿಂದ ಲಾವಂಚದ ಕರಕುಶಲ ಉತ್ಪನ್ನಗಳನ್ನು ತಯಾರಿಸಿ ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಿದೆ.

ದೇವರ ಕಲಾಕೃತಿ, ಯಕ್ಷಗಾನ ಮುಖವಾಡ, ಹೂದಾನಿ, ಹಾರ, ಚಾಪೆ, ವ್ಯಾನಿಟಿ ಬ್ಯಾಗ್, ಪರ್ಸ್, ಮಕ್ಕಳ ಆಟಿಕೆ, ಕುರ್ಚಿ, ಮಂಚವನ್ನೂ ಲಾವಂಚದ ಬೇರಿನಿಂದ ತಯಾರಿಸುತ್ತಾರೆ. ಇದರ ಬೇರಿನ ಟೊಪ್ಪಿಯಂತೂ ಎಲ್ಲರಿಗೂ ಅಚ್ಚುಮೆಚ್ಚು. ಸ್ವಲ್ಪ ನೀರು ಚಿಮುಕಿಸಿ ತಲೆಗೇರಿಸಿದರೆ ಶೀತಲ ಪೆಟ್ಟಿಗೆ ತಲೆಗಿರಿಸಿಂದತೆಯೇ ಸರಿ. ಶೀತ ಸಮಸ್ಯೆ ಇರುವವರು ಕಿವಿನೋವು, ಅಸ್ತಮಾ ಇರುವವರು ಲಾವಂಚದಿಂದ ದೂರವಿದ್ದರೆ ಒಳಿತು.

## ಪದ ಬಂಧ

ಜ್ಯೋತಿ ರಾಜೇಶ್





### ಎಡದಿಂದ ಬಲಕ್ಕೆ....

1. ನಿಮ್ನಿಷ್ಟದ ಪದ......(5)
3. ಹಿಂದೆ ಋಷಿಗಳು ಯಜ್ಞದಲ್ಲಿ ದೇವರಿಗೆ ಅರ್ಪಿಸುತ್ತಿದ್ದದ್ದು......(3)
5. ಸುರರ ಗುರುಪುತ್ರ, ಹಾಗೂ ಅಸುರರ ಗುರುಪುತ್ರಿ ಇಲ್ಲಿ ಒಟ್ಟಿಗೆ ಬಂದಿದ್ದಾರೆ......(6)
7. ಹಿರಣ್ಯಕಷ್ಯಪುವಿನ ಹೊಟ್ಟೆ ಬಗೆಯಲು ನರಸಿಂಹ ಬಳಸಿದ ಆಯುಧ ಇಲ್ಲಿ ತಿರುಗಿದೆ.....(2)
9. ವಿಷ್ಣುವಿನ ಹಾಸಿಗೆ ಪೂರ್ತಿ ಕಲಸು ಮೇಲೋಗರವಾಗಿದೆ......(3)
11. ವಿಷ್ಣು ಪತ್ನಿಯನ್ನು ಹೀಗೂ ಕರೆಯಬಹುದು......(2)
13. ಸುರಾಸುರರು ಸೇರಿ ಅಮೃತ ಪಡೆಯಲು ಮಾಡಿದ್ದು......(6)
16. ಬ್ರಹ್ಮಕಪಾಲದಿಂದ ಬಿಡಿಸಿಕೊಳ್ಳಲು ಶಿವ 'ಇವನಂತೆ' ಬೇಡಿದ.....17. ಆತ್ಮವನ್ನು ಕರೆದೊಯ್ಯಲು ಹಿಂದುಮುಂದಾಗಿ ಬಂದ ಕಾಲನ ಸೇವಕ......


### ಮೇಲಿನಿಂದ ಕೆಳಕ್ಕೆ.....

1. ಪರಶಿವನ ಆತ್ಮಲಿಂಗವನ್ನೇ ಬೇಡಿದವನಿಗೆ ಹತ್ತು ಮುಖಗಳೆ?......(4)
2. ಕಾರ್ತಿಕೇಯನಿಂದ ಹತನಾದ ಈ ಅಸುರ......(3)
4. ಕೊನೆಯಲ್ಲಿ ದೀರ್ಘವಾದ ವೈಕುಂಠದ ದ್ವಾರಪಾಲಕರಲ್ಲೊಬ್ಬ .(3)
6. ಜಗದೋದ್ಧಾರನನ್ನು ಹೆತ್ತ ತಾಯಿ.....(3)
8. ಪಾಕ ಪ್ರಾವೀಣ್ಯತೆಗೆ ಹೆಸರಾದ ರಾಜ......(2)
9. ಅವಲಕ್ಕಿ ನೀಡಿ ಅಷ್ಟೈಶ್ವರ್ಯ ಪಡೆದವ......(3)
10. ಹಗುರದಲ್ಲಿ ಬಂದ ಶಿವ......(2)
12. ಯಮನ ಪಾಶವನ್ನೇ ತನ್ನ ಭಕ್ತಿಯಿಂದ ಗೆದ್ದು ಬಂದ ಋಷಿ ಕುಮಾರ......(4)
14. ಲೌಕಿಕ ಜೀವನದಿಂದ ಮೋಕ್ಷಹೊಂದಲು ಇಚ್ಛಿಸುವ ವ್ಯಕ್ತಿ ಅಥವಾ ಸನ್ಯಾಸಿ......(3)15. ಪಾಪಿಗಳಿಗೆ ಸತ್ತ ಮೇಲೆ ಸಿಗುತ್ತದೆನ್ನಲಾಗುವ ಜಾಗ.....(3)

# ಶಿವಣ್ಣನ ಸಿನಿಪಯಣಕ್ಕೆ ಭರ್ತಿ ೪೦ ವಸಂತಗಳು

# ಇಂದಿಗೂ ನಾಟೌಟ್....!





✍ಹಿರಿಯೂರು ಪ್ರಕಾಶ್

ಹಾಗೆ ನೋಡಿದರೆ ಇವರು ಆರಡಿ ಕಟೌಟೂ ಅಲ್ಲ , ಆರು ಪ್ಯಾಕಿನ ದೇಹದ ಹ್ಯಾಂಡ್ ಸಮ್ ಪರ್ಸನಾಲಿಟೀನೂ ಅಲ್ಲ. ಕಂಚಿನ ಕಂಠವೂ ಇವರದಲ್ಲ, ಕ್ಯಾಡ್ ಬರೀಸ್ ಮೊದ್ದುಮಣಿಯ ಫೇಸ್ ಕಟ್ಟಿನ ಹೀರೋನೂ ಇವರಲ್ಲ. ನೋಡೋಕೆ ಬೆಳ್ಳಗೂ ಇಲ್ಲ, ಆಕರ್ಷಕ ಮೀಸೆ, ಉದ್ದುದ್ದ ಗಡ್ಡವೂ ಇವರಲ್ಲಿಲ್ಲ. ಕಲಾ ವಿಶ್ವವಿದ್ಯಾಲಯದಂತಹ ಅಪ್ಪನ ಹೆಸರಿದ್ದರೂ ಅವರ ಯಾವುದೇ ಶೈಲಿಯನ್ನೂ ಎಂದೂ ಅನುಸರಿಸಿಲ್ಲ, ಅಸಲು ಅವರಿಂದ ವಿಶೇಷ ತರಬೇತಿಯೂ ಪಡೆಯಲಿಲ್ಲ.!

ಇಷ್ಟೆಲ್ಲಾ ಇಲ್ಲ- ಅಲ್ಲಗಳ ನಡುವೆಯೂ ಕರುನಾಡಿಗೇ ಕಣ್ಮಣಿಯಾಗಿ ತನ್ನ ತಂದೆ ಹಾಕಿಕೊಟ್ಟ ಕಲಾ ಮೌಲ್ಯಗಳ ಚೌಕಟ್ಟನ್ನು ಎಂದಿಗೂ ದಾಟದೇ ತನ್ನದೇ ಹಾದಿಯಲ್ಲಿ ನಡೆದು ಬಂದು , ಮೂರ್ನಾಲ್ಕು ತಲೆಮಾರಿನ ಹೀರೋಗಳು ಹಾಗೆ ಬಂದು ಹೀಗೆ ಹೋದರೂ ತನ್ನಲ್ಲಿನ್ನೂ ಅದೇ ಲವಲವಿಕೆ, ಅದೇಎನರ್ಜಿ, ಅದೇ ಜೋಷ್ ಉಳಿದಿದೆ ಎಂಬುದನ್ನು ಇವರು ಕಳೆದ ನಾಲ್ಕು ದಶಕಗಳಿಂದ ಪ್ರೂವ್ ಮಾಡುತ್ತಲೇ ಬಂದಿದ್ದಾರೆ.

ಇವರು ಬೇರಾರೂ ಅಲ್ಲ.... ಎಂಭತ್ತರ ದಶಕದಲ್ಲಿದ್ದ ಇಪ್ಪತ್ತೈದರ ಹರೆಯದ ಅಂದಿಗೂ, ಅರವತ್ತೈದರ ಇಂದಿಗೂ ಕನ್ನಡ ಚಿತ್ರರಂಗದಲ್ಲಿ , ಇದೀಗ ಇತರೆ ಭಾಷೆಗಳಲ್ಲೂ ಅದೇ ಬೇಡಿಕೆಯಲ್ಲಿರುವ ಕ್ರಿಯಾಶೀಲ ನಟ ಕರುನಾಡ ಚಕ್ರವರ್ತಿ, ಹ್ಯಾಟ್ರಿಕ್ ಹೀರೋ ಡಾ. ಶಿವರಾಜ್ ಕುಮಾರ್ ಅರ್ಥಾತ್ ಚಿತ್ರರಂಗದ ನಮ್ಮೆಲ್ಲರ ಮೆಚ್ಚಿನ ಶಿವಣ್ಣ.

ವರನಟ ಡಾ.ರಾಜ್‌ಕುಮಾರ್ ರವರ ಪುತ್ರ ಎಂಬ ಹ್ಯಾಂಗೋವರ್ ನಿಂದಲ್ಲದೇ, ಮೇಲಿನ ಎಲ್ಲಾ ಕೊರತೆಗಳ ನಡುವೆಯೂ ತನ್ನದೇ ಸ್ವಯಂ ಪ್ರತಿಭೆಯಿಂದ ನಿರಂತರವಾಗಿ ನಲವತ್ತು ವರ್ಷಗಳಿಂದಲೂ ಒಬ್ಬ ಮಾಸ್ ಹೀರೋ ಆಗಿ ಶಿವಣ್ಣನನ್ನು ಕರುನಾಡ ಜನ ಒಪ್ಪಿಕೊಂಡಿದ್ದಕ್ಕೆ ಏನು ಕಾರಣ ಎಂಬ ವಿವಿಧ ಆಯಾಮಗಳ ಪ್ರಶ್ನೆಗೆ.......

"ಶಿವಣ್ಣನ ಡೌನ್ ಟು ಅರ್ಥ್ ಸ್ವಭಾವ , ಹಮ್ಮುಬಿಮ್ಮಿಲ್ಲದ ಸರಳತೆ, ಆಲೋಚನೆಯಲ್ಲಾಗಲೀ ಮಾತಿನಲ್ಲಾಗಲೀ ಮನಸಿಗೂ ಬಾಯಿಗೂ ನಡುವೆ ಇಲ್ಲದ ಫಿಲ್ಟರ್ ಹಾಗೂ ಹಣ, ಯಶಸ್ಸು, ಕೀರ್ತಿ ಗಳಲ್ಲಿ ಎಷ್ಟೇ ಎತ್ತರಕ್ಕೇರಿದರೂ ಇದ್ದಲ್ಲಿಯೇ ಸ್ಥಿರವಾಗಿರುವ ತಲೆ ಮತ್ತು ನೆಲಬಿಟ್ಟು ಮೇಲೇಳದ ಅವರ ಕಾಲುಗಳು, ರಾಜವಂಶದ ಮಗನಾದರೂ ಅದರ ಅಮಲು ತಲೆಯೊಳಕ್ಕೆ ಹೊಕ್ಕು ಅಹಂಕಾರವನ್ನು ಅಂಟಿಕೊಳ್ಳದಂತೆ ತೋರುವ ತೀರ ಸರಳ ವರ್ತನೆ, ಏನೇ ಟೀಕೆ ಟಿಪ್ಪಣಿ, ವಿವಾದಗಳಿಂದ ಅವರನ್ನು ಗುರಿಯಾಗಿಸಿ ಸುತ್ತುವರೆಸಿದರೂ ಅವೆಲ್ಲವನ್ನೂ ಮಗುವಿನಂತೆ ತಕ್ಷಣಕ್ಕೇ ಮರೆತು ತನ್ನ ಪಾಡಿಗೆ ತನ್ನ ಕಾಯಕದಲ್ಲಿ ತಲ್ಲೀನನಾಗಿ ಹೊಸತನ್ನು ಸಾಧಿಸುತ್ತಲೇ ಮುನ್ನಡೆಯುತ್ತಿರುವುದೇ.....ನಾಲ್ಕು ಸಾಲುಗಳ ಅರ್ಥಪೂರ್ಣ ಉತ್ತರವಿದ್ದೀತು.!

ಅರವತ್ತೈದರ ಹರೆಯದ ಶಿವಣ್ಣ ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿ ಇಂದಿಗೆ ಭರ್ತಿ 40 ವರ್ಷಗಳು ತುಂಬಿವೆ ಎಂದರೆ ಶಿವಣ್ಣನ ವ್ಯಕ್ತಿತ್ವ ವೆಂಬುದು ಕಾಲದಷ್ಟೇ ವೇಗವಾಗಿ ಪಾದರಸದಂತೆ ಚಲಿಸುತ್ತಿರುವ ಸಂಕೇತದಂತೆ ತೋರುತ್ತಿದೆ. ಡಾ. ರಾಜ್ ಕುಮಾರ್ ಎಂಬ ಕಲಾಶಿಖರದ ಪುತ್ರ ಎಂಬ ಬೃಹತ್ ಇಮೇಜಿನಾಚೆಗೆ ಬೆಳೆದು ಬಂದು, ಅವರ ವ್ಯಕ್ತಿತ್ವದ ಮೌಲ್ಯಗಳನ್ನುಳಿಸಿಕೊಂಡೇ ತನ್ನದೇ ಮ್ಯಾನರಿಸಂ ರೂಢಿಸಿಕೊಂಡ ಪರಿ ಇದೆಯಲ್ಲಾ...ಅದು ಶಿವಣ್ಣನ ಆಲ್‌ಟೈಮ್ ಹಾಲ್‌ಮಾರ್ಕ್.!

1986 ರಲ್ಲಿ ಬಿಡುಗಡೆಯಾದ ಪ್ರಪ್ರಥಮ ಸಿನಿಮಾ "ಆನಂದ್ " ನಲ್ಲಿ ಇಪ್ಪತ್ತನಾಲ್ಕರ ಹರೆಯದ ಶಿವಣ್ಣನ ಟುವ್ವಿ ಟುವ್ವಿ ಹಾಡಿನಲ್ಲಿ ಕಂಗೊಳಿಸಿದ್ದ ಆ ತಾಜಾತನದ ಲವ್ ಲವಿಕೆ ಈ ನಲವತ್ತು ವರ್ಷಗಳಲ್ಲಿ ಸುಮಾರು ನೂರಾ ಮುವ್ವತ್ತು ಸಿನಿಮಾಗಳನ್ನು ಪೂರೈಸಿದ ನಂತರವೂ ಸಹಾ ಅದೇ ಕಲರ್ ಫುಲ್ ಟ್ರ್ಯಾಕಿನಲ್ಲೇ ಮುಂದುವರೆದಿರುವುದು ನಿಜಕ್ಕೂ ಅವರ ಎಂಡ್ ಲೆಸ್ ಎನರ್ಜಿಗೆ ಎಕ್ಸಲೆಂಟ್ ಎಗ್ಸಾಂಪಲ್ಲು..!

ವಾಸ್ತವ ವರ್ತಮಾನ

ಆನಂದ್ , ರಥ ಸಪ್ತಮಿ ಹಾಗೂ ಮನ ಮೆಚ್ಚಿದ ಹುಡುಗಿ ಎಂಬ ಮೊದಲ ಮೂರು ಸಿನಿಮಾಗಳ ಸತತ ಸೂಪರ್ ಡ್ಯೂಪರ್ ಹಿಟ್ ನಿಂದಾಗಿ 'ಹ್ಯಾಟ್ರಿಕ್ ಹೀರೋ" ಎಂಬ ಅಬಿಧಾನವನ್ನು ಶಾಶ್ವತವಾಗಿ ಅಂಟಿಸಿಕೊಂಡೇ ಬಂದಿದ್ದ ಶಿವಣ್ಣ ಅಂದಿನಿಂದ ಇಂದಿನವರೆಗೂ ಪಾತ್ರಗಳ ಆಯ್ಕೆಯಲ್ಲಿ ಪ್ರಯೋಗಶೀಲತೆಯನ್ನು ಕಾಪಾಡಿಕೊಂಡೇ ಬಂದಿರುವುದು ಅವರ ಕ್ರಿಯಾಶೀಲತೆಗೆ , ಸಿನಿಮಾ ಪ್ರೀತಿಗೆ, ಕಾಯಕ ಬದ್ಧತೆಗೆ ಸಾಕ್ಷಿ.

ಪಕ್ಕಾ ಮಾಸ್ ಕಮರ್ಷಿಯಲ್ ಸಿನಿಮಾಗಳ ಜೊತೆ ಜೊತೆಗೆ ತನ್ನ ಹೀರೋ ಇಮೇಜನ್ನೂ ಪಕ್ಕಕ್ಕೆ ಸರಿಸಿ ಅಭಿನಯಿಸಿದ ಶಿವಣ್ಣನ ಸಿನಿಮಾಗಳು ಸಾಕಷ್ಟಿವೆ. ಅವುಗಳಲ್ಲಿ ಕಾದಂಬರಿಯಾಧಾರಿತ, ಪ್ರಯೋಗಾತ್ಮಕ, ಐತಿಹಾಸಿಕ, ಪೌರಾಣಿಕ, ಕಲಾತ್ಮಕ ಹಾಗೂ ವಿಭಿನ್ನ ರೀತಿಯ ಕಥಾ ಹಂದರವಿರುವ ಹಲವು ಸಿನಿಮಾಗಳು ಅವು ಬಾಕ್ಸ್ ಆಫೀಸ್ ದೃಷ್ಟಿಯಿಂದ ಗೆಲ್ಲಲೀ ಸೋಲಲೀ ಶಿವಣ್ಣನನ್ನು ಪರೀಕ್ಷೆಗೆ ಒಡ್ಡಲೆಂದೇ ಅರಸಿ ಬಂದಿದ್ದವು. ಅದು ಲಾಂಗ್ ಹಿಡಿಯುವ ಶೈಲಿಯಾಗಿರಬಹುದು, ಕಣ್ಣಲ್ಲೇ ಅಭಿಯಿಸುವ ಚಾತುರ್ಯವಾಗಿರಬಹುದು ಅಥವಾ ಸಹಜವಾಗಿ ನರ್ತಿಸುವ ಚಾಕಚಕ್ಯತೆಯೂಇದ್ದಿರಬಹುದು ಅಲ್ಲೆಲ್ಲಾ ಶಿವಣ್ಣ ತಮ್ಮ ಸಿಗ್ನೇಚರ್ ಶೈಲಿ ಉಳಿಸಿಕೊಂಡೇ ಬಂದಿದ್ದಾರೆ.

ಹಾಗಾಗಿಯೇ ಓಂ, ಜೋಗಿ, ಡಾನ್, ಶ್ರೀರಾಮ್, ಸಿಂಹದ ಮರಿ, ಎಂ 47, ರಣರಂಗ, ಮೈಲಾರಿ, ಶಿವಲಿಂಗ, ಸಂತ, ಶಿವಸೈನ್ಯ, ಭಜರಂಗಿ, ವಜ್ರಕಾಯ, ಟಗರು, ಮಫ್ತಿ, ಭೈರತಿ ರಣಗಲ್ ನಂತಹ ಮಾಸ್ ಸಿನಿಮಾಗಳಲ್ಲಿ ಮಿಂಚಿದ ಶಿವಣ್ಣ , ಆನಂದ್, ರಥ ಸಪ್ತಮಿ, ಮನಮೆಚ್ಚಿದ ಹುಡುಗಿ, ಹೃದಯ ಹೃದಯ, ಮನಮಿಡಿಯಿತು, ಮಿಡಿದ ಶೃತಿ, ಜನುಮದ ಜೋಡಿ, ನಮ್ಮೂರ ಮಂದಾರ ಹೂವ್ವೇ, ಜೋಡಿಹಕ್ಕಿ, ಮುಂತಾದ ಪ್ರೀತಿಯಾಧಾರಿತ ಹಿಟ್ ಸಿನಿಮಾಗಳನ್ನೂ ಸಲೀಸಾಗಿ ನಟಿಸಿದ್ದರು. ಅದೇ ಶಿವಣ್ಣ.... ಅಮ್ಮಾವ್ರ ಗಂಡ, ಇನ್ಸ್‌ಪೆಕ್ಟರ್ ವಿಕ್ರಂ, ತಮಸ್ಸು, ಮಿ.ಪುಟ್ಟಾಮಿ, ಕವಚ, ಸುಗ್ರೀವ ಸಾರ್ವಭೌಮ, ಸಂತೆಯಲಿ ನಿಂತ ಕಬೀರ , ಚಂದ್ರಹಾಸ ದಂತಹ ಪ್ರಯೋಗಾತ್ಮಕ ಸಿನಿಮಾಗಳಿಗೂ ಕೈ ಹಾಕುವ ಧೈರ್ಯ ತೋರಿದ್ದರು. ಅಲ್ಲದೇ ಹಗಲು ವೇಷ, ದೊರೆ, ಭೂಮಿ ತಾಯಿಯ ಚೊಚ್ಚಲುಮಗ, ಚಿಗುರಿದ ಕನಸು ಗಳಂತಹ ಸಾಮಾಜಿಕ ಪರಿಣಾಮ ಬೀರುವ ಚಿತ್ರಗಳಲ್ಲೂ ಪರಿಣಾಮಕಾರಿಯಾಗಿಯೇ ಅಭಿನಯಿಸಿದ್ದರು. ಗಂಡುಗಲಿ ಕುಮಾರರಾಮ ಶಿವಮೆಚ್ಚಿದ ಕಣ್ಣಪ್ಪ ನಂತಹ ಐತಿಹಾಸಿಕ ಪೌರಾಣಿಕ ಚಿತ್ರಗಳಿಗೆ ಇವರು ಕೈ ಹಾಕಿದ್ದರೂ ಅವುಗಳಿಗೆ ಅಷ್ಟಾಗಿ ಸೂಟ್ ಆಗಿರಲಿಲ್ಲ. ಒಟ್ಟಾರೆಯಾಗಿ ಸೋಲು-ಗೆಲುವಿನ ಗ್ರಾಫ್ ಬಗ್ಗೆ ತಲೆಕೆಡಿಸಿಕೊಳ್ಳದೇ, ಹಳಬರು- ಹೊಸ ನಿರ್ದೇಶಕರೆಂಬ ಬೇಧವಿಲ್ಲದೇ, ಇಮೇಜ್ ಬಗ್ಗೆ ಕ್ಯಾರೇ ಅನ್ನದೇ, ಸಿನಿಮಾರಂಗದ ಎಲ್ಲರಿಗೂ ಬೇಕಾಗಿ ವರ್ಷವಿಡೀ ತಮ್ಮನ್ನು ತಾವು ಬಿಜ಼ಿಯಾಗಿರುವಂತೆ ಇದ್ದ ಪಾದರಸದಂತಹ ವ್ಯಕ್ತಿತ್ವ ಶಿವಣ್ಣನದ್ದು. ಹೀಗಾಗಿಯೇ ಇಂದಿಗೂ ಹೊಸ ನಿರ್ದೇಶಕರ ಹಾಗೂ ಬಜೆಟ್ ನಿರ್ಮಾಪಕರ ಪಾಲಿಗೆ ಶಿವಣ್ಣ ಕಾಸಿಗೆ ಮೋಸವಿಲ್ಲದ ಡಾರ್ಲಿಂಗ್ ಇದ್ದಂತೆ. ಜೊತೆಗೆ ಡಾ. ರಾಜ್‌ಕುಮಾರ್, ಅಂಬರೀಷ್ , ಅನಂತನಾಗ್ , ರವಿಚಂದ್ರನ್, ಉಪೇಂದ್ರ, ಶಶಿಕುಮಾರ್, ಜಗ್ಗೇಶ್, ರಮೇಶ್, ದರ್ಶನ್, ಸುದೀಪ್, ಡಾಲಿ ಧನಂಜಯ್ ರಂತಹ ನಾಯಕರೊಂದಿಗೆ ತೆರೆ ಹಂಚಿಕೊಂಡಿದ್ದ ಶಿವಣ್ಣ ಚಿತ್ರರಂಗದಲ್ಲಿ ಎಲ್ಲರಿಗೂ ಬೇಕಾದ ಸಹೃದಯಿ. ಡಾ. ವಿಷ್ಣುವರ್ಧನ್ ರವರೊಂದಿಗೆ ನಟಿಸಬೇಕಾಗಿದ್ದ ಕೃಷ್ಣಾರ್ಜುನ ಸಿನಿಮಾ ಸೆಟ್ಟೇರದೇ ಇದ್ದದ್ದು ಶಿವಣ್ಣನಲ್ಲಿ ಇಂದಿಗೂ ಉಳಿದ ಕೊರಗು.

ನಲವತ್ತು ವರ್ಷಗಳ ಸಿನಿಜರ್ನಿಯೆಂಬುದು ತಮಗೆ ತೃಪ್ತಿ ಕೊಟ್ಟಿದೆ ಎಂದು ಹೇಳುವ ಶಿವಣ್ಣನನ್ನು ಕನ್ನಡ ಭಾಷೆ ಮಾತ್ರವಲ್ಲದೇ ಇತರೆ ಭಾಷೆಯವರೂ ಇಷ್ಟ ಪಟ್ಟು ತಮ್ಮ ಸಿನಿಮಾಗಳಲ್ಲಿ ಅಭಿನಯಿಸುವಂತೆ ಆಹ್ವಾನಿಸುತ್ತಿದ್ದಾರೆ. ರಜನಿಕಾಂತ್ , ಧನುಷ್, ಬಾಲಕೃಷ್ಣ, ರಾಮ್ ಚರಣ್ , ಶ್ರೀಕಾಂತ್ ಮುಂತಾದವರೊಂದಿಗೆ ತಮಿಳು ತೆಲುಗು ಸಿನಿಮಾಗಳಲ್ಲಿ ನಟಿಸಿರುವ ಶಿವಣ್ಣ ಅನ್ಯ ಭಾಷೆಯವರಿಗೆ ಕನ್ನಡದ ಸಾಂಸ್ಕೃತಿಕ ರಾಯಭಾರಿಯಿದ್ದಂತೆ.

ಕಳೆದ ವರ್ಷ ಮೂತ್ರಕೋಶದ ಕ್ಯಾನ್ಸರ್ ಗೆದ್ದು ಹೊಸ ಹುರುಪಿನಿಂದ ಮತ್ತಷ್ಟು ಲವಲವಿಕೆಯಿಂದ ಹಿರಿತೆರೆ ಕಿರುತೆರೆ ಎರಡರಲ್ಲೂ ಸಿಕ್ಕಾಪಟ್ಟೆ ಬಿಜ಼ಿಯಾಗಿರುವ ಡಾ. ಶಿವರಾಜ್ ಕುಮಾರ್ ಚಿತ್ರರಂಗದಲ್ಲಿ ನಿರಾತಂಕವಾಗಿ ಐವತ್ತು ವರ್ಷಗಳನ್ನು ಪೂರೈಸಿ ಕನ್ನಡ ಚಿತ್ರರಂಗಕ್ಕೆ ಹಿರಿಯಣ್ಣನಂತೆ ಬೆಂಗಾವಲಾಗಿರಲಿ. ಇನ್ನು ಮುಂದಾದರೂ ಹೊಸ ಅಲೆಯ ಸಿನಿಮಾಗಳು, ಪ್ರಯೋಗಾತ್ಮಕ , ಕಾದಂಬರಿ ಆಧಾರಿತ ಸಿನಿಮಾಗಳ ಯುಗ ಮತ್ತೇ ಕನ್ನಡಕ್ಕೆ ಮೂಡಿ ಬರಲಿಕ್ಕೆ ಶಿವಣ್ಣ ಸಾಥ್ ನೀಡಲಿ, ಮಾರ್ಗದರ್ಶನ ಮಾಡಲಿ.

ಶುಭಾಶಯಗಳು ಶಿವಣ್ಣ. ನಿಮ್ಮಲ್ಲಿರುವ ಈ ಅಪರೂಪದ ಎನರ್ಜಿಯ ಜೊತೆಗೆ ನಿಮ್ಮೊಳಗಿನ ಮಗುವಿನಂಥ ಮನಸ್ಸು, ಅಮಾಯಕತೆ, ಹೆಂಗರುಳು....ಕೊನೆಯ ಉಸಿರಿನವರೆಗೂ ಹೀಗೆಯೇ ಇರಲಿ.

**ಮರೆಯುವ ಮುನ್ನ**

ಶಿವಣ್ಣನ ಇಡೀ ಬದುಕಿನಲ್ಲಿ ಇವರು "ಹೀಗಿರಬಾರದಿತ್ತು" ಅಥವಾ "ಹೀಗೆ ಮಾಡಬಾರದಿತ್ತು " ಎಂದೆನಿಸಿರುವುದು ಎರಡು ಮೂರು ವಿಷಯಗಳಲ್ಲಿ. ಒಂದು... ತಮ್ಮ ಪತ್ನಿ ಗೀತಾ ಶಿವರಾಜ್ ಕುಮಾರ್ ರನ್ನು ಯಾರದೋ ಒತ್ತಾಯಕ್ಕೆ ಮಣಿದು ರಾಜಕೀಯಕ್ಕೆ ಸೇರಲು ಒಪ್ಪಿಗೆ ಕೊಟ್ಟು ಎರಡು ಬಾರಿ ಚುನಾವಣೆಗೆ ನಿಲ್ಲಿಸಿ ದೊಡ್ಡ ತಪ್ಪು ಮಾಡಿದ್ದು. ಮತ್ತೊಂದು, ಮನಸಿಗೂ ಬಾಯಿಗೂ ಫಿಲ್ಟರ್ ಇಲ್ಲದಂತೆ ಓಪನ್ನಾಗಿ ಮಾತನಾಡಿ ನಿಷ್ಠುರವಾಗುವ ಜೊತೆಗೆ ಕೆಲವು ನಿರ್ಮಾಪಕರ- ನಿರ್ದೇಶಕರ ಕೆಟ್ಟ ಕತೆಗಳನ್ನೂ ತಮ್ಮ ಅತಿಯಾದ ಒಳ್ಳೆಯತನದಿಂದಾಗಿ ಒಪ್ಪಿ ಸಿನಿಮಾ ಮಾಡಿ ತಮ್ಮಇಮೇಜಿಗೇ ಧಕ್ಕೆ ತಂದುಕೊಂಡಿದ್ದು. ಈ ಬಗ್ಗೆ ಎಚ್ಚರ ಅಗತ್ಯ.

ಇನ್ನೊಂದು ಅತಿ ಮುಖ್ಯವಾಗಿ ಶಿವಣ್ಣನ ಡ್ರೆಸ್ ಸೆನ್ಸ್. ! ಅನೇಕ ಸಾರ್ವಜನಿಕ ಸಮಾರಂಭಗಳಲ್ಲಿ, ಸಿನಿಮಾ ಕಾರ್ಯಕ್ರಮಗಳಲ್ಲಿ ಅಥವಾ ಇನ್ನಾವುದೇ ಫಾರ್ಮಲ್ ಈವೆಂಟುಗಳಲ್ಲಿ ಶಿವಣ್ಣ ಹಾಕುವ ಡ್ರೆಸ್ಸುಗಳು ಅವರ ಇಮೇಜಿಗೆ , ವಯಸ್ಸಿಗೆ ಸರಿ ಹೊಂದದೇ ಇರುವುದೊಂದು ಮೈನಸ್ ಪಾಯಿಂಟು ! ಅಣ್ಣಾವ್ರಂತೆ ಶ್ವೇತವರ್ಣದ ಉಡುಪುಗಳಲ್ಲದಿದ್ದರೂ ಸಾರ್ವಜನಿಕವಾಗಿ ಡೀಸೆಂಟ್ ಡ್ರೆಸ್ ಸೆನ್ಸ್ ಅನ್ನು ಶಿವಣ್ಣ ಅಳವಡಿಸಿಕೊಳ್ಳುವುದು ವಿಹಿತ. ಉದಾಹರಣೆಗೆ ಮನೆಗೆ ಬಂದ ಸಿನಿಮಾರಂಗದ ಸೆಲೆಬ್ರಿಟಿ ಅತಿಥಿಗಳೊಂದಿಗೆ ಶಿವಣ್ಣ ಬರ್ಮುಡಾ, ಟೀ ಷರ್ಟ್ ನಲ್ಲಿ ಕಾಣಿಸಿಕೊಳ್ಳುವುದನ್ನು ಅಥವಾ ರಾಜಕೀಯ ಸಾಂಸ್ಕೃತಿಕ ಸಮಾಭಗಳಲ್ಲಿ ಯಾವುದೋ ಪಟಾಪಟಿ ಪ್ಯಾಂಟು ಟೀಷರ್ಟು ಧರಿಸಿರುವುದನ್ನು ನೋಡಿ ಅರಗಿಸಿಕೊಳ್ಳುವುದು ಕಷ್ಟ. ಬಹುಶಃ ಅದು ಅವರಿಗೆ ಕಂಫರ್ಟ್ ಇರಬಹುದು. ಆದರೆ ಅವರನ್ನು ಇಷ್ಟಪಡುವ ಅಸಂಖ್ಯಾತರಿಗೆ ಕಸಿವಿಸಿಯನ್ನುಂಟು ಮಾಡುವುದರ ಬಗ್ಗೆ ಹಾಗೂ ಆ ಬಗ್ಗೆ ಕೇಳಿಬರಬಹುದಾದ ಕಾಮೆಂಟುಗಳ ಬಗೆಗೂ ಅವರು ಯೋಚಿಸಬೇಕಿದೆ.

ದಿಕ್ಕುತಪ್ಪಿ ಹೋಗುತ್ತಿರುವ ಇಂದಿನ ಕನ್ನಡ ಚಿತ್ರರಂಗಕ್ಕೆ ಮಾರ್ಗದರ್ಶನ ತೋರುವ ಅಣ್ಣನ ಸ್ಥಾನದಲ್ಲಿ ನಿಂತು ಶಿವಣ್ಣ ಗಂಭೀರವಾಗಿ ಯೋಚಿಸಬೇಕಿದೆ. ಅಣ್ಣಾವ್ರ ಕಾಲದ ಸುವರ್ಣಯುಗ ಮತ್ತೇ ಬರದೇ ಹೋದರೂ ಶಿಸ್ತು, ಸಂಯಮ, ಕ್ರಿಯಾಶೀಲತೆ... ಎಲ್ಲವನ್ನೂ ಕಳೆದುಕೊಂಡು ನರಳುತ್ತಿರುವ ಚಿತ್ರರಂಗಕ್ಕೆ ತಮ್ಮ ನಾಲ್ಕು ದಶಕಗಳ ಅನುಭವವನ್ನು ಬಳಸಿ ಎಲ್ಲರನ್ನೂ ಒಟ್ಟಿಗೆ ಕೊಂಡೊಯ್ಯುವ ಮುಂದಾಳತ್ವವನ್ನು ಶಿವಣ್ಣ ವಹಿಸಬೇಕಿದೆ. ಇಲ್ಲಿಯವರೆಗೂ ಕೈಹಿಡಿದು ನಡೆಸಿ ಎಲ್ಲವನ್ನೂ ಕೊಟ್ಟ ಚಿತ್ರರಂಗಕ್ಕೆ ಮರಳಿ ನೀಡಬೇಕಾದದ್ದು ಸಾಕಷ್ಟಿದೆ.

**ಶಿವಣ್ಣ...ಆಬಗ್ಗೆ ಗಂಭೀರವಾಗಿ ಯೋಚಿಸಲಿ.**

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,